23 May 2026 Saturday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**


ಜಗತ್ತಿನಲ್ಲಿ "ಸ್ನೇಹ"ಎನ್ನುವುದು ಒಂದು ಅದ್ಭುತ ಶಕ್ತಿ! ಜಾತಕ,ರಾಶಿ ಯಾವುದೂ ನೋಡದೆ ಮನಸು ಮೆಚ್ಚುವ ಸುಂದರ ಬಾಂಧವ್ಯ!

▸▸ ಸ್ನೇಹಾ ಆನಂದ್

info.varthaman@gmail.com



ಕೊಡುವ ಗುಣ ಬೆಳೆಸಿಕೊಳ್ಳಿ: ಇಂದ್ರೇಶ್ — ಪುಟ ಸಂ. 2



ಗಾಳಿ, ಮಳೆ ವಿದ್ಯುತ್ ಅನಾಹುತ ತಪ್ಪಿಸಲು ಸೆಸ್ಕ್ ಸನ್ನದ್ಧ — ಪುಟ ಸಂ. 4



ಪೃಥ್ವಿ ಜಯಸುಂದರ್ ಗೆ ರೋಟರಿ ಸನ್ಮಾನ — ಪುಟ ಸಂ. 2

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು | ಗ್ರಾಮಾಂತರ ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 178 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# 'ದೆಹಲಿ ಯಾತ್ರೆ'ಗೆ 35 ಶಾಸಕರು ಸಿದ್ಧ

## ಸಚಿವ ಸಂಪುಟ ಪುನರ್ ರಚನೆಗೆ ಆಗ್ರಹ | 'ಮಾಡು ಇಲ್ಲವೇ ಮಡಿ ಪರಿಸ್ಥಿತಿ'

**ಶಿವಮೊಗ್ಗ:** ರಾಜ್ಯದಲ್ಲಿ ಮತ್ತೆ ಸಚಿವ ಸಂಪುಟ ಪುನರ್ ರಚನೆಯ ಕೂಗು ಎದ್ದಿದೆ. 30–35 ಶಾಸಕರು 'ದೆಹಲಿ ಯಾತ್ರೆ'ಗೆ ಸಿದ್ಧವಾಗಿರುವುದಾಗಿ ಕಾಂಗ್ರೆಸ್ ಶಾಸಕ ಬೇಳೂರು ಗೋಪಾಲ ಕೃಷ್ಣ ತಿಳಿಸಿದ್ದಾರೆ.

ಮಾಧ್ಯಮಗಳ ಜೊತೆ ಶುಕ್ರವಾರ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದ ಕನಿಷ್ಠ 30ರಿಂದ 35 ಶಾಸಕರು ಮೇ 28 ಅಥವಾ 29ರೊಳಗೆ ರಾಷ್ಟ್ರ ರಾಜಧಾನಿಗೆ ಪ್ರಯಾಣ ಬೆಳೆಸಲಿದ್ದೇವೆ. ಅವರಲ್ಲಿ ಸುಮಾರು 20 ಜನರಿಗೆ ಸಚಿವ ಸ್ಥಾನ ನೀಡುವಂತೆ ಒತ್ತಾಯಿಸಿ ಸಚಿವ ಸಂಪುಟ ಪುನರ್ ರಚನೆ ಮಾಡುವಂತೆ ಪಕ್ಷದ ನಾಯಕತ್ವದ ಮೇಲೆ ಒತ್ತಡ ಹೇರಲಿದ್ದೇವೆ ಎಂದು ಹೇಳಿದರು.

ರಾಜ್ಯದಲ್ಲಿ ಸರ್ಕಾರ ಅಧಿಕಾರಕ್ಕೆ ಬಂದು ಮೂರು ವರ್ಷಗಳನ್ನು ಪೂರೈಸಿದ 15 ದಿನಗಳ ಒಳಗೆ ಸಂಪುಟ್ ಪುನಾರಚನೆ ನಡೆಯಬೇಕೆಂದು ಒತ್ತಾಯಿಸಿದ ಅವರು, ಸಂಪುಟ ಪುನರ್ ರಚನೆ ನಡೆಯದಿದ್ದರೆ ಮತ್ತು ಹೊಸ ಮುಖಗಳನ್ನು ಸಂಪುಟಕ್ಕೆ ಸೇರಿಸಿಕೊಳ್ಳದಿದ್ದರೆ ಅವರು ಬಲವಾದ ನಿರ್ಧಾರ ತೆಗೆದುಕೊಳ್ಳಬಹುದು ಎಂದು ಈ ಮೂಲಕ ಹೈಕಮಾಂಡ್‌ಗೆ ಎಚ್ಚರಿಕೆ ನೀಡಿದರು.

ಕೇರಳ ಮುಖ್ಯಮಂತ್ರಿ ಆಯ್ಕೆ ನಂತರ ದೆಹಲಿಗೆ ಹೋಗಲು ಮೊದಲೇ ನಿರ್ಧರಿಸಲಾಗಿತ್ತು. ಈಗ ಕೇರಳ ಮುಖ್ಯಮಂತ್ರಿ ಆಯ್ಕೆ ನಡೆದಿದೆ. ನಾವು ಎರಡು–ಮೂರು ದಿನಗಳಲ್ಲಿ ಹಿರಿಯ ಶಾಸಕರು ಸಭೆ ಸೇರುತ್ತೇವೆ. ನಮ್ಮಲ್ಲಿ 30–35 ಶಾಸಕರು ದೆಹಲಿಗೆ ಹೋಗುತ್ತೇವೆ.



ಈ ಬಾರಿ, ಸರ್ಕಾರ ಅಧಿಕಾರ ವಹಿಸಿಕೊಂಡು ಮೂರು ವರ್ಷ ಕಳೆದಿದೆ. ಆದರೆ ಇನ್ನೂ ಯಾರೂ ಸಚಿವ ಸಂಪುಟ ಪುನರ್ ರಚನೆ ಬಗ್ಗೆ ಚರ್ಚಿಸುತ್ತಿಲ್ಲ. ಹೀಗಾಗಿ 'ಮಾಡು ಇಲ್ಲವೇ ಮಡಿ ಪರಿಸ್ಥಿತಿ' ನಮ್ಮಲ್ಲಿದೆ ಎಂದು ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಇತ್ತೀಚೆಗೆ ಸಚಿವ ಸಂಪುಟ ಪುನರ್‌ರಚನೆ ಮಾಡಲಾಗುವುದು. 15 ಹೊಸಬರನ್ನು ಸೇರಿಸಿಕೊಳ್ಳಲಾಗುವುದು ಎಂದು ಹೇಳಿದ್ದರು. ಈಗ ಸಚಿವರಾಗಿರುವವರು ಮೂರು ವರ್ಷ ಅಧಿಕಾರ ಅನುಭವಿಸಿರುವುದರಿಂದ ಹೊಸ 20 ಜನರಿಗೆ ಸಚಿವ ಸ್ಥಾನ ನೀಡುವಂತೆ ನಾವು ವಿನಂತಿಸಿದ್ದೇವೆ. ಆದ್ದರಿಂದ ನಾವು ಮೇ 29ರೊಳಗೆ ದೆಹಲಿಗೆ ಹೋಗಲು ನಿರ್ಧರಿಸಿದ್ದೇವೆ. ಮೊದಲು, ನಮ್ಮಲ್ಲಿ 25 ಜನರು ಹೋಗಿದ್ದರು. ಈಗ ಸಂಖ್ಯೆ ಹೆಚ್ಚಾಗಿದೆ. ಆದ್ದರಿಂದ ನಮ್ಮಲ್ಲಿ ಸುಮಾರು 35 ಜನರು ಹೋಗಬಹುದು ಎಂದು ಅವರು ಹೇಳಿದರು.

ಸಚಿವ ಸ್ಥಾನದ ಆಕಾಂಕ್ಷಿಗಳಾದ ಕೆಲವು ಕಾಂಗ್ರೆಸ್ ಶಾಸಕರು ಈಗಾಗಲೇ ದೆಹಲಿಯಲ್ಲಿದ್ದು, ಪಕ್ಷದ ನಾಯಕತ್ವವನ್ನು ಭೇಟಿ ಮಾಡಲು ಬಂದಿದ್ದಾರೆ ಎನ್ನಲಾಗಿದೆ. ಕಳೆದ ತಿಂಗಳು, ಹಿರಿಯ ಶಾಸಕರ ತಂಡವು ದೆಹಲಿಯಲ್ಲಿ ಪಕ್ಷದ ನಾಯಕತ್ವವನ್ನು ಭೇಟಿ ಮಾಡಿ ಸಚಿವ ಸಂಪುಟ ಪುನರ್ ರಚನೆಗೆ ಒತ್ತಾಯಿಸಿತ್ತು. ಮೊದಲು ಮತ್ತು ಎರಡನೇ ಬಾರಿ ಶಾಸಕರಾಗಿರುವ ಕೆಲವರು ಸಚಿವ ಸ್ಥಾನದ ಆಕಾಂಕ್ಷೆ ವ್ಯಕ್ತಪಡಿಸಿದ್ದಾರೆ.

ಸಿದ್ದರಾಮಯ್ಯ ಸಂಪುಟ ಪುನರ್ ರಚನೆಗೆ ಒಲವು ತೋರಿದರೆ, ಶಿವಕುಮಾರ್ ನಾಯಕತ್ವ ಬದಲಾವಣೆಯ ಬಗ್ಗೆ ಪಕ್ಷ ಮೊದಲು ನಿರ್ಧರಿಸಬೇಕೆಂದು ಒತ್ತಾಯಿಸುತ್ತಿದ್ದಾರೆ.

ಪುಟ 2ಕ್ಕೆ

### ಸಚಿವ ಸ್ಥಾನ ನೀಡದಿದ್ದರೆ 'ಬದಲಾದ ತೀರ್ಮಾನ'

ಈಗ ಇರುವವರೇ ಸಚಿವರಾಗಿ ಮುಂದುವರಿಯಬೇಕು ಎಂದು ಏನೂ ನಿಯಮವಿಲ್ಲ. ನಾವು ಅವರಿಗೆ ಮೂರು ವರ್ಷಗಳ ಕಾಲಾವಕಾಶ ನೀಡಿದ್ದೇವೆ. ಎರಡೂವರೆ ವರ್ಷಕ್ಕಿಂತ ಆರು ತಿಂಗಳು ಹೆಚ್ಚಿಗೆ ಅವರು ಸಚಿವರಾಗಿ ಅವರು ಮುಂದುವರಿದಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಬಲವಾಗಿ ಉಳಿಯಬೇಕಾದರೆ, ಸಚಿವ ಸಂಪುಟವನ್ನು ಪುನರ್ ರಚಿಸುವ ನಿರ್ಧಾರ ತೆಗೆದುಕೊಳ್ಳಬೇಕಾಗಿದೆ ಎಂದು ಶಾಸಕ ಬೇಳೂರು ಗೋಪಾಲ ಕೃಷ್ಣ ಹೇಳಿದರು.

ಮುಖ್ಯಮಂತ್ರಿ ಬದಲಾವಣೆ ವಿಷಯ ಹೈಕಮಾಂಡ್ ನಿರ್ಧಾರಕ್ಕೆ ಬಿಟ್ಟದ್ದು ಎಂದು ಹೇಳಿದ ಅವರು, ನಾವು ನಮ್ಮ ಹಕ್ಕುಗಳನ್ನು ಕೇಳುತ್ತಿದ್ದೇವೆ. ಮುಖ್ಯಮಂತ್ರಿ ಬದಲಾವಣೆ ವಿಷಯಕ್ಕೆ ಸಂಬಂಧಿಸಿದಂತೆ, ನೀವು ನಾಯಕತ್ವವನ್ನು ಕೇಳಬೇಕು ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ನಮಗೆ ಸಂಪುಟ ಪುನರ್ ರಚನೆ ಮಾಡುವ ಮೂಲಕ ಸಚಿವ ಸ್ಥಾನ ನೀಡಬೇಕು. ಇಲ್ಲದಿದ್ದರೆ, ಮುಂದಿನ ದಿನಗಳಲ್ಲಿ ನಾವು ಬಲವಾದ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದು ಹೀಗೆಯೇ ಮುಂದುವರಿಯಲು ನಾವು ಬಿಡುವುದಿಲ್ಲ. 15 ದಿನಗಳಲ್ಲಿ ನಮಗೆ ಅವಕಾಶ

ಪುಟ 2ಕ್ಕೆ

## ಇಬ್ಬರು ಅರಣ್ಯಾಧಿಕಾರಿಗಳ ವಿರುದ್ಧ ಪ್ರಕರಣ ದಾಖಲು

### ದುಬಾರೆ ದುರಂತ: ಉಪ ಲೋಕಾಯುಕ್ತರ ಸ್ವಯಂಪ್ರೇರಿತ ದೂರು

**ಮಡಿಕೇರಿ:** ದುಬಾರೆ ಆನೆ ಕ್ಯಾಂಪ್‌ನಲ್ಲಿ ಪ್ರವಾಸಿ ಮಹಿಳೆ ಹಾಗೂ ಸಾಕಾನೆ ಸಾವನ್ನಪ್ಪಿದ ಪ್ರಕರಣಕ್ಕೆ ಸಂಬಧಿಸಿದಂತೆ ಇಬ್ಬರು ಅರಣ್ಯ ಅಧಿಕಾರಿಗಳ ವಿರುದ್ಧ ಉಪ ಲೋಕಾಯುಕ್ತರು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿದ್ದಾರೆ.

ಸೋಮವಾರಪೇಟೆ ಉಪವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಎ.ಗೋಪಾಲ್ ಹಾಗೂ ಕುಶಾಲನಗರ ಪ್ರಾದೇಶಿಕ ವಲಯದ ಅರಣ್ಯಾಧಿಕಾರಿ ರಕ್ಷಿತ್ ವಿರುದ್ಧ ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಪ್ರಕರಣ ದಾಖಲಿಸಿದ್ದಾರೆ.

ಮೇ.18ರಂದು ದುಬಾರೆ ಸಾಕಾನೆ ಶಿಬಿರದಲ್ಲಿ ಎರಡು ಆನೆಗಳ ನಡುವೆ ನಡೆದ ಕಾದಾಟದ ವೇಳೆ ತಮಿಳುನಾಡಿನ 33 ವರ್ಷದ ಪ್ರವಾಸಿ ಮಹಿಳೆ ಜುನೇಷೆ ಎಸ್ ಮೃತಪಟ್ಟಿದ್ದರು. ಇದೇ ಘಟನೆಯಲ್ಲಿ ಮಾರ್ತಾಂಡ ಎಂಬ ಸಾಕಾನೆ ಕೂಡ ಗಂಭೀರವಾಗಿ ಗಾಯಗೊಂಡು ಸಾವನ್ನಪ್ಪಿತ್ತು.

ಈ ಘಟನೆ ಅರಣ್ಯ ಅಧಿಕಾರಿಗಳ ವೈಫಲ್ಯ ಮತ್ತು ನಿರ್ಲಕ್ಷ್ಯದ ಪರಿಣಾಮವಾಗಿದೆ ಎಂದು ನ್ಯಾಯಮೂರ್ತಿ ಫಣೀಂದ್ರ ಅಭಿಪ್ರಾಯಪಟ್ಟಿದ್ದಾರೆ. ದುಬಾರೆ ಸಾಕಾನೆ ಶಿಬಿರದಲ್ಲಿ ಹಲವು ಗಂಭೀರ ಸಮಸ್ಯೆಗಳಿವೆ. ಅವುಗಳನ್ನು ತಕ್ಷಣ ಪರಿಹರಿಸಬೇಕಿದೆ ಎಂದು ಅವರು ಸೂಚಿಸಿದ್ದಾರೆ.

ಮಾಧ್ಯಮ ವರದಿಗಳನ್ನು ಆಧಾರವನ್ನಾಗಿ ಪಡೆದು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿರುವ ಉಪ ಲೋಕಾಯುಕ್ತರು, ಈ ಘಟನೆ ಜೀವಿಸುವ ಹಕ್ಕಿಗೆ ಸಂಬಂಧಿಸಿದ ಸಂವಿಧಾನದ 21ನೇ ವಿಧಿಯ ಉಲ್ಲಂಘನೆ ಎಂದು ಉಲ್ಲೇಖಿಸಿದ್ದಾರೆ. ಜನರ ಸುರಕ್ಷತೆ ಕಾಪಾಡುವುದು ಅಧಿಕಾರಿಗಳ ಜವಾಬ್ದಾರಿ

ಪುಟ 2ಕ್ಕೆ

## ರಾಜ್ಯಸಭೆ ಚುನಾವಣೆ ಘೋಷಣೆ

### ಮಲ್ಲಿಕಾರ್ಜುನ ಖರ್ಗೆ, ದೇವೇಗೌಡರ ಪುನರ್ ಆಯ್ಕೆ ಸಾಧ್ಯತೆ



**ನವದೆಹಲಿ:** ರಾಜ್ಯದಿಂದ ಆಯ್ಕೆ ಆಗಿರುವ ಮಲ್ಲಿಕಾರ್ಜುನ ಖರ್ಗೆ, ಎಚ್.ಡಿ. ದೇವೇಗೌಡ, ಈರಣ್ಣ ಕಡಾಡಿ, ನಾರಾಯಣ್ ಅವರಿಂದ ತೆರವಾಗಲಿರುವ ನಾಲ್ಕು ಸ್ಥಾನಗಳು ಸೇರಿದಂತೆ ಒಟ್ಟು 10 ರಾಜ್ಯಗಳ 24 ರಾಜ್ಯಸಭಾ ಸ್ಥಾನಗಳಿಗೆ ಚುನಾವಣಾ ದಿನಾಂಕ ಘೋಷಣೆ ಮಾಡಲಾಗಿದೆ.

ಈ ಬಾರಿ ಕರ್ನಾಟಕದಲ್ಲಿ ಕಾಂಗ್ರೆಸ್‌ಗೆ ಮೂರು ಮತ್ತು ಬಿಜೆಪಿಗೆ ಒಂದು ಸ್ಥಾನ ಸಿಗಲಿದೆ. ಕಾಂಗ್ರೆಸ್‌ಗೆ ಸಿಗುವ ಮೂರು ಸ್ಥಾನಗಳ ಪೈಕಿ ಒಂದು ಸ್ಥಾನದಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರನ್ನು ಮುಂದುವರಿಸುವ ಸಾಧ್ಯತೆ ಇದೆ. ಬಾಕಿ ಎರಡು ಸ್ಥಾನಗಳಿಗೆ ಪೈಪೋಟಿ ನಡೆಯಲಿದೆ. ಬಿಜೆಪಿಗೆ ಸಿಗುವ ಒಂದು ಸ್ಥಾನದ ಮೇಲೆ ಜೆಡಿಎಸ್ ಕಣ್ಣಿಟ್ಟಿದೆ. ಎಚ್.ಡಿ.ದೇವೇಗೌಡ ಅವರನ್ನು ಮುಂದುವರಿಸುವ ಬಗ್ಗೆ ಮಾತುಕತೆಗಳು ನಡೆದಿವೆ.

ಚುನಾವಣಾ ಆಯೋಗ ಜೂನ್ 18ರಂದು ಚುನಾವಣೆ ಘೋಷಿಸಿದೆ. ಅದೇ ದಿನ ಫಲಿತಾಂಶ ಹೊರಬೀಳಲಿದೆ. ಜೂನ್ 8ಕ್ಕೆ ನಾಮಪತ್ರ ಸಲ್ಲಿಕೆಗೆ ಕಡೆಯ ದಿನಾಂಕ. ಜೂನ್ 9 ನಾಮಪತ್ರ ಪರಿಶೀಲನೆ, ಜೂನ್ 11 ನಾಮಪತ್ರ ಹಿಂಪಡೆಯಲು ಕಡೆಯ ದಿನವಾಗಿದೆ.

ಭಾರತೀಯ ಚುನಾವಣಾ

ಪುಟ 2ಕ್ಕೆ

# ವೈದ್ಯಕೀಯ ಪ್ರವೇಶ: ಸಿಇಟಿಗೆ ಬಿಡಿ

## ರಾಜ್ಯದ ವಿದ್ಯಾರ್ಥಿಗಳ ಹಿತರಕ್ಷಣೆ: ಸಚಿವ ಗುಂಡೂರಾವ್



**ಮಂಗಳೂರು:** ರಾಷ್ಟ್ರ ಮಟ್ಟದ ಪರೀಕ್ಷೆಯಲ್ಲಿ ಸಾಕಷ್ಟು ಬಾರಿ ಹಗರಣಗಳು ನಡೆದಿವೆ. ನಮ್ಮ ಸಿಇಟಿ ವ್ಯವಸ್ಥೆಯಲ್ಲಿ ಈ ರೀತಿ ತೊಂದರೆ ಆಗಿರಲಿಲ್ಲ. ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ ನೀಟ್ ಬದಲಾಗಿ ಮೊದಲಿನಂತೆ ಸಿಇಟಿ ಪರೀಕ್ಷೆ ನಡೆಯಲಿ. ಪರೀಕ್ಷೆಯನ್ನು ರಾಜ್ಯಕ್ಕೆ ಬಿಟ್ಟು ಬಿಡಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಆಗ್ರಹಿಸಿದರು.

ಮಾಧ್ಯಮ ಪ್ರತಿನಿಧಿಗಳೊಂದಿಗೆ ಶುಕ್ರವಾರ ಮಾತನಾಡಿದ ಅವರು, ನಮ್ಮ

ಪುಟ 2ಕ್ಕೆ

### ಕೇಂದ್ರದಿಂದ ಚುನಾವಣಾ ಆಯೋಗ ದುರುಪಯೋಗ

ಬಿಜೆಪಿ ಚುನಾವಣೆಗಳನ್ನು ಗೆಲ್ಲಲು ಚುನಾವಣಾ ಆಯೋಗವನ್ನು ದುರುಪಯೋಗ ಪಡಿಸಿಕೊಳ್ಳುತ್ತಿದೆ ಎಂದು ಸಚಿವ ದಿನೇಶ್ ಗುಂಡೂರಾವ್ ಆರೋಪಿಸಿದರು.

ಪಶ್ಚಿಮ ಬಂಗಾಳ ಸೇರಿದಂತೆ ದೇಶದ ವಿವಿಧೆಡೆ ನಡೆದ ಚುನಾವಣೆ ವೇಳೆ ಚುನಾವಣಾ ಆಯೋಗದ ನಡೆ ಸಂಶಯಾಸ್ಪದವಾಗಿದೆ. ವಿರೋಧ ಪಕ್ಷಗಳಿಗೆ ಚುನಾವಣಾ ಆಯೋಗದ ಮೇಲೆ ನಂಬಿಕೆ ಹೋಗುವಂತಾಗಿದೆ. ನಿಷ್ಪಕ್ಷಪಾತವಾಗಿ ನಿರ್ವಹಣೆ ಮಾಡುವ ಚುನಾವಣಾ ಆಯೋಗದ ಮೇಲೆ ಈ ಹಿಂದೆ ದೇಶದಲ್ಲಿ ಯಾರಿಗೂ ಸಂಶಯ ಇರಲಿಲ್ಲ. ಆದರೆ ಇಂದು ಪರಿಸ್ಥಿತಿ ಹಾಗಿಲ್ಲ. ಚುನಾವಣೆ ಗೆಲ್ಲಲು ಏನು ಮಾಡಬೇಕೋ ಅದನ್ನು ಬಿಜೆಪಿ ಮಾಡುತ್ತಿದೆ ಎಂದು ಆರೋಪಿಸಿದರು.

ಈಗ ಪಂಜಾಬ್ ಚುನಾವಣೆ ಬಂದಿರುವುದರಿಂದ ಇ.ಡಿ, ಐ.ಟಿ.ಯವರು ಅತ್ತ ಮುಖ ಮಾಡಿದ್ದಾರೆ. ಪಂಜಾಬ್ ಚುನಾವಣೆ ಮುಗಿಯುತ್ತಿದ್ದಂತೆ ಕರ್ನಾಟಕಕ್ಕೆ ಬರುತ್ತಾರೆ. ಇ.ಡಿ, ಐಟಿಯವರು ಬಿಜೆಪಿಗೆ ಸಹಾಯ ಮಾಡುತ್ತಿದ್ದಾರೆ. ಇವರು ಎಲ್ಲಾ ಸಂಸ್ಥೆಗಳನ್ನು ಚುನಾವಣೆ ಗೆಲ್ಲುವುದಕ್ಕೆ ಬಳಸುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಎಸ್'ಐಆರ್ ನಲ್ಲಿ ಇರುವ ವಿಷಯಗಳ ಬಗ್ಗೆ ಹೋರಾಟ ನಡೆಸುವ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಈ ಹಿಂದೆ ಎಸ್'ಐಆರ್ ನಡೆದ ರಾಜ್ಯಗಳಲ್ಲಿ ಮತದಾರರ ಪಟ್ಟಿಯಲ್ಲಿ ಇದ್ದ ಅನೇಕ ಹೆಸರುಗಳನ್ನು ತೆಗೆದು ಹಾಕಲಾಗಿದೆ. ಕಾನೂನಾತ್ಮಕವಾಗಿ

ಪುಟ 2ಕ್ಕೆ

# ಮುಸ್ಲಿಂ ಓಲೈಕೆ: ಕ್ರೈಂಗೆ ಉತ್ತೇಜನ

## ಸಿಎಂ ಸಿದ್ದರಾಮಯ್ಯ ವಿರುದ್ಧ ಯತ್ನಾಳ್ ವಾಗ್ದಾಳಿ

**ವಿಜಯಪುರ:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರದ್ದು ಅತಿರೇಕದ ಆಡಳಿತ ಆಯ್ತು. ಮುಸ್ಲಿಮರ ಓಲೈಕೆ ಈ ಮಟ್ಟಕ್ಕೆ ಮಾಡುತ್ತಿರುವುದು ತಪ್ಪು ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಕಿಡಿಕಾರಿದರು.

ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರು ಮಾಜಿ ಸಂಸದರ ಮೇಲೆ ಕಲ್ಲು ತೂರಾಟ ಮಾಡಿದವರು, ಕೆಜಿ ಹಳ್ಳಿ, ಡಿಜೆ ಹಳ್ಳಿಯಲ್ಲಿ ಗಲಾಟೆ ಮಾಡಿದವರು, ಹುಬ್ಬಳ್ಳಿಯಲ್ಲಿ ಪೊಲೀಸ್ ಠಾಣೆಗೆ ಬೆಂಕಿ ಹಚ್ಚಿದವರ ಕೇಸ್ ಹಿಂಪಡೆದಿದ್ದಾರೆ. ಈಗ ರಾಜ್ಯ ಸರ್ಕಾರ ಲಾಡ್ಲೆ ಮಶಾಕ್ ಕೇಸ್ ಹಿಂಪಡೆದಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇದು ಮತ್ತಷ್ಟು ಕ್ರೈಂಗೆ ಉತ್ತೇಜನ ಕೊಟ್ಟಂತಾಗುತ್ತದೆ. ಇದನ್ನ ವಿರೋಧಿಸಬೇಕಾದ ರಾಜ್ಯ ಬಿಜೆಪಿಯಲ್ಲಿ ನಾಯಕತ್ವದ ಕೊರತೆ ಇದೆ. ವಿಜಯೇಂದ್ರ ಕೂಡ ಅನೇಕ ವಂಚನೆ, ನಕಲಿ ಸಹಿ ಮಾಡಿ ಹಣ ಲೂಟಿ ಹೊಡೆಸಿದ್ದಾನೆ. ಹೀಗಾಗಿ ಇಂತಹ ವಿಷಯಗಳ ಬಗ್ಗೆ ವಿರೋಧ ಮಾಡುವ ನೈತಿಕತೆ ವಿಜಯೇಂದ್ರನಿಗೂ ಇಲ್ಲ ಎಂದು ವಾಗ್ದಾಳಿ ನಡೆಸಿದರು.


ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನದ ಆಯ್ಕೆ ವಿಚಾರಕ್ಕೆ ಪ್ರತಿಕ್ರಿಯಿಸಿ, ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನದ ಆಯ್ಕೆ ಸಮೀಕ್ಷೆಗೆ ಇಬ್ಬರು ಬಂದಿದ್ದಾರೆ. ಅವರಿಬ್ಬರೂ ಪ್ರಾಮಾಣಿಕವಾಗಿ ಸಮೀಕ್ಷೆ ಮಾಡಿ ವರದಿ ಕೊಟ್ಟರೆ ಒಳ್ಳೆಯದಾಗುತ್ತದೆ. ಇಲ್ಲದಿದ್ದರೆ ಮತ್ತೆ ವಿಜಯೇಂದ್ರನನ್ನೇ ಮುಂದುವರೆಸಿದರೆ ಏನೂ ಮಾಡೋಕಾಗಲ್ಲ ಎಂದು ಹೇಳಿದರು.



ರಾಜ್ಯಾಧ್ಯಕ್ಷ ಸ್ಥಾನದ ಬಗ್ಗೆ ಕೇವಲ 37 ಜನರನ್ನ ಮಾತ್ರ ಆಯ್ಕೆ ಮಾಡಿ ಅಭಿಪ್ರಾಯ ಕೇಳಿದರೆ ಹೇಗೆ? ಎಲ್ಲ ಹಾಲಿ, ಮಾಜಿ ಶಾಸಕರು, ಮುಖಂಡರ ಅಭಿಪ್ರಾಯವನ್ನ ಪಡೆಯಬೇಕು. ವಿಜಯೇಂದ್ರ, ಯಡ್ಡಿಯೂರಪ್ಪ

ಪುಟ 2ಕ್ಕೆ


## ನಟಿ ತ್ರಿಶಾ ಶರ್ಮಾ ಸಾವು: 2ನೇ ಮರಣೋತ್ತರ ಪರೀಕ್ಷೆಗೆ ಹೈಕೋರ್ಟ್ ಅನುಮತಿ



**ಮಧ್ಯಪ್ರದೇಶ:** ನಟಿ ಮತ್ತು ಮಾಡೆಲ್ ತ್ರಿಶಾ ಶರ್ಮಾರ ಎರಡನೇ ಮರಣೋತ್ತರ ಪರೀಕ್ಷೆಗೆ ಮಧ್ಯಪ್ರದೇಶ ಹೈಕೋರ್ಟ್ ಅನುಮತಿ ನೀಡಿದೆ. ನೋಯ್ಡಾ ನಿವಾಸಿ ತ್ರಿಶಾ ಮೃತದೇಹ ಕಳೆದ ವಾರ ಪತ್ತೆಯಾಗಿತ್ತು. ವರದಕ್ಷಿಣೆಗಾಗಿ ಕಿರುಕುಳ ನೀಡಿದ್ದು ಮೃತಳ ಕುಟುಂಬ ಆರೋಪಿಸಿದೆ. ತ್ರಿಶಾ ಅವರ

## ಬಡವರ ಮತ ಕಸಿಯಲು ಎಸ್'ಐಆರ್ ಬಳಕೆ: ಡಿಕೆಶಿ

**ಬೆಂಗಳೂರು:** ಬಡವರ ಮತಗಳನ್ನು ಕಸಿಯಲು ಎಸ್'ಐಆರ್ ಮೂಲಕ ಸಂಚು ಮಾಡಲಾಗಿದೆ. ನಾವುಗಳು ಬಹಳ ಎಚ್ಚರಿಕೆಯಿಂದ ಇರಬೇಕು ಎಂದು ನಮ್ಮ ಪಕ್ಷದ ಕಾರ್ಯಕರ್ತರಿಗೆ ಹೇಳಿದ್ದೇನೆಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.



ಸದಾಶಿವನಗರದ ನಿವಾಸದ ಬಳಿ ಶುಕ್ರವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಶಾಸಕರು, ಬಿಎಲ್'ಒಗಳಿಗೆ ಎಸ್‌ಐಆರ್ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದ್ದೇವೆ. ಅದೇ ಕಾರಣಕ್ಕೆ ಸಭೆ ಕರೆಯಲಾಗುತ್ತಿದೆ. ಏಕೆಂದರೆ ಈಗಾಗಲೇ ದಿನಾಂಕ ಘೋಷಣೆಯಾಗಿದೆ. ಪ್ರತಿಯೊಬ್ಬರೂ ಸಹ ಅರ್ಜಿ ಸಲ್ಲಿಸಬೇಕಿದೆ. ಇಲ್ಲದಿದ್ದರೆ ನಾಗರಿಕರು ತಮ್ಮ ಮತವನ್ನು

ಪುಟ 2ಕ್ಕೆ

## ಕಾವೇರಿ ನದಿಯಲ್ಲಿ ಮುಳುಗಿ ಇಬ್ಬರು ಯುವಕರ ಸಾವು

**ಮಂಡ್ಯ:** ಕಾವೇರಿ ನದಿಯಲ್ಲಿ ಈಜಲು ಹೋಗಿದ್ದ ಇಬ್ಬರು ಯುವಕರು ಸಾವನ್ನಪ್ಪಿರುವ ಘಟನೆ ಶ್ರೀರಂಗಪಟ್ಟಣ ತಾಲ್ಲೂಕಿನ ಬಲಮುರಿಯಲ್ಲಿ ನಡೆದಿದೆ.

ಮೈಸೂರಿನ ಬೆಳಗೊಳ ಕೈಗಾರಿಕಾ ಪ್ರದೇಶದಲ್ಲಿರುವ ಕೇನ್ಸ್ ಟೆಕ್ನಾಲಜಿಯಲ್ಲಿ ಕೆಲಸ ಮಾಡುತ್ತಿದ್ದ ಚಾಮರಾಜನಗರದ ಕಮರವಾಡಿ ಗ್ರಾಮದ ಮೋಹನ್ ಕುಮಾರ್ (21) ಹಾಗೂ ಮೈಸೂರು ತಾಲ್ಲೂಕಿನ ಕೆಳಹಳ್ಳಿ ಗ್ರಾಮದ ರವಿಚಂದ್ರ (21) ಸಾವನಪ್ಪಿದ ಯುವಕರು.

ಈ ಇಬ್ಬರೂ ಐಟಿಐ ಮುಗಿಸಿ ಕೇನ್ಸ್ ಟೆಕ್ನಾಲಜಿಯಲ್ಲಿ ಕೆಲಸ ಮಾಡುತ್ತಿದ್ದು, ಮತ್ತೊಬ್ಬ ಸ್ನೇಹಿತ ವಿಕಾಸ್ ಜೊತೆಗೂಡಿ ಮೂವರೂ ಬಲಮುರಿ ಪ್ರವಾಸಿ ತಾಣಕ್ಕೆ ಬಂದಿದ್ದ ವೇಳೆ ದುರ್ಘಟನೆ ನಡೆದಿದೆ.



ನೀರಲ್ಲಿ ಮುಳಗಿರುವ ಬಗ್ಗೆ ವಿಕಾಸ್ ಸಮೀಪದ ಗದ್ದೆಯಲ್ಲಿ ಕೆಲಸ ಮಾಡುತ್ತಿದ್ದ ರೈತರ ಮೂಲಕ ಕೆ.ಆರ್ ಸಾಗರ ಪೊಲೀಸ್ ಠಾಣೆ ಮಾಹಿತಿ ನೀಡಿದ್ದಾರೆ. ವೃತ್ತ ನಿರೀಕ್ಷಕ ವಿವೇಕಾನಂದ, ಪಿಎಸ್‌ಐ ರಮೇಶ್ ಕರ್ಕಿಕಟ್ಟೆ ಮತ್ತು ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ, ಸ್ಥಳಿಯ ನುರಿತ

ಪುಟ 2ಕ್ಕೆ

## ಸಿಬಿಎಸ್'ಇಗೆ ತ್ರಿಭಾಷಾ ಸೂತ್ರ: 'ಸುಪ್ರೀಂ'ಗೆ ವಿದ್ಯಾರ್ಥಿಗಳ ಅರ್ಜಿ

**ನವದೆಹಲಿ:** ಸಿಬಿಎಸ್'ಇ 9ನೇ ತರಗತಿ ವಿದ್ಯಾರ್ಥಿಗಳಿಗೆ ಮೂರು ಭಾಷೆಗಳನ್ನು ಕಡ್ಡಾಯಗೊಳಿಸುವ ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯ ಹೊಸ ನೀತಿಯನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ.

ವಿದ್ಯಾರ್ಥಿಗಳು ಮತ್ತು ಪೋಷಕರು ಸಲ್ಲಿಸಿದ್ದ ಅರ್ಜಿಯನ್ನು ಹಿರಿಯ ವಕೀಲ ಮುಕುಲ್ ರೋಹಟಗಿ ಅವರು ಸಿಜೆಐ ಸೂರ್ಯಕಾಂತ್ ನೇತೃತ್ವದ ತ್ರಿ ಸದಸ್ಯ ಪೀಠದ ಮುಂದೆ ಪ್ರಸ್ತಾಪಿಸಿದರು. 9ನೇ ತರಗತಿಯಲ್ಲಿ ಎರಡು ಹೆಚ್ಚುವರಿ ಭಾಷೆಗಳನ್ನು ಕಲಿಯುವ ಹಠಾತ್ ಅಗತ್ಯ 10ನೇ ತರಗತಿಯ ಬೋರ್ಡ್ ಪರೀಕ್ಷೆಗಳ ತಯಾರಿಗೆ ಅಡ್ಡಿಯಾಗುತ್ತದೆ ಮತ್ತು ವಿದ್ಯಾರ್ಥಿಗಳ ಮೇಲೆ ಅಸಮಂಜಸ ಹೊರೆಯನ್ನು ಹೇರುತ್ತದೆ ಎಂದು ರೋಹಟಗಿ ವಾದಿಸಿದರು.

ಇದ್ದಕ್ಕಿದ್ದಂತೆ ಮತ್ತೆರಡು ಭಾಷೆಗಳನ್ನು ಕಲಿತು 10ನೇ ತರಗತಿಯಲ್ಲಿ ಕಾಣಿಸಿಕೊಳ್ಳುವುದು ಹೇಗೆ? ಇದು ಅವ್ಯವಸ್ಥೆಯನ್ನು ಸೃಷ್ಟಿಸುತ್ತದೆ ಎಂದು ರೋಹಟಗಿ ವಾದಿಸಿದರು. ವಾದ ಆಲಿಸಿದ ಬಳಿಕ ಪೀಠವು, ಮುಂದಿನ ವಾರ ವಿಚಾರಣೆಗೆ ಈ ವಿಷಯವನ್ನು ಪಟ್ಟಿ

ಪುಟ 2ಕ್ಕೆ

# ಡೆಡ್ಲಿ ಎಬೋಲಾ ವೈರಸ್ ಆತಂಕ

## ರಾಜ್ಯಗಳಿಗೆ ಕಟ್ಟೆಚ್ಚರ ವಹಿಸಲು ಕೇಂದ್ರ ಸರ್ಕಾರ ಸೂಚನೆ

**ಬೆಂಗಳೂರು:** ಆಫ್ರಿಕಾದ ಹಲವು ಭಾಗಗಳಲ್ಲಿ ಕೋವಿಡ್‌ಗಿಂತಲೂ ಡೆಡ್ಲಿಯಾದ ಎಬೋಲಾ ವೈರಸ್ ಹಾವಳಿ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ದೇಶದಲ್ಲೂ ಕಟ್ಟೆಚ್ಚರಕ್ಕೆ ಆದೇಶ ನೀಡಲಾಗಿದೆ.

ಈಗಾಗಲೇ ರಾಷ್ಟ್ರ ರಾಜಧಾನಿ ನವದೆಹಲಿಯ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಎಬೋಲಾ ಕುರಿತು ನೀಡಲಾಗಿದೆ. ಹೈರಿಸ್ಕ್ ದೇಶಗಳ ಪ್ರಯಾಣಿಕರಿಗೆ ಹಲವು ಸೂಚನೆಗಳನ್ನ ನೀಡಲಾಗಿದೆ.

ಈ ಹಿನ್ನೆಲೆಯಲ್ಲಿ ದೆಹಲಿಯಲ್ಲಿ ನಡೆಯಬೇಕಾಗಿದ್ದ ಭಾರತ–ಆಫ್ರಿಕಾ ಒಕ್ಕೂಟದ ಶೃಂಗಸಭೆಯನ್ನೂ ಮುಂದೂಡಲಾಗಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಈ ಶೃಂಗಸಭೆಯನ್ನು ಮುಂದೂಡಲಾಗಿದೆ ಎಂದು ವಿದೇಶಾಂಗ ಸಚಿವಾಲಯ ಮಾಹಿತಿ ನೀಡಿದೆ. ಈ ಬೆನ್ನಲ್ಲೇ ಎಲ್ಲಾ ರಾಜ್ಯಗಳು ಕಟ್ಟೆಚ್ಚರ ವಹಿಸುವಂತೆ ಕೇಂದ್ರ ಸರ್ಕಾರ ಸೂಚನೆ ನೀಡಿದೆ. ಎಬೋಲಾ ಮರಣ ಪ್ರಮಾಣ ಸರಾಸರಿ ಶೇ.50 ಎಂದು ಗುರುತಿಸಲಾಗಿದೆ. ಇದು ಕೊರೊನಾಗಿಂತ ಹೆಚ್ಚು ಅಪಾಯಕಾರಿ ಎಂದು ವೈದ್ಯಕೀಯ ಇಲಾಖೆ ತಿಳಿಸಿದೆ.




### ಆರೋಗ್ಯ ಇಲಾಖೆಗೆ ಸೂಚನೆ?

- ಕ್ವಾರಂಟೈನ್ ಸೆಂಟರ್ ಗುರುತು ಮಾಡಿ
- ಐಸೂಲೇಷನ್ ಸೌಲಭ್ಯ ಇರುವ ಕ್ವಾರಂಟೈನ್ ಸೆಂಟರ್
- ಹೆಲ್ತ್ ಸ್ಕ್ರೀನಿಂಗ್ ಗೆ ಸಿಬ್ಬಂದಿಯನ್ನ ಹೆಚ್ಚಳ ಮಾಡಿಕೊಳ್ಳಿ
- ಶಂಕಿತ ಕೇಸ್ ಗಳಿದ್ದರೆ ಆಸ್ಪತ್ರೆಗೆ ರವಾನಿಸಲು ಅಂಬುಲೆನ್ಸ್ ನಿಯೋಜಿಸಿ
- ಎಬೋಲಾ ಚಿಕಿತ್ಸೆ ಬಗ್ಗೆ ಹೆಲ್ತ್ ವರ್ಕರ್ಸ್ ಅರಿವು ಮೂಡಿಸುವಂತೆ ಸೂಚನೆ

# ವಾರಸುದಾರರಿಲ್ಲದ ಭೂಮಿ 'ಸರ್ಕಾರಿ ಮೀಸಲು'

## ಅಕ್ರಮ ಭೂಮಿ ಪರಭಾರೆ ತಡೆಯಲು ಸರ್ಕಾರದ ಮಹತ್ವದ ಆದೇಶ

**ಬೆಂಗಳೂರು:** ರಾಜ್ಯದಲ್ಲಿ ದಿನೇ ದಿನೇ ಹೆಚ್ಚಾಗುತ್ತಿರುವ ಭೂ ಅಕ್ರಮ, ನಕಲಿ ದಾಖಲೆ ಸೃಷ್ಟಿ ಹಾಗೂ ಅಕ್ರಮ ಪಹಣಿ ಬದಲಾವಣೆಗಳಿಗೆ ಕಡಿವಾಣ ಹಾಕಲು ಕಂದಾಯ ಇಲಾಖೆ ಮಹತ್ವದ ನಿರ್ಧಾರ ಕೈಗೊಂಡಿದೆ.

ರಾಜ್ಯದ ಕಂದಾಯ ಆಯುಕ್ತಾಲಯ ಮೇ 20ರಂದು ಅತ್ಯಂತ ಮಹತ್ವದ ಸುತ್ತೋಲೆ ಹೊರಡಿಸಿದೆ. ಯಾವುದೇ ಕಾನೂನುಬದ್ಧ ವಾರಸುದಾರರು ಇಲ್ಲದ ಮೃತ ಭೂಮಾಲೀಕರ ಜಮೀನುಗಳ ದುರುಪಯೋಗವನ್ನು ತಡೆಯಲು ಕಠಿಣ ನಿಯಮಗಳನ್ನು ಜಾರಿಗೆ ತಂದಿದೆ.

ಕಂದಾಯ ಆಯುಕ್ತಾಲಯದ ಭೂಮಿ ಉಸ್ತುವಾರಿ ವಿಭಾಗ ನೀಡಿರುವ ಈ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಹೊಸ ನಿಯಮಾವಳಿಗಳ ಪ್ರಕಾರ, ಸರ್ಕಾರದ ಇ–ಪೌತಿ ತಂತ್ರಾಂಶ ಮತ್ತು ಆಧಾರ್ ಜೋಡಣೆ ಪರಿಶೀಲನೆಯ ಸಂದರ್ಭದಲ್ಲಿ, ಯಾವುದೇ ಒಬ್ಬ ಮೃತ ಜಮೀನು ಮಾಲೀಕನಿಗೆ ಕಾನೂನುಬದ್ಧ ವಾರಸುದಾರರು ಇಲ್ಲ ಎಂಬುದು ಗ್ರಾಮ ಆಡಳಿತಾಧಿಕಾರಿಗಳ ಪರಿಶೀಲನೆಯಲ್ಲಿ ದೃಢಪಟ್ಟರೆ, ಅಂತಹ ಜಮೀನುಗಳನ್ನು ತಂತ್ರಾಂಶದಲ್ಲಿ ಸ್ವಯಂಚಾಲಿತವಾಗಿ ಸರ್ಕಾರಿ ಮೀಸಲು ಎಂದು ದಾಖಲಿಸಲಾಗುತ್ತದೆ.



ಒಮ್ಮೆ ಈ ರೀತಿ ದಾಖಲಾದ ತಕ್ಷಣವೇ, ಆ ಜಮೀನುಗಳ ಖರೀದಿ, ಮಾರಾಟ, ಹಸ್ತಾಂತರ ಅಥವಾ ನೋಂದಣಿಯನ್ನು ಸಂಪೂರ್ಣವಾಗಿ ತಡೆಯುವ ನಿಟ್ಟಿನಲ್ಲಿ ಸರ್ಕಾರದ ಕಾವೇರಿ ತಂತ್ರಾಂಶದಲ್ಲಿ ಆಸ್ತಿಯ ವಹಿವಾಟನ್ನು ಲಾಕ್ ಮಾಡಲಾಗುತ್ತದೆ. ಇದರಿಂದ ಯಾವುದೇ ವ್ಯಕ್ತಿ ಆ ಜಮೀನನ್ನು ಅಕ್ರಮವಾಗಿ ಮಾರಾಟ ಮಾಡಲು ಅಥವಾ ತನ್ನ ಹೆಸರಿಗೆ ವರ್ಗಾಯಿಸಿಕೊಳ್ಳಲು ಸಾಧ್ಯವಾಗುವುದಿಲ್ಲ ಎಂದು ಸೂಚಿಸಲಾಗಿದೆ.

ಹೀಗೆ ವಾರಸುದಾರರಿಲ್ಲದ ಜಮೀನುಗಳ ಪ್ರಕರಣಗಳನ್ನು ಕಂದಾಯ ನ್ಯಾಯಾಲಯ ಪ್ರಕರಣ ನಿರ್ವಹಣಾ ವ್ಯವಸ್ಥೆಯ ಮೂಲಕ ನೇರವಾಗಿ ತಹಶೀಲ್ದಾರ್ ಗ್ರೇಡ್–1 ನ್ಯಾಯಾಲಯಗಳಿಗೆ ವರ್ಗಾಯಿಸಿ, ಅವುಗಳನ್ನು ವಿವಾದಿತ ಪ್ರಕರಣಗಳೆಂದು ಪರಿಗಣಿಸಲಾಗುತ್ತದೆ.

ತಹಶೀಲ್ದಾರರು ಇಂತಹ ಭೂಮಿಯ ಬಗ್ಗೆ ಸಾರ್ವಜನಿಕ ಪ್ರಕಟಣೆ ಅಥವಾ ನೋಟಿಸ್ ಹೊರಡಿಸಿ ಸಮಗ್ರ ತನಿಖೆ ನಡೆಸಲಿದ್ದಾರೆ. ತನಿಖೆಯ ನಂತರವೂ ಯಾವುದೇ ನೈಜ ವಾರಸುದಾರರು ಪತ್ತೆಯಾಗದಿದ್ದಲ್ಲಿ, ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಅಡಿಯಲ್ಲಿ ಆ ಜಮೀನನ್ನು ಸಂಪೂರ್ಣವಾಗಿ ಸರ್ಕಾರ ತನ್ನ ವಶಕ್ಕೆ ತೆಗೆದುಕೊಳ್ಳಲಿದೆ.

ಪುಟ 2ಕ್ಕೆ

## ಮೊದಲನೇ ಪುಟದಿಂದ

### ವಾರಸುದಾರರಿಲ್ಲದ ಭೂಮಿ 'ಸರ್ಕಾರಿ ಮೀಸಲು'

ಒಂದು ವೇಳೆ ಜಮೀನಿನ ಅಸಲಿ ವಾರಸುದಾರರು ತಡವಾಗಿ ಕಂದಾಯ ಅಧಿಕಾರಿಗಳ ಮುಂದೆ ಹಾಜರಾದರೆ, ಅವರು ಸೂಕ್ತ ದಾಖಲೆಗಳನ್ನು ಒದಗಿಸಿ ಸಂಬಂಧಪಟ್ಟ ಉಪವಿಭಾಗಾಧಿಕಾರಿಗಳ ಮೂಲಕ ಸರ್ಕಾರಿ ಮೀಸಲು ಸ್ಥಾನಮಾನವನ್ನು ರದ್ದುಪಡಿಸಿಕೊಂಡು ಜಮೀನನ್ನು ಮರಳಿ ಪಡೆಯಲು ಕಂದಾಯ ಇಲಾಖೆ ಅವಕಾಶ ಕಲ್ಪಿಸಿದೆ.

ರಾಜ್ಯದ ಹಲವು ಜಿಲ್ಲೆಗಳಲ್ಲಿ ಜಮೀನಿನ ಅಸಲಿ ಮಾಲೀಕರು ಅಥವಾ ವಾರಸುದಾರರು ಇಲ್ಲದಿರುವುದನ್ನು ಬಂಡವಾಳ ಮಾಡಿಕೊಳ್ಳುತ್ತಿದ್ದ ಭೂಮಾಫಿಯಾದವರು, ಭ್ರಷ್ಟ ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ನಕಲಿ ದಾಖಲೆಗಳ ಮೂಲಕ ಪಹಣಿಯಲ್ಲಿ ತಮ್ಮ ಹೆಸರು ಸೇರಿಸುತ್ತಿದ್ದರು, ಈ ಬಗ್ಗೆ ಹಲವು ದೂರು ಬಂದ ಹಿನ್ನೆಲೆಯಲ್ಲಿ ಸರ್ಕಾರ ಕಠಿಣ ಕ್ರಮ ಕೈಗೊಂಡಿದೆ. ಸರ್ಕಾರದ ಈ ಹೊಸ ಡಿಜಿಟಲ್ ವ್ಯವಸ್ಥೆ ಮತ್ತು ಕಟ್ಟುನಿಟ್ಟಿನ ನಿಯಮದಿಂದಾಗಿ ಇಂತಹ ಭೂ ಕಬಳಿಕೆ ದಂಧೆಗೆ ಸಂಪೂರ್ಣವಾಗಿ ಬ್ರೇಕ್ ಬೀಳಲಿದೆ ಎನ್ನಲಾಗಿದೆ.

### ಮುಸ್ಲಿಂ ಓಲೈಕೆ: ಕೈಂಗೆ ಉತ್ತೇಜನ

ನಾಲ್ಕು ಜನ ಸ್ವಾಮೀಜಿಗಳನ್ನು ಸಾಕಿದ್ದಾರೆ. ಅವರು ವಿಜಯೇಂದ್ರನನ್ನು ಇಳಿಸಿದರೆ ನಾವು ಲಿಂಗಾಯತರು ಚುನಾವಣೆಯಲ್ಲಿ ಬೆಂಬಲಿಸಲ್ಲ ಅಂತಾ ಅಮಿತ್ ಶಾ ಅವರಿಗೆ ಫೋನ್ ಮಾಡಿಸ್ತಾರೆ. ಅವರ ಮಾತು ಕಟ್ಟಿಕೊಂಡು ಮೋದಿ ಸುಮ್ಮನೆ ಕೂರಬಾರದು ಎಂದು ಆಗ್ರಹಿಸಿದರು.

ಬಿಜೆಪಿ ರಾಜ್ಯ ಪದಾಧಿಕಾರಿಗಳಲ್ಲಿ ಬಹುತೇಕರು ವಿಜಯೇಂದ್ರನ ಚೇಲಾಗಳಿದ್ದಾರೆ. ಹೀಗಾಗಿ ಅವರ ಅಭಿಪ್ರಾಯ ಕೇಳಿದರೆ ವಿಜಯೇಂದ್ರಗೆ ಜೈ ಅಂತಾರೆ ಅಷ್ಟೆ ಎಂದು ವಾಗ್ದಾಳಿ ನಡೆಸಿದರು.

### ಕೇಂದ್ರದಿಂದ ಚುನಾವಣಾ ಆಯೋಗ ದುರುಪಯೋಗ

ಈ ಬಗ್ಗೆ ಹೋರಾಟ ಮಾಡಬೇಕಾಗಿದೆ. ಪಶ್ಚಿಮ ಬಂಗಾಳದಲ್ಲಿ ಸಾಫ್ಟ್‌ವೇರ್ ದುರುಪಯೋಗ ಮಾಡಲಾಗಿತ್ತು. ಯಾರ ಹೆಸರು ತೆಗೆಯಬೇಕೆಂದು ಆ ಸಾಫ್ಟ್‌ವೇರ್ ನಿರ್ಧಾರ ಮಾಡಿತ್ತು. ಎಐ ಬಳಕೆ ಮಾಡಿದ್ದು, ಕರ್ನಾಟಕದಲ್ಲಿ ಆ ರೀತಿ ಆಗದಂತೆ ಎಚ್ಚರ ವಹಿಸಲಾಗುವುದು ಎಂದು ಹೇಳಿದರು.

ಕರ್ನಾಟಕದಲ್ಲಿ ಏನು ತೆಗೆದುಕೊಂಡು ಬರುತ್ತಾರೆ ಎಂದು ಗೊತ್ತಿಲ್ಲ. ಚುನಾವಣಾ ಆಯೋಗಕ್ಕೆ ಸುಪ್ರೀಂ ಪವರ್ ಕೊಟ್ಟಿದೆ. ಚುನಾವಣಾ ಆಯೋಗದ ವಿರುದ್ಧ ಕೋರ್ಟ್‌ನಲ್ಲಿಯು ಪ್ರಶ್ನೆ ಮಾಡುವಂತಿಲ್ಲ. ಅಂತಹ ಕಾನೂನು ತೆಗೆದುಕೊಂಡು ಬಂದಿದ್ದಾರೆ. ಓಪನ್ ಆಗಿ ಪಕ್ಷಪಾತ, ದುರುಪಯೋಗ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಕರ್ನಾಟಕದಲ್ಲಿ ಬಿಜೆಪಿಯವರು ಎಷ್ಟೇ ಭ್ರಷ್ಟರಾಗಿದ್ದರೂ ಅವರನ್ನು ಇಡಿ, ಐಟಿ ಮುಟ್ಟುವುದಿಲ್ಲ. ಚುನಾವಣೆ ಗೆಲ್ಲುವುದೆ ಇವರಿಗೆ ಮುಖ್ಯ ಆಗಿದೆ. ನಮ್ಮ ಪತ್ರಿಕಾ ಸ್ವಾತಂತ್ರ್ಯ 157ನೇ ಸ್ಥಾನದಲ್ಲಿದೆ. ಪಾಕಿಸ್ತಾನಕ್ಕಿಂತ ನಾವು ಹಿಂದೆ ಬಿದ್ದಿದ್ದೇವೆ. ಪ್ರಧಾನಮಂತ್ರಿ, ಅಮಿತ್ ಶಾಗೆ ಒಂದೇ ಒಂದು ಪ್ರಶ್ನೆ ಕೇಳುವ ರೈಟ್ಸ್ ಮಾಧ್ಯಮಗಳಿಗೆ ಇಲ್ಲ ಸಚಿವ ದಿನೇಶ್ ಗುಂಡೂರಾವ್ ಟೀಕಿಸಿದರು.

### ವೈದ್ಯಕೀಯ ಪ್ರವೇಶ: ಸಿಇಟಿಗೆ ಬಿಡಿ

ರಾಜ್ಯದ ಮಕ್ಕಳ ಹಿತರಕ್ಷಣೆ ಕಾಯುವ ಶಕ್ತಿ ನಮಗಿದೆ. ಎಲ್ಲವನ್ನೂ ಯಾಕೆ ಕೇಂದ್ರೀಕೃತ ಮಾಡಬೇಕು. ಪ್ರತಿಯೊಂದಕ್ಕೂ ದೆಹಲಿ ನಿಯಂತ್ರಣ ಯಾಕೆ ಎಂದು ಪ್ರಶ್ನಿಸಿದರು.

### ಕಾವೇರಿ ನದಿಯಲ್ಲಿ ಮುಳುಗಿಬ ಇಬ್ಬರು ಯುವಕರ ಸಾವು

ಈಜುಗಾರರು ಹಾಗೂ ಅಗ್ನಿಶಾಮಕ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಮೋಹನ್ ಕುಮಾರ್, ರವಿಚಂದ್ರ ಅವರ ಶವವನ್ನು ಹೊರತೆಗೆಯಲಾಗಿದೆ. ಈ ಸಂಬಂಧ ಕೆಆರ್‌ಎಸ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಸಿಬಿಎಸ್'ಇಗೆ ತ್ರಿಭಾಷಾ ಸೂತ್ರ: 'ಸುಪ್ರೀಂ'ಗೆ ವಿದ್ಯಾರ್ಥಿಗಳ ಅರ್ಜಿ

ಮಾಡುವುದಾಗಿ ತಿಳಿಸಿದೆ. ತ್ರಿಭಾಷಾ ಸೂತ್ರಕ್ಕೆ ಒತ್ತು ನೀಡುವ ರಾಷ್ಟ್ರೀಯ ಶಿಕ್ಷಣ ನೀತಿ 2020ರಲ್ಲಿ ಇದನ್ನು ಪ್ರಸ್ತಾಪಿಸಲಾಗಿದೆ. ಈ ನೀತಿಯು ವಿದ್ಯಾರ್ಥಿಗಳು ಕನಿಷ್ಠ ಎರಡು ಭಾರತೀಯ ಭಾಷೆಗಳನ್ನು ಒಳಗೊಂಡಂತೆ ಬಹು ಭಾಷೆಗಳನ್ನು ಕಲಿಯಲು ಪ್ರೋತ್ಸಾಹಿಸುತ್ತದೆ. ರಾಜ್ಯಗಳು ಮತ್ತು ಶಾಲೆಗಳಿಗೆ ಆದ್ಯತೆ ಬಿಡಲಾಗಿದೆ.

ವಿದ್ಯಾರ್ಥಿಗಳು 10ನೇ ತರಗತಿಯವರೆಗೆ ಎರಡು ಭಾಷೆಗಳನ್ನು ಅಧ್ಯಯನ ಮಾಡುತ್ತಿದ್ದರು. ಈ ಭಾಷೆಗಳು ಸಾಮಾನ್ಯವಾಗಿ ಇಂಗ್ಲಿಷ್ ಮತ್ತು ಎರಡನೇ ಭಾಷೆ (ಹಿಂದಿ ಅಥವಾ ಪ್ರಾದೇಶಿಕ ಭಾಷೆ) ಆಗಿದ್ದವು. ಈಗ 9ನೇ ತರಗತಿಗೆ ಪ್ರವೇಶಿಸುವ ವಿದ್ಯಾರ್ಥಿಗಳು ಹೆಚ್ಚುವರಿ ಭಾಷೆ ಕಲಿಯಬೇಕಾಗಿದೆ.

### ಸಚಿವ ಸ್ಥಾನ ನೀಡದಿದ್ದರೆ 'ಬದಲಾದ ತೀರ್ಮಾನ'

ನೀಡಬೇಕು. ಇಲ್ಲದಿದ್ದರೆ, ನಮ್ಮ ಮುಂದೆ ಬೇರೆ ಯೋಜನೆಗಳಿವೆ. ನಾವು ಅವುಗಳ ಬಗ್ಗೆ ನಿರ್ಧರಿಸುತ್ತೇವೆ ಎಂದು ಅವರು ಖಡಕ್ ಆಗಿ ಹೇಳಿದರು.

### 'ದೆಹಲಿ ಯಾತ್ರೆ'ಗೆ 35 ಶಾಸಕರು ಸಿದ್ಧ

ಪಕ್ಷದ ಹಲವಾರು ಒಳಗಿನವರ ಪ್ರಕಾರ, ಕಾಂಗ್ರೆಸ್ ಹೈಕಮಾಂಡ್ ಸಂಪುಟ ಪುನರ್ ರಚನೆಯನ್ನು ಅನುಮೋದಿಸಿದರೆ, ಹಾಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಐದು ವರ್ಷಗಳ ಪೂರ್ಣ ಅವಧಿಯನ್ನು ಪೂರ್ಣಗೊಳಿಸುತ್ತಾರೆ. ಇದು ಶಿವಕುಮಾರ್ ಅವರು ಸಿಎಂ ಹುದ್ದೆಯನ್ನು ಅಲಂಕರಿಸುವ ಸಾಧ್ಯತೆಗಳನ್ನು ಕಡಿಮೆ ಮಾಡುತ್ತದೆ.

ರಾಜ್ಯದಲ್ಲಿ ಮುಖ್ಯಮಂತ್ರಿ ಸೇರಿದಂತೆ 34 ಸಚಿವರು ಇದ್ದಾರೆ. ಸದ್ಯ ಮೂರು ಸಚಿವ ಸ್ಥಾನಗಳು ಖಾಲಿ ಇವೆ. ಕರ್ನಾಟಕ ಮಹರ್ಷಿ ವಾಲ್ಮೀಕಿ ಎಸ್‌ಟಿ ಅಭಿವೃದ್ಧಿ ನಿಗಮದಲ್ಲಿ ದುರುಪಯೋಗದ ಆರೋಪದ ಮೇಲೆ ಬಿ ನಾಗೇಂದ್ರ ರಾಜೀನಾಮೆ ನೀಡಿದ್ದರು. ಹೈಕಮಾಂಡ್ ಸೂಚನೆಯ ಮೇರೆಗೆ ಕೆ.ಎನ್ ರಾಜಣ್ಣ ಅವರನ್ನು ವಜಾಗೊಳಿಸಲಾಯಿತು. ಸಚಿವ ಡಿ ಸುಧಾಕರ್ ನಿಧನದಿಂದ ಮೂರನೇ ಹುದ್ದೆ ಖಾಲಿಯಾಗಿದೆ.

### ಬಡವರ ಮತ ಕಸಿಯಲು ಎಸ್'ಐಆರ್ ಬಳಕೆ: ಡಿಕೆಶಿ

ಕಳೆದುಕೊಳ್ಳುತ್ತಾರೆ. ಬೇರೆ ರಾಜ್ಯಗಳಲ್ಲಿ ಇದೇ ರೀತಿ ಆಗಿದ್ದನ್ನು ನೋಡಿದ್ದೇವೆ. ಮತದಾನದ ಹಕ್ಕು ಹೋದರೆ ಪಿಂಚಣಿ, ಗೃಹಲಕ್ಷ್ಮಿ ಯೋಜನೆ ಸೇರಿದಂತೆ ಅನೇಕ ಅನುಕೂಲಗಳಿಂದ ನಾಗರಿಕರು ವಂಚಿತರಾಗುತ್ತಾರೆ ಎಂದು ಡಿಕೆಶಿ ಆತಂಕ ವ್ಯಕ್ತಪಡಿಸಿದರು.

### ರಾಜ್ಯಸಭೆ ಚುನಾವಣೆ ಘೋಷಣೆ

ಆಯೋಗ ಶುಕ್ರವಾರ 24 ರಾಜ್ಯಸಭಾ ಸ್ಥಾನಗಳಿಗೆ ಚುನಾವಣೆ ಘೋಷಿಸಿದೆ. ಪ್ರಸ್ತುತ ರಾಜ್ಯಸಭಾ ಸದಸ್ಯರ ಅವಧಿ ಜೂನ್ 21ರಿಂದ ಜುಲೈ 19ರ ನಡುವೆ ಮುಕ್ತಾಯಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಈ ಸ್ಥಾನಗಳು ಖಾಲಿಯಾಗಲಿವೆ ಎಂದು ಚುನಾವಣಾ ಆಯೋಗದ ಪ್ರಕಟಣೆ ತಿಳಿಸಿದೆ. ಜೊತೆಗೆ ಮಹಾರಾಷ್ಟ್ರ ಮತ್ತು ತಮಿಳುನಾಡಿನಲ್ಲಿ ಎರಡು ಉಪಚುನಾವಣೆಗಳನ್ನೂ ನಡೆಸಲಾಗುವುದು ಎಂದು ತಿಳಿಸಿದೆ.

ಚುನಾವಣೆ ನಡೆಯಲಿರುವ ರಾಜ್ಯಗಳಲ್ಲಿ ಆಂಧ್ರಪ್ರದೇಶ, ಗುಜರಾತ್ ಮತ್ತು ಕರ್ನಾಟಕದಲ್ಲಿ ತಲಾ ನಾಲ್ಕು ಸದಸ್ಯರನ್ನು ಆಯ್ಕೆ ಮಾಡಲಾಗುತ್ತದೆ. ಮಧ್ಯಪ್ರದೇಶ ಮತ್ತು ರಾಜಸ್ಥಾನದಲ್ಲಿ ತಲಾ ಮೂರು ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ಜಾರ್ಖಂಡ್‌ನಲ್ಲಿ ಎರಡು ರಾಜ್ಯಸಭಾ ಸ್ಥಾನಗಳಿಗೆ ಮತದಾನ ನಡೆಯಲಿದ್ದು, ಮಣಿಪುರ, ಮೇಘಾಲಯ, ಅರುಣಾಚಲ ಪ್ರದೇಶ ಮತ್ತು ಮಿಜೋರಾಂ ರಾಜ್ಯಗಳಲ್ಲಿ ತಲಾ ಒಂದು ಸದಸ್ಯರನ್ನು ಆಯ್ಕೆ ಮಾಡಲಾಗುತ್ತದೆ.

### ಇಬ್ಬರು ಅರಣ್ಯಾಧಿಕಾರಿಗಳ ವಿರುದ್ಧ ಪ್ರಕರಣ ದಾಖಲು

ಎಂದು ಸುಪ್ರೀಂ ಕೋರ್ಟ್ ನೀಡಿದ ತೀರ್ಪನ್ನೂ ಅವರು ಪ್ರಸ್ತಾಪಿಸಿದ್ದಾರೆ. ಜೂನ್ 24ರೊಳಗೆ ಸಂಬಂಧಿತ ಅರಣ್ಯ ಅಧಿಕಾರಿಗಳು ವೈಯಕ್ತಿಕವಾಗಿ ತಮ್ಮ ವಿವರಣೆ ಸಲ್ಲಿಸುವಂತೆ ಉಪ ಲೋಕಾಯುಕ್ತ ಆದೇಶ ನೀಡಿದ್ದಾರೆ.

## 24ಕ್ಕೆ ವೀರಶೈವ ಲಿಂಗಾಯತ ಮಹಾಸಭಾ ಚುನಾವಣೆ

**ಮೈಸೂರು:** ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ನಗರ ಪಾಲಿಕೆ ವ್ಯಾಪ್ತಿಯ ಅಧ್ಯಕ್ಷರು ಹಾಗೂ ನಿರ್ದೇಶಕರ ಸ್ಥಾನಕ್ಕಾಗಿನ ಚುನಾವಣೆ ಮೇ24ರಂದು ಬೆಳಗ್ಗೆ 8 ರಿಂದ ಸಂಜೆ 4 ರವರೆಗೆ ಹಾರ್ಡ್ವಿಕ್ ಶಾಲೆಯಲ್ಲಿ ನಡೆಯಲಿದೆ. ಹೀಗಾಗಿ ಮತದಾರರು ತಮ್ಮ ಗುರುತು ಸಾಬೀತು ಪಡಿಸುವ ಯಾವುದಾದರೊಂದು ದಾಖಲೆ ತರಬೇಕೆಂದು ಉಪ ಚುನಾವಣಾಧಿಕಾರಿ ಬಿ.ಆರ್.ರಮಾಕಾಂತ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಸುಮಾರು 3173 ಮತದಾರರಿದ್ದು, ಮತದಾನದ ವೇಳೆ ಆಧಾರ್ ಕಾರ್ಡ್, ಪಾನ್‌ಕಾರ್ಡ್, ಡಿಎಲ್, ಪಡಿತರ ಚೀಟಿ ಮೊದಲಾದವುಗಳಲ್ಲಿ ಯಾವುದಾದರೊಂದು ಗುರುತಿನ ಚೀಟಿ ತಪ್ಪದೇ ತೋರಿಸಬೇಕು. ಮತದಾರರ ಪಟ್ಟಿಯನ್ನು ಜೆಎಸ್‌ಎಸ್ ವಿದ್ಯಾಪೀಠ ಬಳಿಯ ಅಖಿಲ ಭಾರತ ವೀರಶೈವ ಮಹಾಸಭಾದಲ್ಲಿ ಪ್ರಕಟಿಸಲಾಗಿದೆ. ಇನ್ನು, ವಿಜಯೋತ್ಸವಕ್ಕೆ ಅವಕಾಶವಿಲ್ಲವೆಂದರು. ಸಹಾಯಕ ಚುನಾವಣಾಧಿಕಾರಿಗಳಾದ ಆರ್.ನಾಗೇಶ್, ನಾಗಸುಂದರ್ ಇದ್ದರು.



## ಪರಿಸರ ಕಾನೂನು ಕೃತಿ ಬಿಡುಗಡೆ

**ಮೈಸೂರು:** ವಿದ್ಯಾವಿಕಾಸ ಎಜುಕೇಶನಲ್ ಟ್ರಸ್ಟ್ ನ ವಿದ್ಯಾವಿಕಾಸ ಕಾನೂನು ಅಧ್ಯಯನ ಸಂಸ್ಥೆಯಿಂದ "ಮರಳಿ ದ್ವಿಪಕ್ಷೀಯತೆ ಯತ್ತವೆ?" ವಿಷಯದ ಕುರಿತು ಪ್ರೊ.ಡಾ.ಸಿ.ಕೆ.ಎನ್. ರಾಜಾ ತೃತೀಯ ಸ್ಮಾರಕ ಉಪನ್ಯಾಸ ಹಾಗೂ "ಪರಿಸರ ಕಾನೂನು" ಕೃತಿಯ ಬಿಡುಗಡೆ ಕಾರ್ಯಕ್ರಮ ಕಾಲೇಜಿನ ಲಲಿತಾ ಸ್ಮಾರಕ ಭವನದಲ್ಲಿ ನಡೆಯಿತು.

ಬೆಂಗಳೂರಿನ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿಯ ವಿಶ್ರಾಂತ ಕುಲಪತಿ ಪ್ರೊ.ಡಾ.ಎ.ಜಯಗೋವಿಂದ ತಮ್ಮ ಉಪನ್ಯಾಸದಲ್ಲಿ ಜಾಗತಿಕ ರಾಜತಾಂತ್ರಿಕತೆ ಮತ್ತು ಅಂತರರಾಷ್ಟ್ರೀಯ ಸಂಬಂಧಗಳ ಬದಲಾಗುತ್ತಿರುವ ಸ್ವರೂಪವನ್ನು ವಿವರಿಸಿದರು. ಅನೇಕ ರಾಷ್ಟ್ರಗಳು ಬಹುಪಕ್ಷೀಯತ್ತ ಒಲವು ತೋರುತ್ತಿವೆ ಎಂದರು.

ಈ ಸಂದರ್ಭದಲ್ಲಿ ಕಾನೂನು ಕ್ಷೇತ್ರಕ್ಕೆ ಮಹತ್ವದ ಕೊಡುಗೆಯಾದ "ಪರಿಸರ ಕಾನೂನು" ಕೃತಿಯನ್ನು ಬೆಂಗಳೂರಿನ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಡಾ.ಟಿ.ಶ್ಯಾಂಭಟ್ ಬಿಡುಗಡೆ ಮಾಡಿ ಮಾತನಾಡಿ, ಈ ಕೃತಿಯನ್ನು ಅಪಾರ ಹೆಮ್ಮೆಯಿಂದ ಬಿಡುಗಡೆ ಮಾಡಿದ್ದೇನೆ. ಮಾನವ ಹಕ್ಕುಗಳು ಹಾಗೂ



ಪರಿಸರ ಹಕ್ಕುಗಳು ಭಾರತೀಯ ಸಂವಿಧಾನದ 21ನೇ ವಿಧಿಯಡಿ ರಕ್ಷಿಸಲ್ಪಟ್ಟಿವೆ. "ಎಂ.ಸಿ. ಮೇಹತಾ ವಿರುದ್ಧ ಭಾರತ ಒಕ್ಕೂಟ" ಪ್ರಕರಣದಲ್ಲಿ ಸುಪ್ರೀಂ ನ್ಯಾಯಾಲಯವು ಪರಿಸರ ಸಂರಕ್ಷಣೆ ಪ್ರತಿಯೊಬ್ಬ ನಾಗರಿಕನ ಮೂಲಭೂತ ಹಕ್ಕು ಎಂದು ಸ್ಪಷ್ಟಪಡಿಸಿದೆ ಎಂದು ಹೇಳಿದರು.

ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಡಾ.ಪಿ.ಈಶ್ವರ ಭಟ್ ಗೌರವ ಅತಿಥಿಯಾಗಿ ಆಗಮಿಸಿದ್ದರು. ವಿದ್ಯಾ ವಿಕಾಸ್ ಎಜುಕೇಶನಲ್ ಟ್ರಸ್ಟ್ ಕಾರ್ಯದರ್ಶಿ ವಿ.ಕವೀಶ್ ಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪರಿಸರ ಕಾನೂನು ಕೃತಿ ಪ್ರಕಾಶಕ ಪ್ರಾಧ್ಯಾಪಕ ಟಿ.ಆರ್. ಮಾರುತಿ, ಪ್ರೊಫೆಸರ್ ಸಿಕೆಎನ್ ರಾಜ ಕುಟುಂಬಸ್ಥರು ಇದ್ದರು.

# ಕೊಡುವ ಗುಣ ಬೆಳೆಸಿಕೊಳ್ಳಿ: ಇಂದ್ರೇಶ್

**ಉಚ್ಚ ನ್ಯಾಯಾಲಯದ ನ್ಯಾಯಾದೀಶರು ವಿದ್ಯಾರ್ಥಿಗಳಿಗೆ ಸಲಹೆ । ಹಿರಿಯ ವಿದ್ಯಾರ್ಥಿಗಳ ಸನ್ಮಾನ**

**ಮೈಸೂರು:** ವಿದ್ಯಾರ್ಥಿಗಳು ಜೀವನದಲ್ಲಿ ಸಮಾಜಕ್ಕೆ ಎನ್ನಾದರೂ ಕೊಡುವ ಗುಣವನ್ನು ಬೆಳೆಸಿಕೊಳ್ಳಿ ಎಂದು ಉಚ್ಚ ನ್ಯಾಯಾಲಯದ ನ್ಯಾಯಾದೀಶ ಇ.ಎಸ್.ಇಂದ್ರೇಶ್ ಹೇಳಿದರು.

ಶಾರದಾ ವಿಲಾಸ ಕಾನೂನು ಕಾಲೇಜಿನ ಆಂತರಿಕ ಗುಣಮಟ್ಟದ ಭರವಸೆ ಕೋಶವತಿಯಿಂದ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಹಿರಿಯ ವಿದ್ಯಾರ್ಥಿಗಳ ಸನ್ಮಾನ ಸಮಾರಂಭದಲ್ಲಿ ಮಾತನಾಡಿದರು. ಶಾರದಾ ವಿಲಾಸ ಕಾಲೇಜು ದೇಶದಲ್ಲೇ ಅತ್ಯುತ್ತಮ ಶಿಕ್ಷಣ ಸಂಸ್ಥೆ ಆಗಿದೆ. ಕೇಂದ್ರ ಅನೇಕ ಕಡೆಗಳಲ್ಲಿ ಇಲ್ಲಿ ಕಲಿತ ಅನೇಕರು ವಕೀಲರು, ಕಾನೂನು ಸಲಹೆಗಾರರಾಗಿದ್ದಾರೆ. ಇಲ್ಲಿ ಕಲಿತ ಶಿಕ್ಷಣವನ್ನು ಸಮಾಜದಲ್ಲಿ ಹೇಗೆ ಮುನ್ನಲೆಯಲ್ಲಿ ಯಶಸ್ಸು ಸಾಧಿಸಬೇಕೆಂದು ಪಾಠವಾಗಿ ಕಲಿಸಿಕೊಟ್ಟಿದೆ. ಒಬ್ಬ ಮನುಷ್ಯ ಮುಂದೆ ಬರಬೇಕೆಂದರೆ ವ್ಯಕ್ತಿತ್ವ ವಿಕಸನ ಮಾತ್ರವಲ್ಲ. ಸಮಾಜದ ಅನೇಕ ಸ್ಥರಗಳು ಮುಖ್ಯವಾಗುತ್ತದೆ. ಎಷ್ಟೇ ತಪ್ಪು ಮಾಡಿದರೂ ತಾಯಿ ಎಂದಿಗೂ ಮಕ್ಕಳನ್ನು ಬಿಟ್ಟುಕೊಡುವುದಿಲ್ಲ. ಅಂತಹ ತಾಯಿಯೇ ಎಲ್ಲರಿಗೂ ಮೊದಲ ಸ್ಫೂರ್ತಿಯಾಗುತ್ತಾರೆ. ತಾಯಿ ಮಮತೆ, ತಾಳ್ಮೆ



ಎಲ್ಲವನ್ನು ಕಲಿಸಿಕೊಡುತ್ತಾರೆ. ತಂದೆ ಸಹ ತಾಯಿಯಷ್ಟೇ ಪ್ರಾಮುಖ್ಯತೆಯನ್ನು ನಮ್ಮ ಅಭಿವೃದ್ಧಿಯಲ್ಲಿ ಪಾಲುದಾರರಾಗಿದ್ದಾರೆ. ಮನೆಯ ಹೊರಗೆ ಹೇಗಿರಬೇಕೆಂದು ಹೇಳಿಕೊಡುತ್ತಾರೆಂದರು.

ಕುಟುಂಬ, ಸಂಬಂಧಗಳ ಜತೆಗಿದ್ದಾಗ ನೆಮ್ಮದಿ ಸಿಗಲಿದೆ. ನಮ್ಮ ಊರು, ನಮ್ಮ ಜನರಿಗೆ ಸದಾ ನಾವು ಚಿರಋಣಿಯಾಗಿರಬೇಕು. ಕಾಲೇಜು ನಮ್ಮನ್ನು ಬರುವಂತೆ ಕರೆಯಬಾರದು ನಾವೇ ಬರಬೇಕು. ಗುರು ಸ್ಥಾನದಲ್ಲಿರುವವರ ಕೊಡುಗೆಯನ್ನು ಎಂದೆಂದಿಗೂ ಮರೆಯುವಂತಿಲ್ಲ ತಮ್ಮ ಕಾಲೇಜಿನ ದಿನಗಳನ್ನು ಸ್ಮರಿಸಿದರು. ಅಲ್ಲದೆ, ಮಕ್ಕಳೊಟ್ಟಿಗೆ ಮಾತನಾಡಿದರೆ ಮುಗ್ಧತೆ, ಹಿರಿಯರೊಟ್ಟಿಗೆ ಮಾತನಾಡಿದರೆ ನಮ್ಮ ಜ್ಞಾನ ಹೆಚ್ಚಲಿದೆ. ಇಬ್ಬರ ಪ್ರೀತಿ, ವಿಶ್ವಾಸಗಳಿಸಬೇಕಿದೆ ಎಂದು ತಿಳಿಸಿದರು.

ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ಟಿ.ಜಿ. ಶಿವಶಂಕರೇಗೌಡ, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಸಂಸ್ಥೆಯ ಆಡಳಿತ ಮಂಡಳಿ ಸದಸ್ಯ ರಾಮಚಂದ್ರ, ಗೌರವ ಕಾರ್ಯದರ್ಶಿ ಆರ್.ದಿನೇಶ್, ಶಾರದ ವಿಲಾಸ ಕಾಲೇಜು ಪ್ರಾಂಶುಪಾಲೆ ಡಾ.ಎಂ.ದೇವಿಕಾ, ಶಾರದ ವಿಲಾಸ ಕಾನೂನು ಕಾಲೇಜು ಡೀನ್ ಎ.ಎಂ.ಬೊಳಮ್ಮ, ಪ್ರಾಂಶುಪಾಲ ಡಾ.ಬಿ.ಪಿ.ಮಹೇಶ್ ಸೇರಿ ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

### 1ಲಕ್ಷ ದೇಣಿಗೆ ನೀಡಿದ ಲಾಗೈಡ್ ವೆಂಕಟೇಶ್

**ಮೈಸೂರು: ಪ್ರೊ ಸಿ.ಕೆ.ಎನ್ ರಾಜಾ ಹಾಗೂ ಹಿರಿಯ ವಕೀಲರಾದ ದಿವಂಗತ ಕೆ.ಆರ್ ಸುಬ್ಬಕೃಷ್ಣ ಅವರ ಸ್ಮರಣಾರ್ಥ ಲಾಗೈಡ್ ಕನ್ನಡ ಕಾನೂನು ಮಾಸಪತ್ರಿಕೆವತಿಯಿಂದ ಭಾರತದ ಸಂವಿಧಾನ ವಿಷಯದಲ್ಲಿ ಹೆಚ್ಚು ಅಂಕ ಪಡೆದ ಕಾನೂನು ವಿದ್ಯಾರ್ಥಿಗೆ ಪ್ರತಿ ವರ್ಷ ನಗದು ಬಹುಮಾನವನ್ನು ಎಚ್.ಎನ್.ವೆಂಕಟೇಶ್ ಘೋಷಣೆ ಮಾಡಿದರು. 1 ಲಕ್ಷ ಠೇವಣಿ ರೂಪದಲ್ಲಿ ಇಟ್ಟು ಅದರಿಂದ ಪ್ರತಿ ವರ್ಷವೂ ಬರುವ ಹಣವನ್ನು ಭಾರತದ ಸಂವಿಧಾನ ವಿಷಯದಲ್ಲಿ ಹೆಚ್ಚು ಅಂಕ ಪಡೆದ ಕಾನೂನು ವಿದ್ಯಾರ್ಥಿಗೆ ಪ್ರಶಸ್ತಿ ರೂಪದಲ್ಲಿ ನೀಡಲು ತಿಳಿಸಿದರು.**

## ಪೃಥ್ವಿ ಜಯಸುಂದರ್‌ಗೆ ರೋಟರಿ ಸನ್ಮಾನ



**ಮೈಸೂರು:** ಸರಸ್ವತಿಪುರಂ ರೋಟರಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿ, ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 615 ಅಂಕ ಪಡೆದ ಪೃಥ್ವಿ ಜಯಸುಂದರ್ ಅವರನ್ನು ರೋಟರಿ ಪಶ್ಚಿಮವತಿಯಿಂದ ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

ಈ ವೇಳೆ ಅಧ್ಯಕ್ಷ ಡಾ. ರಾಘವೇಂದ್ರ ಪ್ರಸಾದ್ ಮಾತನಾಡಿ, ತಮ್ಮ ಸಂಸ್ಥೆ ಸಮುದಾಯ ಸೇವೆಗೆ ಒತ್ತು ನೀಡಿದೆ. ಸಂಸ್ಥೆ ಅಡಿಯಲ್ಲಿ ಬರುವ ಎರಡು ಶಾಲೆಗಳಲ್ಲಿ ವಾರ್ಷಿಕ ಕೇವಲ 15 ಸಾವಿರ ಶುಲ್ಕದ ಆಧಾರದ ಮೇಲೆ ಲಕ್ಷಾಂತರ ಹಣ ಕಟ್ಟಿಸಿಕೊಳ್ಳುವ ಪ್ರತಿಷ್ಠಿತ ಶಾಲೆಗಳಿಗೆ ಸಮನಾಗಿ ಶಿಕ್ಷಣ ನೀಡಲಾಗುತ್ತಿದೆ. ಪ್ರತಿಷ್ಠಿತ ಶಾಲೆಗಳ ಮಕ್ಕಳೊಡನೆ ಸ್ಪರ್ಧೆ ನೀಡಲು ಸಾಧ್ಯವಿಲ್ಲ ಎಂಬ ಹತಾಶೆಯಲ್ಲಿರುವ ಹಲವಾರು ಮಕ್ಕಳು ತಮ್ಮ ಶಾಲೆಯಲ್ಲಿ ಶಿಕ್ಷಣ ಪಡೆದು ಎಲ್ಲರೊಡನೆ ಸ್ಪರ್ಧೆಯಲ್ಲಿ ಮುಂಚೂಣಿಯಲ್ಲಿದ್ದಾರೆಂದರು. ಪ್ರಾಚಾರ್ಯರಾದ ಪೂರ್ಣಿಮಾ ಅರವಿಂದ್, ಎ.ಪಿ.ನಾಗೇಶ್, ಸಿ.ಆರ್.ಹನುಮಂತು ಇದ್ದರು.

## ನಾರಾಯಣ ಆಸ್ಪತ್ರೆಯಿಂದ ಜೆಇ ಕ್ಯಾನ್ಸರ್ ಘಟಕ ಆರಂಭ

**ಮೈಸೂರು:** ತಮ್ಮ ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಜೀರ್ಣಾಂಗ ಮತ್ತು ಜಿಐ ಕ್ಯಾನ್ಸರ್ ಚಿಕಿತ್ಸೆಗಳಿಗೆ ಸಮಗ್ರ ವಿಭಾಗ ತೆರೆದಿದ್ದು, ಈ ರೀತಿಯ ಅನಾರೋಗ್ಯ ಸಮಸ್ಯೆ ಕಾರಣ ಬೆಂಗಳೂರು ಮೊದಲಾದ ದೊಡ್ಡ ನಗರಗಳಿಗೆ ಹೋಗುವುದರ ಬದಲು ಇಲ್ಲಿಯೇ ಚಿಕಿತ್ಸೆ ಪಡೆಯಬಹುದಾಗಿದೆ ಎಂದು ಆಸ್ಪತ್ರೆಯ ವೈದ್ಯಕೀಯ ಸೇವೆಗಳ ಮುಖ್ಯಸ್ಥ ಡಾ.ಅಶೋಕ್ ತಿಳಿಸಿದರು. ಇದರಿಂದಾಗಿ ರೋಗಿಗಳಿಗೆ ಹಣ, ಸಮಯ ಉಳಿತಾಯದೊಡನೆ ಸಕಾಲಿಕ ಚಿಕಿತ್ಸೆ ದೊರೆಯುವಂತಾಗಿದೆ. ಹೀಗಾಗಿ ನಗರ ಹಾಗೂ ಸುತ್ತಮುತ್ತಲಿನ ಜನತೆ ಇದರ ಪ್ರಯೋಜನ ಪಡೆಯಬಹುದಾಗಿದೆ ಎಂದರು.

ಡಾ.ಅಶೋಕ್, ಡಾ.ನಂದೀಶ್, ಡಾ.ದೇವರಾಜ, ಡಾ.ಆರ್.ಸುಹಾಸ್, ಆರ್.ಮುತ್ತು ಮೊದಲಾದವರು ಇದ್ದರು.



## ಮೊದಲನೇ ಪುಟದಿಂದ

### ನಟಿ ತ್ವಿಶಾ ಶರ್ಮಾ ಸಾವು: 2ನೇ ಮರಣೋತ್ತರ ಪರೀಕ್ಷೆಗೆ ಹೈಕೋರ್ಟ್ ಅನುಮತಿ

ತಂದೆ ನವನಿಧಿ ಶರ್ಮಾ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದು ನ್ಯಾಯಾಲಯ ಅರ್ಜಿಯನ್ನು ಪುರಸ್ಕರಿಸಿದ್ದು ದೆಹಲಿಯ ಏಮ್ಸ್‌ನ ವೈದ್ಯರ ತಂಡಕ್ಕೆ ಮರಣೋತ್ತರ ಪರೀಕ್ಷೆಗೆ ನಡೆಸಲು ಸೂಚಿಸಿದೆ.

ಎರಡು ದಿನಗಳ ಹಿಂದೆ, ಕೆಳ ನ್ಯಾಯಾಲಯವು ಎರಡನೇ ಮರಣೋತ್ತರ ಪರೀಕ್ಷೆಗೆ ಮನವಿ ತಿರಸ್ಕರಿಸಿತ್ತು. ಮೇ 12ರಂದು ಭೋಪಾಲ್‌ನ ಕಟಾರಾ ಹಿಲ್ಸ್ ಪ್ರದೇಶದಲ್ಲಿರುವ ಅವರ ಅತ್ತೆಯ ಮನೆಯಲ್ಲಿ ತ್ವಿಶಾ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದರು. 33 ವರ್ಷದ ಮಾಡೆಲ್ ಮತ್ತು ನಟಿಯ ಕುಟುಂಬವು ಗಂಡನ ಮನೆಯವರು ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿದ್ದಾರೆ. ಮತ್ತೊಂದೆಡೆ ತ್ವಿಶಾ ಮಾದಕ ವ್ಯಸನಿಯಾಗಿದ್ದಳು ಎಂದು ಆಕೆಯ ಅತ್ತೆ ಹೇಳಿಕೊಂಡಿದ್ದಾರೆ. ತ್ವಿಶಾ ಅವರ ಮರಣೋತ್ತರ ಪರೀಕ್ಷೆಯನ್ನು ಭೋಪಾಲ್‌ನ ಏಮ್ಸ್‌ನಲ್ಲಿ ನಡೆಸಲಾಗಿದ್ದರೂ, ಕಾರ್ಯವಿಧಾನದಲ್ಲಿನ ನ್ಯೂನತೆಗಳನ್ನು ಉಲ್ಲೇಖಿಸಿ ಕುಟುಂಬವು ಎರಡನೇ ಮರಣೋತ್ತರ ಪರೀಕ್ಷೆಗೆ ಒತ್ತಾಯಿಸಿತ್ತು.

## ಕ್ಷಯರೋಗದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಕಾರ್ಯಕ್ರಮ

**ಗುಂಡ್ಲುಪೇಟೆ:** ಎನ್‌ಟಿಇಪಿ (NTEP) ಕಾರ್ಯಕ್ರಮದಡಿ ದೊಡ್ಡತುಪ್ಪೂರು ಗ್ರಾಮದಲ್ಲಿ ಕ್ಷಯರೋಗದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು.

ಈ ಅಭಿಯಾನದ ಅಂಗವಾಗಿ ಇಂದು ಗುಂಡ್ಲುಪೇಟೆ ತಾಲ್ಲೂಕಿನ ಬನ್ನಿತಾಳಪುರ ಪಿಎಚ್‌ಸಿ ವ್ಯಾಪ್ತಿಯ ದೊಡ್ಡತೂಪ್ಪೂರು ಗ್ರಾಮದಲ್ಲಿ ವಿಶೇಷ ಆರೋಗ್ಯ ಶಿಬಿರವನ್ನು ಆಯೋಜಿಸಲಾಯಿತು.

ಈ ವೇಳೆ ತಾಲೂಕು ಆರೋಗ್ಯಾಧಿಕಾರಿ ಡಾ. ಅಲೀಂ ಪಾಷಾ ಮಾತನಾಡಿ, ಕ್ಷಯರೋಗ ತಪಾಸಣೆ, ಶೀಘ್ರ ಪತ್ತೆ, ಚಿಕಿತ್ಸೆ ಹಾಗೂ ಸಾರ್ವಜನಿಕರಲ್ಲಿ ಜಾಗೃತಿ



ಮೂಡಿಸುವ ಉದ್ದೇಶದಿಂದ "100 ದಿನಗಳ ಟಿಬಿ ಅಭಿಯಾನ" ಕಾರ್ಯಕ್ರಮವನ್ನು ಮಾರ್ಚ್ 24ರಿಂದ ವಿಶೇಷವಾಗಿ ಹಮ್ಮಿಕೊಳ್ಳಲಾಗಿದೆ.

ಈ ಸಂದರ್ಭದಲ್ಲಿ ಡಾ. ಪುಷ್ಪಲತಾ, ಕಊಅಔ ಮಂಜುಳಾ, ಅಊಔ ಸುಧಾ, ಆಶಾ ಕಾರ್ಯಕರ್ತೆ ವಿಜಯಾ, ದೀಪಾಶ್ರೀ, ವಾಹಿದ್, ಬನ್ನಿತಾಳಪುರ ಪಿಎಚ್‌ಸಿಯ ಸಿಬ್ಬಂದಿಗಳು, ತಾಲ್ಲೂಕು ಐಊಗಿ, ತಾಲ್ಲೂಕು ಆಶಾ ಮೆಂಟರ್, ಸಿಬ್ಬಂದಿಗಳು ಇದ್ದರು.

## ವಿವಿಯಲ್ಲಿನ ಅಕ್ರಮ ತನಿಖೆಗೆ ಕರವೇ ಆಗ್ರಹ



**ಮೈಸೂರು:** ಮೈಸೂರು ವಿಶ್ವ ವಿದ್ಯಾನಿಲಯದಲ್ಲಿ ನಡೆದಿರುವ ಹಾಗೂ ನಡೆಯುತ್ತಿರುವ ಹಗರಣಗಳ ವಿರುದ್ಧ ತನಿಖೆ ನಡೆಸಿ ಕ್ರಮ ಜರುಗಿಸುವಂತೆ ಆಗ್ರಹಿಸಿ ನಗರದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಸಮಿತಿ ಪ್ರತಿಭಟಿಸಿತು.

ನೂತನ ಜಿಲ್ಲಾಧಿಕಾರಿ ಕಚೇರಿ ಎದುರು ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಸಮಿತಿಯ ಅಧ್ಯಕ್ಷ ಪ್ರವೀಣ್ ಕುಮಾರ್ ನೇತೃತ್ವದಲ್ಲಿ ಪ್ರತಿಭಟಿಸಿದ ಕಾರ್ಯಕರ್ತರು ಮೈಸೂರು ವಿವಿ ಹಗರಣಗ ಕುರಿತ ಭಿತ್ತಿಪತ್ರ ಪ್ರದರ್ಶಿಸಿ ನಾನಾ ಘೋಷಣೆಗಳನ್ನು ಕೂಗಿದರು. ಬಳಿಕ ಮಾತನಾಡಿದ ಜಿಲ್ಲಾಧ್ಯಕ್ಷ ಪ್ರವೀಣ್ ಕುಮಾರ್, ಮಹಾರಾಜ ಕಾಲೇಜಿನ 17ಖಾತೆಗಳಿಂದ ಬರೋಬ್ಬರಿ 2ಕೋಟಿ 45ಲಕ್ಷ ರೂ.ಗಳ ಹಣವನ್ನು ಮೈಸೂರು ವಿವಿಯ ಆಡಳಿತ ಮಂಡಳಿ ಗಮನಕ್ಕೂ ತಾರದೇ ಕುಲಪತಿ ಹಾಗೂ ಕುಲಸಚಿವರು ಖರ್ಚು ಮಾಡಿದ್ದಾರೆ. ಟೆಂಡರ್ ಗೆ ಪ್ರಾಂಶುಪಾಲರು ಸಹಿಯಿಲ್ಲದೆ, ಸಿಂಡಿಕೇಟ್ ಸದಸ್ಯರ ಗಮನಕ್ಕೂ ತಾರದೇ ಅಕ್ರಮ ಎಸಗಿದ್ದಾರೆಂದು ದೂರಿದರು.

ಮೌಲ್ಯಭವನದ ಪರಿಕರಗಳ ಸಾಮಾಗ್ರಿಗಳ ಟೆಂಡರ್‌ನಲ್ಲಿ ಕುಲಪತಿಗಳು 4ಕೋಟಿ 96ಲಕ್ಷ ಹಣವನ್ನು ಬಳಕೆ ಮಾಡಿರುವುದನ್ನು ಕುಲಸಚಿವರ ಗಮನಕ್ಕೂ ತಾರದೇ ನಡೆದಿರುವ ನಿಯಬಾಹಿರ ಕ್ರಮವಾಗಿದೆ. ಆನ್‌ಲೈನ್ ಕೋರ್ಸ್‌ಗಳನ್ನು ಖಾಸಗಿ ಟ್ರಸ್ಟ್ ಗೆ ನೀಡುವಲ್ಲಿಯೂ ನಿಯಮ ಬಾಹಿರ ಹಾಗೂ ವಿಶ್ವವಿದ್ಯಾನಿಲಯಕ್ಕೆ ನಷ್ಟ ಉಂಟಾಗಿದ್ದು, ಈ ಸಂಬಂಧ ಸೂಕ್ತ ತನಿಖೆ ನಡೆಸಬೇಕೆಂದು ಜಿಲ್ಲಾಧಿಕಾರಿಗಳ ಮೂಲಕ ರಾಜ್ಯಪಾಲರಿಗೆ ಮನವಿ ಪತ್ರ ಸಲ್ಲಿಸಿರುವುದಾಗಿ ತಿಳಿಸಿದರು.

ಪ್ರವೀಣ್ ಕುಮಾರ್, ಗಾಯಿತ್ರಿ ವಿಜಯೇಂದ್ರ, ಜಿ.ಲೋಕೇಶ್‌ಕುಮಾರ್, ಸುಜಾತ ಷಣ್ಮುಗಂ, ಹೇಮಂತ್‌ಗೌಡ, ಶಿವರಾಜ್, ವಿನಯ್, ದೇಬೂರು ವಿಜಯ, ಪುಷ್ಪಲತಾ, ಮಹೇಶ್, ಸ್ವಾಮಿ, ಅಸ್ಲಾಂ, ವಾಸ್ಸಿಂ, ಲೋಕೇಶ್, ಮಂಜು, ಚಂದ್ರಶೇಖರ್, ಗಜ ಇನ್ನಿತರರು ಉಪಸ್ಥಿತರಿದ್ದರು.

ಕರ್ನಾಟಕ ಸರ್ಕಾರ
**ಕಾರ್ಯಪಾಲಕ ಇಂಜಿನಿಯರ್ ರವರ ಕಾರ್ಯಾಲಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚನ್ನರಾಯಪಟ್ಟಣ**
ಕಛೇರಿ ದೂರವಾಣಿ: 08176-252749
**ಟೆಂಡರ್ ಪ್ರಕಟಣೆ ಸಂಖ್ಯೆ: 06/2026-27 ದಿನಾಂಕ: 21-05-2026**

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚನ್ನರಾಯಪಟ್ಟಣ ವ್ಯಾಪ್ತಿಯ ಅರಸೀಕೆರೆ ತಾಲ್ಲೋಕಿಗೆ 2024-25ನೇ ಸಾಲಿನ ವಿವೇಕ ಶಾಲಾ ಕೊಠಡಿ ನಿರ್ಮಾಣ ಯೋಜನೆಯಡಿ ಅನುಮೋದನೆಯಾಗಿರುವ 1) ಅರಸೀಕೆರೆ ತಾ: ಬೋರೇಹಳ್ಳಿ (ಬಸವನಪುರದ ಹಟ್ಟಿ) ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ, ಜಾಡಘಟ್ಟ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಹಾಗು ರುದ್ರನಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಕೊಠಡಿ ನಿರ್ಮಾಣ ಕಾಮಗಾರಿ RDPR/2026-27/BD/WORK_INDENT26838 ಟೆಂಡರ್ ಮೊತ್ತ ರೂ 35.75 ಲಕ್ಷಗಳಿಗೆ (2) ಚಿಕ್ಕಣ್ಣನಕೊಪ್ಪಲು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಕೊಠಡಿ ನಿರ್ಮಾಣ ಕಾಮಗಾರಿ. RDPR/2026-27/BD/WORK_INDENT26826 ಟೆಂಡರ್ ಮೊತ್ತ ರೂ 11.92 ಲಕ್ಷಗಳಿಗೆ ಲೋಕೋಪಯೋಗಿ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ/ಎನ್ರೋಲ್ ಮಾಡಿಸಿರುವ ಅರ್ಹ ಗುತ್ತಿಗೆದಾರರಿಂದ ಸ್ಪರ್ಧಾತ್ಮಕ ಟೆಂಡರನ್ನು KPPP ಅಂತರ್ಜಾಲದಲ್ಲಿ ದಿನಾಂಕ: 06-06-2026ರ ಸಂಜೆ 5.00ಘಂಟೆಯವರೆಗೆ ಟೆಂಡರನ್ನು (EXCLUDING GST) ನಿಗಧಿತ ನಮೂನೆಗಳನ್ನು HTTPS://KPPP.KARNATAKA.GOV.IN/KPPP ನಲ್ಲಿ ಡೌನ್ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗಧಿತ ಇ.ಎಂ.ಡಿ.ಯೊಂದಿಗೆ ದಿನಾಂಕ: 06-06-2026ರ ಸಂಜೆ 5.00 ಗಂಟೆಯೊಳಗೆ ಅಪ್ಲೋಡ್ ಮಾಡತಕ್ಕದ್ದು. ದಿನಾಂಕ 05-06-2026ರವರೆಗೆ ಗುತ್ತಿಗೆದಾರರು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿನಾಂಕ: 08-06-2026ರಂದು ಬೆಳಿಗ್ಗೆ 11.00 ಗಂಟೆಯ ನಂತರ ಗುತ್ತಿಗೆದಾರರ ಬಿಡ್ಡನ್ನು ತೆರೆಯಲಾಗುವುದು. ಕಾಮಗಾರಿಗಳ ವಿವರಗಳು KPPP ಅಂತರ್ಜಾಲದಲ್ಲಿ ಲಭ್ಯವಿರುತ್ತವೆ. ಕ್ರ.ಸಂ (2)ರ ಕಾಮಗಾರಿಯನ್ನು ಪರಿಶಿಷ್ಟ ಪಂಗಡಕ್ಕೆ ಸೇರಿದ ಗುತ್ತಿಗೆದಾರರಿಗೆ ಮೀಸಲಿರಿಸಲಾಗಿದೆ. ಸದರಿ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಒಂದು ವೇಳೆ ಏನಾದರೂ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್ಲೋಡ್ ಮಾಡಲಾಗುವುದು ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/-ಕಾರ್ಯಪಾಲಕ ಇಂಜಿನಿಯರ್,
ಪ.ರಾಜ್. ಇಂ.ವಿಭಾಗ, ಚನ್ನರಾಯಪಟ್ಟಣ.

ವಾಸಾಸಂಇ/ಹಿಸನಿ/ಹಾಸನ/162/ಕೆಎಸ್‌ಎಂಸಿಎ/2026-27

ಕರ್ನಾಟಕ ಸರ್ಕಾರ

# ಗ್ಯಾರಂಟಿ ಹಬ್ಬ

## 4ನೇ ವರ್ಷಕ್ಕೆ ಪಾದಾರ್ಪಣೆ

ಶಕ್ತಿ ಯೋಜನೆಗಾಗಿ

**₹18,943 ಕೋಟಿ**

ಅನುದಾನವನ್ನು ಈವರೆಗೆ ವಿನಿಯೋಗಿಸಲಾಗಿದ್ದು, ಉಚಿತ ಪ್ರಯಾಣದ ಮೂಲಕ ಮಹಿಳೆಯರು ಬದುಕನ್ನು ಕಟ್ಟಿಕೊಳ್ಳುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯ**
ಸನ್ಮಾನ್ಯ ಮುಖ್ಯಮಂತ್ರಿಗಳು





ಶಕ್ತಿ ಯೋಜನೆಯಡಿ

**726 ಕೋಟಿ**

ಉಚಿತ ಟಿಕೆಟ್‌ಗಳನ್ನು ವಿತರಿಸಲಾಗಿದ್ದು, ನಾಡಿನಾದ್ಯಂತ ಮಹಿಳೆಯರು ಸ್ವತಂತ್ರವಾಗಿ ಸಂಚರಿಸುತ್ತಿದ್ದಾರೆ.

**ಶ್ರೀ ಡಿ ಕೆ ಶಿವಕುಮಾರ್**
ಮಾನ್ಯ ಉಪ ಮುಖ್ಯಮಂತ್ರಿಗಳು



ವಾಕರಸಾಸಂ ಹುಬ್ಬಳ್ಳಿ
ಗ್ರಾಮಾಂತರ ಘಟಕ 01
No: 0005002 14/05/26 20:23:26
EXPRESS KA25F3020
ಮಹಿಳೆಯರ ಉಚಿತ ಟಿಕೆಟ
0 -- ಬೆಂಗಳೂರು
HUBLI N/S to BANGALORE
(TOLL: 73.00 ARF: 2.00)
FULL : 1 * 565.00 = ₹. 565.00
ಮೊತ್ತ: ರೂ. = 0.00
835680 A11435 D07298 11028658 102
www.nwkrtc.in

## ಶಕ್ತಿ

ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ **ಉಚಿತ ಪ್ರಯಾಣ**

ಕರ್ನಾಟಕದ ಗ್ಯಾರಂಟಿ ಸರ್ಕಾರವು ಕಳೆದ ಮೂರು ವರ್ಷಗಳಿಂದ ರಾಜ್ಯಾದ್ಯಂತ ಮಹಿಳೆಯರಿಗೆ ಉಚಿತ ಪ್ರಯಾಣದ ಸೌಲಭ್ಯ ನೀಡುವ ಮೂಲಕ ಅವರ ಓಡಾಟಕ್ಕೆ ವೇಗ ನೀಡಿ, ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆಗೆ ನಾಂದಿ ಹಾಡಿದೆ

'ಶಕ್ತಿ'ಯಿಂದಾಗಿರುವ ಬದಲಾವಣೆ ತಿಳಿಯಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ



ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಹಾಗೂ ಮಾನ್ಯ ಸಚಿವರಾದ ಶ್ರೀ ರಾಮಲಿಂಗಾರೆಡ್ಡಿ ಅವರು ಮಹಿಳೆಗೆ ಶಕ್ತಿ ಯೋಜನೆಯಡಿ ಉಚಿತ ಬಸ್ ಪ್ರಯಾಣದ ಮೊದಲ ಟಿಕೆಟ್ ವಿತರಿಸುತ್ತಿರುವುದು

ಅನ್ನಭಾಗ್ಯ | ಗೃಹ ಜ್ಯೋತಿ | ಗೃಹಲಕ್ಷ್ಮಿ | ಯುವನಿಧಿ

"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"

CMofKarnataka https://dipr.karnataka.gov.in/ ಕರ್ನಾಟಕ ವಾರ್ತೆ

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗ / ಬ್ರಾಹ್ಮಣ ಸಮುದಾಯಗಳ ಮಾಲೀಕತ್ವ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು

## ಮೆಟ್ರಿಕ್ ಪೂರ್ವ/ನಂತರದ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕಾಗಿ ಆನ್‌ಲೈನ್ ಅರ್ಜಿ ಆಹ್ವಾನ

**ತುಮಕೂರು:** ಮಧುಗಿರಿ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿರುವ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರ(ಪಿ.ಯು.ಸಿ. ಕೋರ್ಸ್ ವಿದ್ಯಾರ್ಥಿಗಳಿಗೆ ಮಾತ್ರ) ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸುವ ಪ್ರವರ್ಗ–1, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವಿದ್ಯಾರ್ಥಿಯ ಕುಟುಂಬದ ವಾರ್ಷಿಕ ವರಮಾನ 2.50ಲಕ್ಷ ಹಾಗೂ ಪ್ರವರ್ಗ–2ಎ, 2ಬಿ, 3ಎ, 3ಬಿ ವಿದ್ಯಾರ್ಥಿಯ ಕುಟುಂಬದ ವಾರ್ಷಿಕ ವರಮಾನ 1 ಲಕ್ಷ ರೂ. ಮಿತಿಯೊಳಗಿರಬೇಕು. ಅರ್ಹ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳು ಜೂನ್ 8ರೊಳಗಾಗಿ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿಗಳು ಜೂನ್ 15ರೊಳಗಾಗಿ ತಮ್ಮ ಅರ್ಜಿಯನ್ನು ಜಾಲತಾಣ: https://shp.karnataka.gov.in/bcwd ಮೂಲಕ ಸಲ್ಲಿಸಬಹುದಾಗಿದೆ.

ತಾಲ್ಲೂಕುವಾರು ವಿದ್ಯಾರ್ಥಿ ನಿಲಯಗಳ ವಿವರ, ವಿದ್ಯಾರ್ಥಿ ನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ, ಮತ್ತಿತರ ಹೆಚ್ಚಿನ ಮಾಹಿತಿಗಾಗಿ ಜಾಲತಾಣ: https://bcwd.karnataka.gov.in/ ಅನ್ನು ಸಂಪರ್ಕಿಸಬಹುದಾಗಿದೆ. ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ ವಿ–ಅಂಚೆ: bcwdhelpline@gmail.com ಮೂಲಕ ಅಥವಾ ಜಿಲ್ಲಾ/ ತಾಲ್ಲೂಕು ಮಟ್ಟದ ಇಲಾಖಾಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂ. ವಾ.ಸಂ.08137–282032 ಅಥವಾ ಸಹಾಯವಾಣಿ ಸಂಖ್ಯೆ: 9902258295ನ್ನು ಸಂಪರ್ಕಿಸಬಹುದಾಗಿದೆ ಎಂದು ಮಧುಗಿರಿ ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ.

## ಮೇ 26ರಂದು ಕೌನ್ಸಿಲಿಂಗ್

**ತುಮಕೂರು:** 2026–27ನೇ ಸಾಲಿನಲ್ಲಿ ತುಮಕೂರು ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಕಾರ್ಯ ನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವಿವಿಧ ಪದವಿ ಪೂರ್ವ ಕಾಲೇಜುಗಳ ಪ್ರಥಮ ಪದವಿ ಪೂರ್ವ ಕಾಲೇಜುಗಳಿಗೆ ಪ್ರಥಮ ಪಿ.ಯು.ಸಿ. ತರಗತಿ ಪ್ರವೇಶಕ್ಕೆ ಸೇವಾ ಸಿಂಧು ಪೋರ್ಟಲ್‌ನಲ್ಲಿ ಈಗಾಗಲೇ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಮೇ 26ರಂದು ಅರ್ಜಿ ಸಲ್ಲಿಸಿ ಆಯ್ಕೆಯಾದ ವಿದ್ಯಾರ್ಥಿಗಳ ಕೌನ್ಸಿಲಿಂಗ್ ನಡೆಯಲಿದೆ.

ಮೇ 26ರಂದು ಬೆಳಿಗ್ಗೆ 10.30 ಗಂಟೆಗೆ ಅಲ್ಪಸಂಖ್ಯಾತರ ಮೌಲಾನಾ ಆಜಾದ್ ಮಾದರಿ ಶಾಲೆ, ಗುಂಚಿ ಚೌಕ, ತುಮಕೂರು, ತುಮಕೂರು ಟೌನ್ ಇಲ್ಲಿ ಕೌನ್ಸಿಲಿಂಗ್ ನಡೆಯಲಿದ್ದು, ಹೆಚ್ಚಿನ ಮಾಹಿತಿಗಾಗಿ ದೂ. ವಾ.ಸಂ. 0816–2273724ನ್ನು ಸಂಪರ್ಕಿಸಬೇಕೆಂದು ಇಲಾಖೆಯ ಜಿಲ್ಲಾ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪದ್ಮ ಶ್ರೇಣಿಯ ಪ್ರಶಸ್ತಿಗೆ ಅರ್ಜಿ ಆಹ್ವಾನ

**ತುಮಕೂರು:** ಕೇಂದ್ರ ಸರ್ಕಾರದ ವತಿಯಿಂದ ಕಲೆ, ಸಮಾಜಕಾರ್ಯ, ಸಾರ್ವಜನಿಕ ವ್ಯವಹಾರ, ವಿಜ್ಞಾನ, ತಾಂತ್ರಿಕ, ತಂತ್ರಜ್ಞಾನ, ವ್ಯಾಪಾರ ಮತ್ತು ಕೈಗಾರಿಕೆ, ವೈದ್ಯಕೀಯ, ಸಾಹಿತ್ಯ ಮತ್ತು ಶಿಕ್ಷಣ, ನಾಗರೀಕ ಸೇವೆ, ಕ್ರೀಡೆ, ಅಥ್ಲೆಟಿಕ್ ಹಾಗೂ ಇತರೆ ಕ್ಷೇತ್ರಗಳಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿರುವ ಮಹನೀಯರಿಗೆ 2027ನೇ ಸಾಲಿನ ಪದ್ಮ ಶ್ರೇಣಿಯ ಪ್ರಶಸ್ತಿಗಳಾದ ಪದ್ಮಭೂಷಣ, ಪದ್ಮವಿಭೂಷಣ ಹಾಗೂ ಪದ್ಮಶ್ರೀ ಪ್ರಶಸ್ತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ಭರ್ತಿ ಮಾಡಿದ ನಿಗದಿತ ಅರ್ಜಿಯನ್ನು ಜೂನ್ 8ರೊಳಗಾಗಿ ಸಲ್ಲಿಸಬೇಕು. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಡಾ: ಗುಬ್ಬಿ ವೀರಣ್ಣ ಕಲಾಕ್ಷೇತ್ರದ ಹತ್ತಿರ, ತುಮಕೂರು, ದೂ.ವಾ.ಸಂ. 0816–2275204ನ್ನು ಸಂಪರ್ಕಿಸಬೇಕೆಂದು ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

## ಪುಸ್ತಕ ಖರೀದಿಸಲು ಅರ್ಜಿ ಆಹ್ವಾನ

**ತುಮಕೂರು:** ಸಾರ್ವಜನಿಕ ಗ್ರಂಥಾಲಯ ಇಲಾಖೆಯ ತುಮಕೂರು ನಗರ ಕೇಂದ್ರ ಗ್ರಂಥಾಲಯಕ್ಕೆ ತುಮಕೂರು ಜಿಲ್ಲೆಯ ಸ್ಥಳೀಯ ಲೇಖಕರಿಂದ 2025 ಮತ್ತು 2026ನೇ ಸಾಲಿನಲ್ಲಿ ಪ್ರಥಮವಾಗಿ ಮುದ್ರಣಗೊಂಡ ಪುಸ್ತಕಗಳನ್ನು ಖರೀದಿಸಲು ಅರ್ಜಿ ಆಹ್ವಾನಿಸಲಾಗಿದೆ.

ಪುಸ್ತಕ ಸರಬರಾಜು ಮಾಡಲಿಚ್ಛಿಸುವವರು ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರು, ನಗರ ಕೇಂದ್ರ ಗ್ರಂಥಾಲಯ, ಬಿ.ಜಿ.ಎಸ್. ಸರ್ಕಲ್, ಬಿ.ಹೆಚ್. ರಸ್ತೆ, ತುಮಕೂರು ಇವರನ್ನು ಸಂಪರ್ಕಿಸಬೇಕೆಂದು ಪ್ರಕಟಣೆ ತಿಳಿಸಿದೆ.

## ಅರ್ಜಿ ಆಹ್ವಾನ

**ಶಿವಮೊಗ್ಗ:** ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 2026–27 ನೇ ಸಾಲಿನ ಮೆಟ್ರಿಕ್ ನಂತರದ ಬಾಲಕರ ಹಾಗೂ ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 3ಎ, 3ಬಿ, ಪ.ಜಾ./ಪ.ವರ್ಗಕ್ಕೆ ಸೇರಿದ ಪಿಯುಸಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಆನ್ ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಆಸಕ್ತರು ಅರ್ಜಿಯನ್ನು https://shp.karnataka.gov.in/bcwd ಮೂಲಕ ಜೂ . 15 ರೊಳಗಾಗಿ ಸಲ್ಲಿಸುವುದು.

ಅರ್ಜಿಯನ್ನು ಸಲ್ಲಿಸಲು ಪ್ರವರ್ಗ–1, ಎಸ್.ಸಿ ಮತ್ತು ಎಸ್.ಟಿ. ಸೇರಿದ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯವು ರೂ.2.50 ಲಕ್ಷಕ್ಕಿಂತ ಮೀರಿರಬಾರದು. ಪ್ರವರ್ಗ–2ಎ, 2ಬಿ, 3ಎ, 3ಬಿ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ಆದಾಯವು ರೂ.1.00 ಲಕ್ಷ ಮೀರಬರದು.

ತಾಲೂಕುವಾರು ವಿದ್ಯಾರ್ಥಿನಿಲಯದ ವಿವರ ಹಾಗೂ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರಿ ಆದೇಶಕ್ಕಾಗಿ ಇಲಾಖೆಯ ವೆಬ್ ಸೈಟ್ ವಿಳಾಸ https://bcwd.karnataka.gov.in ನ್ನು ಸಂಪರ್ಕಿಸುವುದು. ಅರ್ಜಿ ಸಲ್ಲಿಸುವಾಗ ತಾಂತ್ರಿಕ ತೊಂದರೆಗಳಾದಲ್ಲಿ ಇ–ಮೇಲ್ bcwdhelpline@.karnataka.gmail.com ಮುಖಾಂತರ ಅಥವಾ ಜಿಲ್ಲಾ/ತಾಲ್ಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿಗಳನ್ನು ಅಗತ್ಯ ದಾಖಲೆಗಳೊಂದಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸುವಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂ.8050770004 ನ್ನು ಸಂಪರ್ಕಿಸುವುದು.

# ಗಾಳಿ, ಮಳೆ ವಿದ್ಯುತ್ ಅನಾಹುತ ತಪ್ಪಿಸಲು ಸೆಸ್ಕ್ ಸನ್ನದ್ಧ

**ಮೈಸೂರು:** ಗ್ರಾಹಕರಿಗೆ ಅಡಚಣೆರಹಿತವಾದ ವಿದ್ಯುತ್ ಸೇವೆ ನೀಡುತ್ತಿರುವ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್), ಪ್ರಸ್ತುತ ಪೂರ್ವ ಮುಂಗಾರು ಆರಂಭ ಆಗುತ್ತಿರುವ ಸಂದರ್ಭದಲ್ಲಿ ಉಂಟಾಗುವ ವಿದ್ಯುತ್ ಸಮಸ್ಯೆಗಳು, ಅಪಾಯಗಳ ಕುರಿತಂತೆ ಜಾಗೃತಿ ಮೂಡಿಸಿ, ಎಚ್ಚರಿಕೆಯಿಂದಿರುವಂತೆ ಗ್ರಾಹಕರಿಗೆ ಸಲಹೆ ಮಾಡಿದೆ.

ಈ ಕುರಿತು ಪ್ರಕಟಣೆ ಹೊರಡಿಸಿರುವ ಸೆಸ್ಕ್ ಅಧಿಕಾರಿಗಳು, ನಿಗಮದ ವ್ಯಾಪ್ತಿಯ 5 ಜಿಲ್ಲೆಗಳಲ್ಲಿ ಪೂರ್ವ ಮುಂಗಾರು ಆರಂಭವಾಗಿ ಅಲ್ಲಲ್ಲಿ ಮಳೆಯಾಗುತ್ತಿದೆ. ಇಂತಹ ಸಂದರ್ಭಗಳಲ್ಲಿ ಅತಿಯಾದ ಗಾಳಿ ಮತ್ತು ಮಳೆಯಿಂದ ವಿದ್ಯುತ್ ಅನಾಹುತಗಳು ಸಂಭವಿಸುವ ಸಾಧ್ಯತೆ ಇದೆ. ಮಳೆ ಸಂದರ್ಭದಲ್ಲಿ ಸಂಭವಿಸಬಹುದಾದ ವಿದ್ಯುತ್ ಅವಘಡಗಳು, ಅಡಚಣೆಗಳು ಹಾಗೂ ಇತರೆ ತೊಂದರೆಗಳನ್ನು ಎದುರಿಸಲು ಸೆಸ್ಕ್ ಸನ್ನದ್ಧವಾಗಿದೆ. ಗ್ರಾಹಕರ ಸುರಕ್ಷತೆ ಬಗ್ಗೆಯೂ ಹೆಚ್ಚಿನ ನಿಗಾವಹಿಸಲಾಗಿದ್ದು, ಸ್ಥಳೀಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಗ್ರಾಹಕರಿಗೆ ಅಗತ್ಯ ಸೇವೆ ನೀಡಲು ಕಾರ್ಯಪ್ರವೃತ್ತರಾಗಿದ್ದಾರೆ. ಅದರಂತೆ ಸಾರ್ವಜನಿಕರು ಅತಿಯಾದ ಗಾಳಿ ಮತ್ತು ಮಳೆಯ ಸಂದರ್ಭದಲ್ಲಿ ವಿದ್ಯುತ್ ಅಪಾಯಗಳು ಸಂಭವಿಸದಂತೆ ಅಗತ್ಯ ಮುನ್ನೆಚ್ಚರಿಕೆವಹಿಸಲು ಕೋರಲಾಗಿದೆ.

ಸಾರ್ವಜನಿಕರು ತಮ್ಮ ಸುತ್ತಮುಲ್ಲಿನ ಪ್ರದೇಶಗಳಲ್ಲಿ ವಿದ್ಯುತ್ ತಂತಿಗಳು ತುಂಡಾಗಿ ಬಿದ್ದಿರುವುದು, ವಿದ್ಯುತ್ ಕಂಬಗಳು ಹಾನಿಯಾಗಿರುವುದು, ಟ್ರಾನ್ಸ್‌ಫಾರ್ಮರ್‌ಗಳಲ್ಲಿ



ಸಮಸ್ಯೆಗಳು ಕಂಡುಬಂದಲ್ಲಿ ಸಾರ್ವಜನಿಕರು ತುರ್ತಾಗಿ 24*7 ಸಹಾಯವಾಣಿ 1912 ಅಥವಾ ನಿಗಮದ ವಾಟ್ಸಾಪ್ ಸಂಖ್ಯೆ 9448991912 ಸಂಖ್ಯೆಗೆ ಫೋಟೋ ಸಹಿತವಾಗಿ ಮಾಹಿತಿ ನೀಡುವಂತೆ ಅಥವಾ ಸ್ಥಳೀಯ ಸೆಸ್ಕ್ ಅಧಿಕಾರಿಗಳು, ಸಿಬ್ಬಂದಿಗೆ ಮಾಹಿತಿ ನೀಡುವಂತೆ ಸೆಸ್ಕ್ ಅಧಿಕಾರಿ ತಿಳಿಸಿದ್ದಾರೆ.

ಅಗತ್ಯ ಮುನ್ನೆಚ್ಚರಿಕೆ ಕ್ರಮಗಳು: ರಸ್ತೆ ಬದಿಯಲ್ಲಿ ಅಥವಾ ಇತರೆ ಕಡೆಗಳಲ್ಲಿ ತುಂಡಾಗಿ ಬಿದ್ದ ತಂತಿಗಳನ್ನು ಮುಟ್ಟಬೇಡಿ. ಬಟ್ಟೆ ಒಣಗಿಸಲು ವಿದ್ಯುತ್ ಕಂಬಗಳು,

### ಜಿಲ್ಲಾವಾರು ಸಹಾಯವಾಣಿ ಸಂಖ್ಯೆ

- ಕೊಡಗು -18005990061
- ಮೈಸೂರು - 18005990062
- ಚಾಮರಾಜನಗರ - 18005990063
- ಹಾಸನ - 18005990065
- ಮಂಡ್ಯ - 18005990066

ವೈಯರ್‌ಗಳನ್ನು ಬಳಸಬೇಡಿ. ವಿದ್ಯುತ್ ಕಂಬಗಳು ಅಥವಾ ಟ್ರಾನ್ಸ್‌ಫಾರ್ಮರ್‌ಗಳ ಸಮೀಪ ಜಾನುವಾರುಗಳನ್ನು ಕಟ್ಟುವುದನ್ನು ಮಾಡಬೇಡಿ. ಮಳೆ ಹಾಗೂ ಗಾಳಿಯ ಸಂದರ್ಭದಲ್ಲಿ ಟ್ರಾನ್ಸ್‌ಫಾರ್ಮರ್‌ಗಳ ಸಮೀಪ ನಿಲ್ಲದಂತೆ ಎಚ್ಚರವಹಿಸಿ.

ರೈತರು ಒದ್ದೆ ಕೈಗಳಿಂದ ಪಂಪ್ ಸೆಟ್‌ಗಳನ್ನು ಆನ್ ಮಾಡಬೇಡಿ. ಮಳೆ ಸಂದರ್ಭಗಳಲ್ಲಿ ವಿದ್ಯುತ್ ಉಪಕರಣಗಳನ್ನು ಆಫ್ ಮಾಡಿ. ಜಾನುವಾರುಗಳನ್ನು ವಿದ್ಯುತ್ ಕಂಬಗಳು ಮತ್ತು ಕಂಬಗಳ ಗೈವೈರ್‌ಗಳಿಗೆ ಕಟ್ಟಬೇಡಿ. ಜಲಾವೃತ ಪ್ರದೇಶಗಳಲ್ಲಿ ವಿದ್ಯುತ್ ಉಪಕರಣಗಳೊಂದಿಗೆ ಕೆಲಸ ಮಾಡಬೇಡಿ. ಮಳೆ ಸಂದರ್ಭದಲ್ಲಿ ಜಮೀನುಗಳಲ್ಲಿ ಹಾದು ಹೋಗಿರುವ ವಿದ್ಯುತ್ ಕಂಬಗಳು ಅಥವಾ ಟ್ರಾನ್ಸ್‌ಫಾರ್ಮರ್‌ಗಳಿಂದ ದೂರವಿರಿ.

## ಆರ್.ಸೋಮಸುಂದರ್ ಎಂಎಲ್‌ಸಿ ಸ್ಥಾನ ನೀಡುವಂತೆ ಮನವಿ



**ಮೈಸೂರು:** ಪಾಲಿಕೆ ಮಾಜಿ ಸದಸ್ಯರಾದ ಆರ್.ಸೋಮಸುಂದರ್ ಕಾಂಗ್ರೆಸ್ ಪರಿಶಿಷ್ಟ ಜಾತಿ, ಪಂಗಡ ಘಟಕದ ಅಧ್ಯಕ್ಷರಾಗಿ ಬಡವರು, ಶೋಷಿತರ ಪರವಾಗಿ ಸಾಕಷ್ಟು ಕೆಲಸ ಮಾಡಿದ್ದಾರೆ. ಪಕ್ಷಕ್ಕೂ ದುಡಿಯುತ್ತಿದ್ದಾರೆ. ಹೀಗಾಗಿ ಇವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ನೇಮಕ ಮಾಡಬೇಕೆಂದು ದಲಿತ ಸಮುದಾಯಗಲ ಒಕ್ಕೂಟದ ಸಂಚಾಲಕ ರೇವಣ್ಣ ಪಕ್ಷದ ವರಿಷ್ಠರಿಗೆ ಮನವಿ ಮಾಡಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಸೋಮಸುಂದರ್ ಅವರು ಮೈಸೂರು ಮಹಾ ನಗರ ಪಾಲಿಕೆಯಲ್ಲಿ ಲೆಕ್ಕಪತ್ರ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ, ಎನ್‌ಎಸ್‌ಯುಐ ಪ್ರಧಾನ ಕಾರ್ಯದರ್ಶಿಯಾಗಿ, ಯುವ ಕಾಂಗ್ರೆಸ್ ಉಪಾಧ್ಯಕ್ಷರಾಗಿಯೂ ಕರ್ತವ್ಯ ನಿರ್ವಹಿಸಿದ್ದಾರೆ. ಇದರೊಡನೆ ಮೈಸೂರು ಚಾಮರಾಜನಗರ ಅಂಬೇಡ್ಕರ್ ದಲಿತ ಸೇನಾ ಅಧ್ಯಕ್ಷರಾಗಿಯೂ ಸಮುದಾಯದ ಏಳಿಗೆಗಾಗಿ ದುಡಿದಿದ್ದಾರೆ.

ಇವರು ಭೋವಿ ಸಮುದಾಯದ ಎಲ್ಲ ಮುಖಂಡರೊಡನೆ ಒಡನಾಟ ಹೊಂದಿದ್ದು, ಪಕ್ಷದ ಸಂಘಟನೆಗೆ ಇನ್ನಷ್ಟು ಅನುಕೂಲವಾಗುವ ನಿಟ್ಟಿನಲ್ಲಿ ಸಿಎಂ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಮಲ್ಲಿಕಾರ್ಜುನ ಖರ್ಗೆ ಮೊದಲಾದವರು ಗಮನ ಹರಿಸಿ ಇವರನ್ನು ವಿಧಾನ ಪರಿಷತ್‌ಗೆ ನೇಮಕ ಮಾಡಬೇಕೆಂದು ಕೋರಿದರು. ಇನ್ನಿತರ ಪದಾಧಿಕಾರಿಗಳಾದ ಟಿ. ರಾಮು, ರಾಮಯ್ಯ, ಕನಕಮೂರ್ತಿ, ಲಕ್ಷ್ಮಿ, ಶೈಲಾ ಇದ್ದರು.

## ಪೆಟ್ರೋಲ್, ಡಿಸೇಲ್ ದರ ಇಳಿಕೆಗೆ ಆಗ್ರಹ

**ಮೈಸೂರು:** ಪೆಟ್ರೋಲ್, ಡೀಸೆಲ್ ದರ ಹೆಚ್ಚಾಗಿರುವುದು ರೈತರಿಗೆ ದೊಡ್ಡ ಹೊಡೆತವುಂಟು ಮಾಡಿದೆ. ಹೀಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅವುಗಳ ಮೇಲಿನ ತೆರಿಗೆ ಇಳಿಸಬೇಕೆಂದು ವಿಶ್ವಮಾನವ ರೈತ ಸಂಘದ ರಾಜ್ಯಾಧ್ಯಕ್ಷ ಮೋಹಿತ್‌ಗೌಡ ಆಗ್ರಹಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಇದರೊಡನೆ ಅಗತ್ಯ ವಸ್ತುಗಳ ದರ ಏರಿಕೆಗೂ ಕಡಿವಾಣ ಹಾಕಬೇಕು, ಜಿಲ್ಲಾ ವ್ಯಾಪ್ತಿಯ ಸರ್ಕಾರಿ ಕಚೇರಿಗಳಿಗೆ ರೈತರು ಕೆಲಸ ಕಾರ್ಯಗಳಿಗೆ ಬಂದಾಗ ಅಧಿಕಾರಿಗಳು, ಸಿಬ್ಬಂದಿ ಸೌಜನ್ಯದಿಂದ ವರ್ತಿಸಬೇಕು, ಸುಖಾಸುಮ್ಮನೆ ಅಲೆದಾಡಿಸಬಾರದು ಎಂದು ಒತ್ತಾಯಿಸಿದರು.

ಜಿಲ್ಲೆ ವ್ಯಾಪ್ತಿಯ ಎಚ್.ಡಿ. ಕೋಟೆ, ನಂಜನಗೂಡು, ಸರಗೂರು, ಹುಣಸೂರು ಹಾಗೂ ಪಿರಿಯಾಪಟ್ಟಣ ಭಾಗಗಳಲ್ಲಿ ಕಾಡುಪ್ರಾಣಿಗಳ ಹಾವಳಿ ಹೆಚ್ಚಾಗಿದೆ. ಇವುಗಳು ರೈತರ ಮೇಲೆ ದಾಳಿ ಮಾಡುವುದಲ್ಲದೆ, ಬೆಳೆ ಹಾನಿ ಮಾಡುತ್ತಿವೆ. ಹೀಗಾಗಿ ಅರಣ್ಯ ಇಲಾಖೆ ಇವನ್ನು ನಿಯಂತ್ರಿಸಬೇಕೆಂದು ಆಗ್ರಹಿಸಿದರು.

ಇನ್ನಿತರ ಪದಾಧಿಕಾರಿಗಳಾದ ಕೆ. ಶಂಕರ್, ಸಂದೇಶ್ ಪವಾರ್, ಹಳ್ಳಿಕಾರ್ ದರ್ಶನ್, ಅಭಿಷೇಕ್ ಇದ್ದರು.




## ಕೈಗಾರಿಕಾ ಬೆಳವಣಿಗೆಗೆ ತಂತ್ರಜ್ಞಾನ ಅಗತ್ಯ: ಡಾ. ಜಿ.ಪರಮೇಶ್ವರ

**ತುಮಕೂರು:** ರಾಜ್ಯದ ಆರ್ಥಿಕ ಅಭಿವೃದ್ಧಿಯಲ್ಲಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ (ಒಖಒಇ) ಪಾತ್ರ ಅತ್ಯಂತ ಮಹತ್ವದ್ದಾಗಿದೆ. ರಾಜ್ಯದ ಆರ್ಥಿಕ ವ್ಯವಸ್ಥೆಗೆ ಸುಮಾರು ಶೇ.30ರಷ್ಟು ಕೊಡುಗೆ ಸಣ್ಣ ಕೈಗಾರಿಕೆಗಳಿಂದಲೇ ಸಿಗುತ್ತಿದ್ದು, ಈ ಕ್ಷೇತ್ರವನ್ನು ಮತ್ತಷ್ಟು ಬಲಪಡಿಸಲು ತಂತ್ರಜ್ಞಾನ ಅಳವಡಿಕೆ ಅನಿವಾರ್ಯ ಎಂದು ಗೃಹ ಹಾಗೂ ತುಮಕೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಜಿ. ಪರಮೇಶ್ವರ ಅಭಿಪ್ರಾಯಪಟ್ಟರು.

ನಗರದ ಅಮಾನಿಕೆರೆಯ ಗಾಜಿನ ಮನೆಯಲ್ಲಿ ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ ಆಶ್ರಯದಲ್ಲಿ ಶುಕ್ರವಾರ ಆಯೋಜಿಸಿದ್ದ ದಕ್ಷಿಣ ಭಾರತ ಒಖಒಇ ಸಮಾವೇಶದಲ್ಲಿ ಮಾತನಾಡಿದ ಅವರು, ಕೈಗಾರಿಕಾ ಕ್ಷೇತ್ರದಲ್ಲಿ ಸ್ಪರ್ಧಾತ್ಮಕತೆ ಹೆಚ್ಚಿಸಲು ನವೀನ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವುದು ಅವಶ್ಯಕವಾಗಿದೆ ಎಂದು ಹೇಳಿದರು.

ಸಣ್ಣ ಕೈಗಾರಿಕೆಗಳು ತಂತ್ರಜ್ಞಾನ ಬಳಕೆಯಿಂದ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವುದರ ಜೊತೆಗೆ ಜಾಗತಿಕ ಮಾರುಕಟ್ಟೆಯಲ್ಲಿ ತಮ್ಮ ಸ್ಥಾನವನ್ನು ಗಟ್ಟಿಗೊಳಿಸಬಹುದು ಎಂದು ಅವರು ತಿಳಿಸಿದರು.




ತುಮಕೂರು ಜಿಲ್ಲೆಯಲ್ಲಿ ಕೈಗಾರಿಕಾ ಬೆಳವಣಿಗೆಗೆ ಸಾಕಷ್ಟು ಅವಕಾಶಗಳಿದ್ದು, ಅಂತರಸನಹಳ್ಳಿ ಕೈಗಾರಿಕಾ ಪ್ರದೇಶ ಮತ್ತು ವಸಂತ ನರಸಾಪುರ ಕೈಗಾರಿಕಾ ಹಬ್ ಅನ್ನು ಇನ್ನಷ್ಟು ಅಭಿವೃದ್ಧಿಪಡಿಸುವ ಅಗತ್ಯವಿದೆ ಎಂದು ಹೇಳಿದರು. ಮುಂದಿನ ವರ್ಷಗಳಲ್ಲಿ ತುಮಕೂರಿನಲ್ಲಿ ಹೆಲಿಕಾಪ್ಟರ್ ತಯಾರಿಕಾ ಘಟಕ ಆರಂಭವಾಗುವ ಸಾಧ್ಯತೆ ಇದ್ದು, ಇದರಿಂದ ಜಿಲ್ಲೆಗೆ ಹೊಸ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜಿಲ್ಲೆಯಲ್ಲಿ ಕೈಗಾರಿಕೆಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ಸುಮಾರು 300 ಎಕರೆ ಭೂಮಿಯನ್ನು ಸರ್ಕಾರ ಮೀಸಲಿಡಲು ಸಿದ್ಧವಾಗಿದೆ ಎಂದು ತಿಳಿಸಿದ ಅವರು, ಕೆಎಸ್‌ಸಿಎ ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣಕ್ಕಾಗಿ 42 ಎಕರೆ ಭೂಮಿಯನ್ನು ಈಗಾಗಲೇ ನೀಡಲಾಗಿದೆ. ಈ ರೀತಿಯ ಅಭಿವೃದ್ಧಿ ಯೋಜನೆಗಳು ತುಮಕೂರಿನ ಸಮಗ್ರ ಬೆಳವಣಿಗೆಗೆ ಪೂರಕವಾಗಲಿವೆ ಎಂದು ಹೇಳಿದರು.

ತುಮಕೂರನ್ನು ಕೈಗಾರಿಕೆ, ಶಿಕ್ಷಣ ಮತ್ತು ಮೂಲಸೌಕರ್ಯ ಕ್ಷೇತ್ರಗಳಲ್ಲಿ ಮುನ್ನಡೆಸುವತ್ತ ಸರ್ಕಾರ ಬದ್ಧವಾಗಿದೆ. ಹೇಮಾವತಿ ಯೋಜನೆಯಡಿ 18 ರಿಂದ 20 ಟಿಎಂಸಿ ನೀರನ್ನು ಜಿಲ್ಲೆಗೆ ಒದಗಿಸಲಾಗುತ್ತಿದ್ದು, ಕೃಷಿ ಮತ್ತು ಕೈಗಾರಿಕಾ ಚಟುವಟಿಕೆಗಳಿಗೆ ಇದು ನೆರವಾಗಲಿದೆ ಎಂದು ಅವರು ಹೇಳಿದರು. ತುಮಕೂರು ಜಿಲ್ಲೆ ಭವಿಷ್ಯದಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳುವ ಸಾಮರ್ಥ್ಯ ಹೊಂದಿದ್ದು, ಸರ್ಕಾರದ ಯೋಜನೆಗಳು ಹಾಗೂ ಹೂಡಿಕೆಗಳಿಂದ ಜಿಲ್ಲೆಯ ಪ್ರಗತಿ ವೇಗ ಪಡೆಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ತುಮಕೂರು ನಗರ ಶಾಸಕ ಜ್ಯೋತಿ ಗಣೇಶ್, ತುಮಕೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಎಂ. ವೆಂಕಟೇಶ್ವರಲು ಹಾಗೂ ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

### ಸುಮಾರು 380 ಫಲಾನುಭವಿಗಳಿಗೆ ಶಾಸಕರಿಂದ ಹಕ್ಕುಪತ್ರ ವಿತರಣೆ

## ಸೋತೆನೆಂದು ಕ್ಷೇತ್ರ ಬಿಡುವ ಬುದ್ಧಿ ನನ್ನದಲ್ಲ: ಕೆ.ಎನ್‌ಆರ್

**ಮಧುಗಿರಿ:** ನಾನು ರಾಜಕಾರಣಕ್ಕೆ ಬಂದಿದ್ದು ಬಡಜನರ ಸೇವೆ ಮಾಡಲು ಗೆದ್ದಾಗಲು ಜೊತೆಗಿರುವೆ ಸೋತಾಗಲು ಜೊತೆಯಾಗಿದ್ದೆ ಇದು ನಿಮಗೆಲ್ಲ ಗೊತ್ತಿರುವ ಸತ್ಯ ನಾನು ಸೋತಾಗ ಜನರ ಮದ್ಯದಲ್ಲೇ ಇದ್ದು ಅವರ ಕಷ್ಟ ಸುಖಗಳಲ್ಲಿ ಬಾಗಿಯಾಗುವುದು ನನ್ನ ಮನೋಧರ್ಮ ಸೋತೆನೆಂದು ಕ್ಷೇತ್ರ ಬಿಟ್ಟು ಹೋಗುವ ಬುದ್ಧಿ ನನ್ನದಲ್ಲ ನಾನು ಸದಾ ಜನರ ಜೊತೆಗಿದ್ದು ಬದುಕುವ ವ್ಯಕ್ತಿ ಎಂದು ಮಾಜಿ ಸಚಿವ, ಶಾಸಕ ಕೆ.ಎನ್. ರಾಜಣ್ಣ ತಿಳಿಸಿದರು.

ತಾಲೂಕಿನ ಐ.ಡಿ.ಹಳ್ಳಿ ಹೋಬಳಿ ವ್ಯಾಪ್ತಿಯ ಕಂದಾಯ ಗ್ರಾಮಗಳಾದ ಮಾರುತಿ ಪುರ, ಹಳೇ ಗೊಲ್ಲರಹಟ್ಟಿ, ಮಾದೇನಹಳ್ಳಿ, ವಡ್ಡರಹಟ್ಟಿ, ತಿಪ್ಪಾಪುರ ತಾಂಡ ಗ್ರಾಮಗಳಲ್ಲಿ ಸುಮಾರು 380 ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಿ ಮಾತನಾಡಿದ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸರ್ಕಾರದಲ್ಲಿ ವಿಶೇಷ ಕಾನೂನು ಮಾಡಿ ಸರ್ಕಾರಿ ಸ್ಥಳದಲ್ಲಿ ಮನೆ ಕಟ್ಟಿದ್ದಲ್ಲಿ ಅಥವಾ 2008 ಕ್ಕೂ ಹಿಂದೆ ಖಾಸಗಿ ಸ್ಥಳದಲ್ಲಿ ಮನೆ ಕಟ್ಟಿದ್ದಲ್ಲಿ ಅವರಿಗೇ ಮಾಲಿಕತ್ವದ ಹಕ್ಕು ನೀಡಲು ಸರ್ಕಾರ ಕ್ರಮ ಕೈಗೊಂಡಿದ್ದು, ಅವರಿಗೆ ಸರ್ಕಾರದ ವತಿಯಿಂದ ಹಕ್ಕು ಪತ್ರ ವಿತರಣೆ ಮತ್ತು ವಾಸದ ಜಾಗದ ಮಾಲೀಕತ್ವ ಪತ್ರ ವಿತರಣೆ ಮಾಡಲಾಗುತ್ತಿದೆ. ಈ ಹಿಂದೆ ಮನೆ ಬಿದ್ದು ಹೋಗಿದ್ದಲ್ಲಿ ಹೊಸ ಮನೆ ನಿರ್ಮಿಸಿಕೊಳ್ಳಲು ಸರ್ಕಾರಕ್ಕೆ ಅರ್ಜಿ ಸಲ್ಲಿಸಲು ಹಕ್ಕು ಪತ್ರವೇ ಇರುತ್ತಿರಲಿಲ್ಲ. ಇದರಿಂದ ಬಹಳಷ್ಟು ತೊಂದರೆ ಅನುಭವಿಸಬೇಕಿತ್ತು. ಈಗ ಸರ್ಕಾರವೇ ಮನೆ ಬಾಗಿಲಿಗೆ ಬಂದು ಸವಲತ್ತು ವಿತರಣೆಗೆ ಕ್ರಮ ಕೈಗೊಂಡಿದ್ದು, ನಿಮ್ಮ ಮತ್ತು ನಿಮ್ಮ ಮನೆಯ ಭಾವಚಿತ್ರ ಸಹಿತ ಮನೆ ಅಳತೆ ಮಾಡಿ ರಿಜಿಸ್ಟ್ರಾರ್ ಮಾಡಿಸಿ ನಿಮ್ಮ ಮಾಲಿಕತ್ವದ ಹಕ್ಕು ವಿತರಣೆ



ಮಾಡಲಾಗಿದೆ ಎಂದರು.

ಚುನಾವಣೆಯಲ್ಲಿ ಗೆಲ್ಲುವವರೆಗೆ ಮಾತ್ರ ನಾನು ರಾಜಕೀಯ ಮಾಡುತ್ತೇನೆ. ಗೆದ್ದ ನಂತರ ಎಲ್ಲಾ ಜಾತಿಯ ಬಡವರ ಪರ ಕೆಲಸ ಮಾಡುತ್ತೇನೆ ಉಪ್ಪು ಇಟ್ಟವರನ್ನು ಮುಪ್ಪಿನ ಮರೆಗೂ ಮರೆಯಬಾರದು ಎಂಬ ಮಾತಿದೆ. ನಿಮಗೆ ನೆಮ್ಮದಿಯ ಜೀವನ ನೀಡಿರುವವರಿಗೆ ನಿಮ್ಮ ಬೆಂಬಲವಿರಲಿ. ಹೆಣ್ಣು ಸಂಸಾರದ ಕಣ್ಣು ಎಂಬ ಮಾತಿನಂತೆ ಮಹಿಳೆಯರಿಗೆ ಸವಲತ್ತುಗಳು ನೀಡಿದರೆ ಮನೆಗೆ ನೆರವಾಗುತ್ತಾರೆ. ನಿಮಗೆ ಸೋಲಿಸುವುದೂ ಗೊತ್ತು. ಗೆಲ್ಲಿಸುವುದೂ ಗೊತ್ತು. ಆದರೆ ನಾನು ಸೋತರೂ ಗೆದ್ದರೂ ನಿಮ್ಮ ಕಷ್ಟ ಸುಖಗಳಿಗೆ ಸ್ಪಂದಿಸುತ್ತಿದ್ದು, ನಿಮ್ಮ ಕೆಲಸಗಳನ್ನು ಮಾಡಿಕೊಟ್ಟಿದ್ದೇನೆ. ನಿಮ್ಮ ಕಷ್ಟಕ್ಕೆ ನೆರವಾಗುವವರಿಗೆ ನೀವು ಆಶೀರ್ವಾದ ಮಾಡಿ ಎಂದು ಮನವಿ ಮಾಡಿದರು. ನನ್ನ ಕ್ಷೇತ್ರದಲ್ಲಿ ಸರ್ಕಾರಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೂ ಉಚಿತವಾಗಿ ನೋಟ್ ಪುಸ್ತಕಗಳನ್ನು ವಿತರಿಸಲಾಗುತ್ತಿದ್ದು, ಈ ಶೈಕ್ಷಣಿಕ ವರ್ಷದಿಂದ ಅಂಗನವಾಡಿ ಮಕ್ಕಳಿಗೂ ಉಚಿತ ಸಮವಸ್ತ್ರ ದ ಜೊತೆಗೆ ಒಂದು ಜೊತೆ ಶೂ ಮತ್ತು ಎರಡು ಜೊತೆ ಸಾಕ್ಸ್ ವಿತರಣೆಗೆ ಕ್ರಮ ಕೈಗೊಳ್ಳಲಾಗಿದೆ. ಮಕ್ಕಳು ಶಾಲೆಗೆ ಗೈರಾಗದಂತೆ ಪೋಷಕರು ಕ್ರಮ ವಹಿಸಬೇಕು. ಗ್ರಾಮೀಣ ಭಾಗದ ಮಕ್ಕಳು ವಿದ್ಯಾವಂತರಾಗಬೇಕು. ದೇವರು ಎಲ್ಲರಿಗೂ ಒಂದೇ ರೀತಿಯ ಬುದ್ಧಿಶಕ್ತಿಯನ್ನು ನೀಡಿದ್ದು, ಶ್ರದ್ಧೆಯಿಂದ ಅಬ್ಯಾಸ ನಡೆಸಿ ಜೀವನದಲ್ಲಿ ಯಶಸ್ಸು ಗಳಿಸಿ, ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಈ ಸಂದರ್ಭದಲ್ಲಿ ಉಪವಿಭಾಗಾಧಿಕಾರಿ ಗೋಟೂರು ಶಿವಪ್ಪ, ತಹಶೀಲ್ದಾರ್ ಶ್ರೀನಿವಾಸ್, ತಾ.ಪಂ ಇ.ಓ ಲಕ್ಷ್ಮಣ್, ಎಡಿ ಧನಂಜಯ್, ಡಿಸಿಸಿ ಬ್ಯಾಂಕ್ ನಿರ್ದೇಶಕ ಬಿ. ನಾಗೇಶ್ ಬಾಬು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ .ಗೋಪಾಲಯ್ಯ ಮಾಜಿ ತಾ.ಪಂ ಅಧ್ಯಕ್ಷೆ ಇಂದಿರಾ ದೇನಾ ನಾಯ್ಕ, ಕೆಪಿಸಿಸಿ ಮಹಿಳಾ ಘಟಕದ ಕಾರ್ಯದರ್ಶಿ ಸುವರ್ಣಮ್ಮ, ತಾ.ಪಂ ಮಾಜಿ ಸದಸ್ಯ ಚೀಲನಹಳ್ಳಿ ರಾಜು, ಮಾಜಿ ಗ್ರಾಂ.ಪಂ ಅಧ್ಯಕ್ಷರಾದ ದೇವರಾಜ್,ವಕೀಲ ನರಸಿಂಹಮೂರ್ತಿ,ಬೆಳಗೇರಪ್ಪ, ಸದಸ್ಯರುಗಳಾದ ಚಿತ್ತಯ್ಯ, ನಾಗರಾಜಪ್ಪ, ಶಂಕರ್ ಯಾದವ್ ಇತರರಿದ್ದರು.

## ಇಂದು ಮಧ್ಯಂತರ ವಿದ್ಯುತ್ ವ್ಯತ್ಯಯ

**ತುಮಕೂರು:** ಬೆಸ್ಕಾಂ ನಗರ ಉಪವಿಭಾಗ–1ರ ವ್ಯಾಪ್ತಿಯಲ್ಲಿದುರಸ್ತಿ ಕಾಮಗಾರಿ ಕೈಗೊಂಡಿರುವುದರಿಂದ ಮೇ 23ರಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಪಿ.ಎನ್.ಆರ್. ಪಾಳ್ಯ, ಕುಪ್ಪೂರು, ಹೊಸಹಳ್ಳಿ, ನರಸಾಪುರ, ಪುಟ್ಟಸ್ವಾಮಯ್ಯನಪಾಳ್ಯ, ಸಿರಾಗೇಟ್, ಹೊಂಬಯ್ಯನಪಾಳ್ಯ, ಬ್ಯಾಂಕ್ ಕಾಲೋನಿ, 80 ಫೀಟ್ ರಸ್ತೆ, ಸಿರಾಗೇಟ್, ನಾಗಣ್ಣನಪಾಳ್ಯ, ಚಿಕ್ಕವೀರಯ್ಯನಪಾಳ್ಯ, ಟೂಡಾ ಲೇಔಟ್, ಎಸ್.ಎನ್.ಪಾಳ್ಯ, ಸಾಯಿನಗರ, ಹೊನ್ನೇನಹಳ್ಳಿ, ಸಿರಾಗೇಟ್ ಹೌಸಿಂಗ್ ಬೋರ್ಡ್, ಲಿಂಗಾಪುರ, ವಾಸವಿನಗರ, ಅರಳೀಮರದ ಪಾಳ್ಯ, ಶ್ರೀದೇವಿ ಕಾಲೇಜು, ಹೊಸಹಳ್ಳಿ, ಎ.ಎಂ.ಪಾಳ್ಯ, ಹೊನ್ನೇನಹಳ್ಳಿ ಹೌಸಿಂಗ್ ಬೋರ್ಡ್ ಸೇರಿದಂತೆ ಇತರೆ ಪ್ರದೇಶಗಳಲ್ಲಿ ಮಧ್ಯಂತರ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ಗ್ರಾಹಕರು ಸಹಕರಿಸಬೇಕೆಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮನವಿ ಮಾಡಿದ್ದಾರೆ.

## ಮೇ 24, 25ರಂದು ಕುರಿ ಮತ್ತು ಮೇಕೆಗಳ ಮಾರಾಟ ಮೇಳ

**ತುಮಕೂರು:** ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯು ಶಿರಾ ನಗರಸಭೆ, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ, ತುಮಕೂರು ಕೃಷಿ ಮತ್ತು ಉತ್ಪನ್ನ ಮಾರುಕಟ್ಟೆ ಸಮಿತಿ ಹಾಗೂ ಶಿರಾ ತಾಲ್ಲೂಕಿನ ಎಲ್ಲಾ ಕುರಿಗಾರರ ಸಹಕಾರ ಸಂಘಗಳ ಸಹಯೋಗದೊಂದಿಗೆ ಬಕ್ರೀದ್ ಹಬ್ಬದ ಪ್ರಯುಕ್ತ ಶಿರಾ ನಗರದ ಕೃಷಿ ಉತ್ಪನ್ನ ಮಾರುಕಟ್ಟೆಯ ಆವರಣದಲ್ಲಿ ಮೇ 24 ಹಾಗೂ 25ರಂದು ಕುರಿ ಮತ್ತು ಮೇಕೆಗಳ ಮಾರಾಟ ಮೇಳವನ್ನು ಆಯೋಜಿಸಲಾಗಿದೆ.

## ಸಂಕ್ಷಿಪ್ತ ಸುದ್ದಿ

### ನಿಷೆದಾಜ್ಞೆ ಜಾರಿ

**ಮೈಸೂರು:** ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಮೇ 23 ರಂದು 2/3 ಸೆಮಿಸ್ಟರ್ ಇಂಜಿನಿಯರಿಂಗ್ ಕೋರ್ಸುಗಳ ಪ್ರವೇಶಾತಿಗೆ ಡಿಪ್ಲೋಮ ಸಿಇಟಿ ಪರೀಕ್ಷೆ 2026 ಹಾಗೂ ಎಂ.ಎ./ ಎಂ.ಟೆಕ್ ಕೋರ್ಸುಗಳ ಪ್ರವೇಶಾತಿಗೆ ಪಿಜಿ–ಸಿಇಟಿ ಪರೀಕ್ಷೆ–2026 ಮೈಸೂರು ನಗರದ ಒಟ್ಟು 11 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದ್ದು, ಪರೀಕ್ಷಾ ಕೇಂದ್ರಗಳ ಬಳಿ ಪರೀಕ್ಷಾ ಅಕ್ರಮಗಳು ಮತ್ತು ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ತಡೆಯಲು ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ–2023 ಸೆಕ್ಷನ್ 163 ರೀತ್ಯ ನಿಷೇಧಾಜ್ಞೆಯನ್ನು ಜಾರಿಗೊಳಿಸಲಾಗಿದೆ.

DCET-2026 ಪರೀಕ್ಷಾ ಕೇಂದ್ರಗಳು: ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜು, ಜೆಎಲ್‌ಬಿ ರಸ್ತೆ, ಮೈಸೂರು, ಎಸ್.ಬಿ.ಆರ್.ಆರ್.ಮಹಾಜನ ಪದವಿಪೂರ್ವ ಕಾಲೇಜು, ಜಯಲಕ್ಷ್ಮೀಪುರಂ, ಮೈಸೂರು, ಮಹಾರಾಣಿ ಸರ್ಕಾರಿ ಪದವಿ ಪೂರ್ವ ಕಾಲೇಜು, ಎನ್.ಎಸ್. ರಸ್ತೆ, ಮೈಸೂರು, ಎಂ.ಎಂ.ಕೆ. & ಎಸ್.ಡಿ.ಎಂ. ಪದವಿಪೂರ್ವ ಕಾಲೇಜು, ಕೃಷ್ಣಮೂರ್ತಿಪುರಂ, ಮೈಸೂರು, ಶ್ರೀ ವಿವೇಕಾನಂದ ಪದವಿ ಪೂರ್ವ ಕಾಲೇಜು, ಜಯಲಕ್ಷ್ಮೀಪುರಂ, ಮೈಸೂರು, ಮಹಾರಾಜ ಸರ್ಕಾರಿ ಜುನಿಯರ್ ಕಾಲೇಜ್ (ಪ್ರೌಢಶಾಲೆ), ಜೆಎಲ್‌ಬಿ ರಸ್ತೆ, ಮೈಸೂರು.

PGCET-2026 ಪರೀಕ್ಷಾ ಕೇಂದ್ರಗಳು: ಟೆರಿಷಿಯನ್ ಪದವಿ ಪೂರ್ವ ಕಾಲೇಜು, ಸಿದ್ಧಾರ್ಥನಗರ, ಮೈಸೂರು, ಬಾಲಕಿಯರ ಪದವಿ ಪೂರ್ವ ಕಾಲೇಜು, ಮಾತೃಮಂಡಳಿ, ವಿ.ವಿ ಮೊಹಲ್ಲಾ ಮೈಸೂರು, ದೇವರಾಜ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಮೈಸೂರು, ವಿಜಯ ವಿಠಲ ಪದವಿ ಪೂರ್ವ ಕಾಲೇಜು, ಸರಸ್ವತಿಪುರಂ, ಮೈಸೂರು, ವಿಜಯ ವಿಠಲ ಪದವಿ ಪೂರ್ವ ಕಾಲೇಜು, ಸರಸ್ವತಿಪುರಂ, ಮೈಸೂರು

ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಾರ್ಥಿಗಳು ಹಾಗೂ ಪರೀಕ್ಷಾ ಸಿಬ್ಬಂದಿಗಳನ್ನು ಹೊರತುಪಡಿಸಿ ಇತರೆ ಅನಧೀಕೃತ ವ್ಯಕ್ತಿಗಳು ಸಂಚರಿಸಬಾರದು ಮತ್ತು ಯಾರೂ ಆಕ್ಷೇಪಾರ್ಹ ವಸ್ತುಗಳನ್ನು ಒಯ್ಯಬಾರದು ಹಾಗೂ ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿರುವ ಕಾಪಿಯರ್(ಜೆರಾಕ್ಸ್)/ಬ್ರೌಸಿಂಗ್ ಸೆಂಟರ್‌ಗಳನ್ನು ಪರೀಕ್ಷಾ ಅವಧಿಯಲ್ಲಿ ಮುಚ್ಚುವಂತೆ ಆದೇಶಿಸಲಾಗಿದೆ ಎಂದು ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನ

**ರಾಮನಗರ:** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಆಯ್ಕೆಯಾದ ಕನಕಪುರ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯ ಅಂಗನವಾಡಿ ಕಂ ಕ್ರಷ್ ಕೇಂದ್ರಗಳಾದ ಮೇಳೆಕೋಟೆ–2, ಖಾಲಕನಗರ, ಐ.ಪಿ.ಪಿ ಆಸ್ಪತ್ರೆ, ಸಾತನೂರು–3, ಉಯ್ಯಂಬಳ್ಳಿ ಹಾಗೂ ತಿಮ್ಮಸಂದ್ರದಲ್ಲಿ ಕಾರ್ಯನಿರ್ವಹಿಸಲು 6 ಅಂಗನವಾಡಿ ಕಂ ಕ್ರಷ್ ಕಾರ್ಯಕರ್ತೆಯರು ಮತ್ತು 6 ಅಂಗನವಾಡಿ ಕಂ ಕ್ರಷ್ ಸಹಾಯಕಿಯರ ಹುದ್ದೆಗಳನ್ನು ಭರ್ತಿ ಮಾಡಲು ಆಪ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ನಿಗಧಿತ ಅರ್ಜಿ ನಮೂನೆಯನ್ನು ಶಿಶು ಅಭಿವೃದ್ಧಿ ಯೋಜನಾ ಕಚೇರಿ, ಕನಕಪುರ. ಈ ಕಚೇರಿಯಲ್ಲಿ ಪಡೆದು 2026ರ ಜೂನ್ 20ರ ಸಂಜೆ 5.30ರೊಳಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ, ಆಡಳಿತ ಸೌಧ, ಎಂ.ಜಿ. ರಸ್ತೆ, ಕನಕಪುರ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ. ದೂ.ಸಂಖ್ಯೆ: 080–27522282 ಅನ್ನು ಸಂಪರ್ಕಿಸುವಂತೆ ಕನಕಪುರ ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಅರ್ಜಿ ಆಹ್ವಾನ

**ರಾಮನಗರ:** ಬೆಂಗಳೂರು ದಕ್ಷಿಣ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಧಿಕಾರಿಗಳ ಕಚೇರಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ 2026–27ನೇ ಸಾಲಿಗೆ ವಿವಾಹ ಪ್ರೋತ್ಸಾಹಧನ ಯೋಜನೆಯಡಿ ಅರ್ಜಿ ಆಹ್ವಾನಿಸಲಾಗಿದೆ.

ವಿಕಲಚೇತನ ವ್ಯಕ್ತಿಗಳನ್ನು ಸಾಮಾನ್ಯ ವ್ಯಕ್ತಿಗಳು ವಿವಾಹವಾದಲ್ಲಿ ಅವರಿಗೆ 50,000 ರೂ.ಗಳ ಪ್ರೋತ್ಸಾಹಧನ ನೀಡಲಾಗುತ್ತದೆ.

# ಅಧಿಕಾರಿಗಳು ಪ್ರಾಮಾಣಿಕವಾಗಿ ಕಾನೂನಿನ್ವಯ ಕಾರ್ಯನಿರ್ವಹಿಸಿ: ಬಿ. ವೀರಪ್ಪ



**ಮಂಡ್ಯ;** ಅಧಿಕಾರಿಗಳು ಸಮಾಜದ ಒಳಿತಿಗಾಗಿ ನ್ಯಾಯದ ಪರವಾಗಿ ಜವಾಬ್ದಾರಿಯುತವಾಗಿ ಕಾರ್ಯನಿರ್ವಾಹಿಸಬೇಕು ಸರ್ಕಾರಿ ಕಚೇರಿಗಳಲ್ಲಿನ ಭ್ರಷ್ಟಾಚಾರ ಹಾಗೂ ಅಕ್ರಮ ವಿರುದ್ಧ ಕ್ರಮ ವಹಿಸಬೇಕು ಮತ್ತು ಜನಸಾಮಾನ್ಯರಿಗೆ ತೊಂದರೆಯಾಗುವ ನೀತಿಗಳ ವಿರುದ್ಧ ಅಧಿಕಾರಿಗಳ ಮೇಲೆ ಕ್ರಮ ವಹಿಸಬೇಕು. ಅಧಿಕಾರಿಗಳು ಕಾನೂನು ಬದ್ದವಾಗಿ ಹಾಗೂ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಿ ಎಂದು ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ. ವೀರಪ್ಪ ರವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಶುಕ್ರವಾರ ಅಂಬೇಡ್ಕರ್ ಭವನದಲ್ಲಿ ಮಂಡ್ಯ ತಾಲ್ಲೂಕಿನ ಬಾಕಿ ಇರುವ ಪ್ರಕರಣಗಳ ವಿಚಾರಣೆ ಮತ್ತು ವಿಲೇವಾರಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಲೋಕಾಯುಕ್ತ ಸಂಸ್ಥೆಯನ್ನು ಬಲಹೀನ ಮಾಡಲು ಯಾರಿಂದಲೂ ಸಾಧ್ಯವಿಲ್ಲ. ಸಮಾಜವನ್ನು ಒಳ್ಳೆಯ ದಾರಿಯಲ್ಲಿ ನಡೆಸುವುದು ನಮ್ಮ ಸಂಸ್ಥೆಯ ಉದ್ದೇಶ ಮತ್ತು ಸಾರ್ವಜನಿಕರಿಗೆ ಅನ್ಯಾಯ ಆಗದಂತೆ ಕಾರ್ಯ ನಿರ್ವಹಿಸುತ್ತೇವೆ ಎಂದರು.

ಅಧಿಕಾರಿಗಳು ಕೆಲಸ ಕಾರ್ಯಗಳಲ್ಲಿ ಶಿಸ್ತುಪಾಲನೆಯನ್ನು ಪಾಲಿಸಿ ತೆಗಳುವ ಕೆಲಸ ಮಾಡಬೇಡಿ ಎಂದರು. ಕಾನೂನು ಎಲ್ಲರಿಗೂ ಒಂದೇ ಮಾದ್ಯಮದವರು ಸರ್ಕಾರದ ಕಚೇರಿಗಳಲ್ಲಿ ಆಗುತ್ತಿರುವ ಅಕ್ರಮ ಹಾಗೂ ಸರಿ ತಪ್ಪುಗಳನ್ನು ಎತ್ತಿ ಹಿಡಿಯಬೇಕು. ಮಾಧ್ಯಮ ದವರಿಂದ ಸಮಾಜವನ್ನು ದಿಟ್ಟ ಹಾದಿಯಲ್ಲಿ ನಡೆಯಲು ಸಾಧ್ಯ ಎಂದು ಹೇಳಿದರು.


ಇಂದು ಬೆಳಿಗ್ಗೆ ಜಿಲ್ಲೆಯ ಬಂದಿಗೌಡ ಬಡಾವಣೆ 2 ನೇ ಕ್ರಾಸ್ ನಲ್ಲಿರುವ ಡಾ. ಬಿ. ಆರ್ ಅಂಬೇಡ್ಕರ್ ವಿದ್ಯಾರ್ಥಿನಿಯರ ವಸತಿನಿಲಯ ಹಾಗೂ ವಾಲ್ಮೀಕಿ ವಸತಿ ನಿಲಯಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳ ಸಮಸ್ಯೆಗಳ ಅಹವಾಲು ಸ್ವೀಕರಿಸಿರುತ್ತೇವೆ.

ವಸತಿ ನಿಲಯಗಳಲ್ಲಿ ಮೂಲಭೂತ ಸೌಕರ್ಯದ ಕೊರತೆ ಹಾಗೂ ಶೌಚಾಲಯ ನಿರ್ವಹಣೆ ಇಲ್ಲದೆ ಇರುವ ಬಗ್ಗೆ ವಿದ್ಯಾರ್ಥಿನಿಯರು ಸಮಸ್ಯೆಗಳನ್ನು ಹೇಳಿದರು. ವಿದ್ಯಾರ್ಥಿನಿಲಯದ ಅಧಿಕಾರಿಗಳಿಗೆ 15 ದಿನಗಳಲ್ಲಿ ವಿದ್ಯಾರ್ಥಿನಿಲಯವನ್ನು ವರ್ಗಾವಣೆ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿರುತ್ತೇವೆ. ವಸತಿ ನಿಲಯದ ಅಡುಗೆ ಸಿಬ್ಬಂದಿಗಳು ಹಾಗೂ ವಾರ್ಡನ್ ರವರನ್ನು ಶೀಘ್ರವೇ ಬದಲಾಯಿಸುವಂತೆ ತಿಳಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪ್ರಧಾನ ನ್ಯಾಯಮೂರ್ತಿಗಳಾದ ಸುಬ್ರಮಣ್ಯ, ಲೋಕಾಯುಕ್ತ ಎಸ್. ಪಿ. ಸುರೇಶ್ ಬಾಬು, ಉಪ ಲೋಕಾಯುಕ್ತರ ಆಪ್ತ ಕಾರ್ಯದರ್ಶಿಗಳಾದ ಅರವಿಂದ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿಗಳಾದ ಆನಂದ. ಎಂ, ಜಿಲ್ಲಾಧಿಕಾರಿ ಡಾ ಕುಮಾರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿ. ಜೆ. ಶೋಭರಾಣಿ, ಜಿಲ್ಲಾ ವಕೀಲ ಸಂಘದ ಅಧ್ಯಕ್ಷರಾದ ಸತ್ಯಾನಂದ ರವರು ಉಪಸ್ಥಿತರಿದ್ದರು

## ಮೇ 23ರಂದು ಕಾವೇರಿ ಇನ್‌ಸ್ಟಿಟ್ಯೂಟ್‌ನಲ್ಲಿ ಪದವಿ ಪ್ರದಾನ ಸಮಾರಂಭ

**ಮಂಡ್ಯ:** ಕಾವೇರಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜಿನ ವಿದ್ಯಾರ್ಥಿಗಳ ಪದವಿ ಪ್ರದಾನ ಸಮಾರಂಭವನ್ನು ಮೇ 23ರಂದು ಬೆಳಗ್ಗೆ 10.30ಕ್ಕೆ ಕಾಲೇಜು ಆವರಣದಲ್ಲಿ ಆಯೋಜಿಸಲಾಗಿದೆ ಎಂದು ಕಾವೇರಿ ಎಜುಕೇಷನ್ ಅಂಡ್ ರಿಸರ್ಚ್ ಟ್ರಸ್ಟ್‌ನ ಅಧ್ಯಕ್ಷ ಡಾ.ಬಿ.ಜಿ.ಸಂಗಮೇಶ್ವರ ತಿಳಿಸಿದರು.




ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾರಂಭದಲ್ಲಿ ಎರಡು ವರ್ಷಗಳ 364 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುತ್ತಿದೆ. 2024–25ನೇ ಸಾಲಿ 160ರಪೈಕಿ 115 ಮಹಿಳಾ ವಿದ್ಯಾರ್ಥಿನಿಯರು, 45 ಪುರುಷ ವಿದ್ಯಾರ್ಥಿಗಳಲು 2025–26ನೇ ಸಾಲಿನ 204ರ ಪೈಕಿ 126 ಮಹಿಳಾ ವಿದ್ಯಾರ್ಥಿನಿಯರು ಹಾಗೂ 78 ಪುರುಷ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುವುದು ಎಂದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಅಮೆರಿಕಾದ ಪ್ಲೋರಿಡಾ ಅಂತರಾಷ್ಟ್ರೀಯ ವಿಶ್ವವಿದ್ಯಾಲಯದ ಕಂಪ್ಯೂಟರ್ ವಿಜ್ಞಾನಿ ಪ್ರೊ.ಸುಂದರ್‌ರಾಜಾ ಸೀತಾರಾಮ ಐಯ್ಯಂಗರ್ ಭಾಗವಹಿಸುವರು. ಟ್ರಸ್ಟ್‌ನ ಅಧ್ಯಕ್ಷ ಡಾ.ಬಿ.ಜಿ.ಸಂಗಮೇಶ್ವರ, ಕಾರ್ಯದರ್ಶಿ ಡಾ.ಸಿ.ಜೆ.ಗಂಗಾಧರಗೌಡ, ಕಾಲೇಜಿನ ಪ್ರಾಂಶುಪಾಲ ಡಾ.ಎ.ಎಸ್.ಶ್ರೀಕಂಠಪ್ಪ ಉಪಸ್ಥಿತರಿರುವರು ಎಂದು ವಿವರಿಸಿದರು.

ಗೋಷ್ಠಿಯಲ್ಲಿ ಟ್ರಸ್ಟ್‌ನ ಕಾರ್ಯದರ್ಶಿ ಡಾ.ಸಿ.ಜೆ.ಗಂಗಾಧರಗೌಡ, ಕಾಲೇಜಿನ ಪ್ರಾಂಶುಪಾಲ ಡಾ.ಎ.ಎಸ್.ಶ್ರೀಕಂಠಪ್ಪ ಇದ್ದರು.

## ಮೇ 25 ರಂದು ಲೋಕಾರ್ಪಣೆ: ಸಚಿವ ಚೆಲುವರಾಯಸ್ವಾಮಿ
## ರೈತ ಉತ್ಪಾದಕ ಕಂಪನಿ–ರೈತ ಸಂಪರ್ಕ ಕೇಂದ್ರ ಉದ್ಘಾಟನೆ

**ನಾಗಮಂಗಲ:** ಗ್ರಾಮೀಣ ರೈತರ ಬದುಕಿಗೆ ಅಗತ್ಯವಾದ ಕೃಷಿ ಸೌಲಭ್ಯಗಳು ಒಂದೇ ಸೂರಿನಡಿ ದೊರೆಯುವಂತೆ ಮಾಡುವ ಸಚಿವ ಚೆಲುವರಾಯಸ್ವಾಮಿ ಅವರ ದೂರದೃಷ್ಟಿಯ ಕನಸು ನನಸಾಗುತ್ತಿದ್ದು, ಮೇ 25ರಂದು ಎರಡು ಹೊಸ ಕಟ್ಟಡಗಳು ಲೋಕಾರ್ಪಣೆಯಾಗಲಿವೆ.

ನಾಗಮಂಗಲ ತಾಲೂಕಿನ ದೇವಲಾಪುರ ಹೋಬಳಿ ಕೇಂದ್ರದಲ್ಲಿ ರೈತ ಉತ್ಪಾದಕ ಕಂಪನಿ ಹಾಗೂ ರೈತ ಸಂಪರ್ಕ ಕೇಂದ್ರದ ಕಟ್ಟಡಗಳು ಸರ್ಕಾರದ ಸ್ವಂತ ಜಾಗದಲ್ಲಿ ನಿರ್ಮಾಣಗೊಂಡಿದ್ದು, ಮೇ 25ರಂದು ಅಧಿಕೃತವಾಗಿ ಉದ್ಘಾಟನೆಗೊಳ್ಳಲಿವೆ.

ಕೃಷಿ ಇಲಾಖೆಗೆ ಸಂಬಂಧಿಸಿದ ವಿವಿಧ ಸೇವೆಗಳು ಮತ್ತು ಸಮಸ್ಯೆಗಳ ಪರಿಹಾರ ಒಂದೇ ಸ್ಥಳದಲ್ಲಿ ದೊರೆಯುವ ಮೂಲಕ ರೈತರಿಗೆ ಕೃಷಿ ಉತ್ತೇಜನಕ್ಕೆ ಅನುಕೂಲವಾಗಲಿದೆ. ರೈತರು ಯೋಜನೆಗಳ ಸದುಪಯೋಗವನ್ನು ವ್ಯವಸ್ಥಿತವಾಗಿ ಪಡೆಯುವಂತೆ ಈ ಕೇಂದ್ರಗಳು ಕಾರ್ಯನಿರ್ವಹಿಸಲಿವೆ.

ಕಾರ್ಯಕ್ರಮವನ್ನು ಕೃಷಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಚೆಲುವರಾಯಸ್ವಾಮಿ ಉದ್ಘಾಟಿಸಲಿದ್ದಾರೆ. ದೇವಲಾಪುರ ರೈತ ಉತ್ಪಾದಕ ಕಂಪನಿ ರಾಜ್ಯ ನಿರ್ದೇಶಕರಾದ ಎನ್.ಜೆ. ರಾಜೇಶ್ ಅಧ್ಯಕ್ಷತೆ ವಹಿಸಲಿದ್ದಾರೆ.



ಮುಖ್ಯ ಅತಿಥಿಗಳಾಗಿ ಬಿ.ಕೆ. ಚಂದ್ರಶೇಖರ್, ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಉಪಾಧ್ಯಕ್ಷ ವೆಂಕಟರಮಣೇಗೌಡ (ಸ್ಟಾರ್ ಚಂದ್ರು), ಮಂಡ್ಯ ಜಿಲ್ಲಾ ಹಾಲು ಒಕ್ಕೂಟದ ನಿರ್ದೇಶಕ ಎನ್. ಅಪ್ಪಾಜಿಗೌಡ, ಜಲಾನಯನ ಅಭಿವೃದ್ಧಿ ಇಲಾಖೆಯ ಆಯುಕ್ತ ಉಪೇಂದ್ರ ಪ್ರತಾಪ್ ಸಿಂಗ್ ಸೇರಿದಂತೆ ಕೃಷಿ ಇಲಾಖೆಯ ಜಿಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ಭಾಗವಹಿಸಲಿದ್ದಾರೆ.

ಮೇ 25ರಂದು ಮಧ್ಯಾಹ್ನ 2.30ಕ್ಕೆ ಸಂಘದ ಆವರಣದಲ್ಲಿ ಸಮಾರಂಭ ನಡೆಯಲಿದೆ ಎಂದು ದೇವಲಾಪುರ ರೈತ ಉತ್ಪಾದಕ ಕಂಪನಿ ಹಾಗೂ ರಾಜ್ಯ ರೈತ ಉತ್ಪಾದಕ ಸಹಕಾರ ಸಂಘದ ನಿರ್ದೇಶಕರಾದ ಎನ್.ಜೆ. ರಾಜೇಶ್ ತಿಳಿಸಿದ್ದಾರೆ.

# ಮಾಧ್ಯಮ ಸಲಹೆಗಾರ ಹೊಣೆಗಾರಿಕೆ ಹೂವಿನ ಹಾದಿ ಅಲ್ಲ, ಮುಳ್ಳಿನ ಹಾಸಿಗೆ: ಕೆ.ವಿ.ಪ್ರಭಾಕರ್

**ಕೆಯುಡಬ್ಲ್ಯುಜೆ ಮಾಧ್ಯಮ ಸಂವಾದದಲ್ಲಿ ಕೆವಿಪಿ | ಪತ್ರಕರ್ತರ ಬಸ್ ಪಾಸ್, ಹೆಲ್ತ್ ಸ್ಕೀಂ ಜಾರಿಗೊಳಿಸಲು ಕ್ರಮದ ಭರವಸೆ**



**ಬೆಂಗಳೂರು ;** ಮಾಧ್ಯಮ ಸಲಹೆಗಾರ ಹೊಣೆಗಾರಿಕೆ ಹೂವಿನ ಹಾದಿ ಅಲ್ಲ, ಮುಳ್ಳಿನ ಹಾಸಿಗೆ ಇದ್ದ ಹಾಗೆ ಎಂದು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್ ಅವರು ಅಭಿಪ್ರಾಯಪಟ್ಟರು.

ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾಗಿ ಮೂರು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯುಜೆ )ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಬಳಿಕ "ಮಾಧ್ಯಮ–ಸಂವಾದ"ದಲ್ಲಿ ಮಾತನಾಡಿದರು.

ಮಾಧ್ಯಮ ಸಲಹೆಗಾರ ಹುದ್ದೆ ಪ್ರತೀ ದಿನ ಸವಾಲಿನದ್ದು. ಬೆಳಗ್ಗೆ ಎದ್ದು ಪತ್ರಿಕೆಗಳನ್ನು ತಿರುವಿ ಹಾಕುವವರೆಗೂ ನನಗೆ ದುಗುಡ ಇದ್ದೇ ಇರುತ್ತದೆ. ಈ ಸವಾಲುಗಳನ್ನು ಪ್ರತೀ ದಿನ ನಿರ್ವಹಿಸುತ್ತಿದ್ದೇನೆ ಎನ್ನುವ ಸಮಾಧಾನ ಕೂಡ ಇದೆ. ಆದರೆ, ನನಗೆ ಒದಗಿ ಬಂದಿರುವ ಹೊಣೆಗಾರಿಕೆ ಬಗ್ಗೆ ನನಗೆ ಯಾವತ್ತೂ ಭ್ರಮ ನಿರಸನ ಆಗಿಲ್ಲ ಎಂದರು.

**ಸಿಎಂ ಯಾವತ್ತೂ ಹೇಳಿಲ್ಲ:** ಇವತ್ತಿನವರೆಗೂ ಮುಖ್ಯಮಂತ್ರಿಗಳು ಒಂದು ದಿನ ಕೂಡ, " ತಮ್ಮ ವಿರುದ್ಧ ಇಂಥಾ ಚಾನಲ್ ನಲ್ಲಿ ಸುದ್ದಿ ಬಂದಿದೆ. ನೋಡು" ಎನ್ನುವ ಒಂದು ಮಾತನ್ನೂ ಹೇಳಿಲ್ಲ. ಮಾಧ್ಯಮ ಸ್ವಾತಂತ್ರ್ಯಕ್ಕೆ ಮುಖ್ಯಮಂತ್ರಿಗಳು ಯಾವತ್ತೂ ಧಕ್ಕೆ ಆಗದಂತೆ ನೋಡಿಕೊಂಡಿದ್ದಾರೆ ಎಂದರು.

**ಕಠಿಣ ಷರತ್ತುಗಳು ವಾಪಸ್ಸು:** ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್ ನೀಡಲು ವಿಧಿಸಿರುವ ಕಠಿಣವಾದ ಎರಡು ಷರತ್ತುಗಳನ್ನು ಸಡಿಲಗೊಳಿಸಲು ಸಭೆ ಮಾಡಿ ತೀರ್ಮಾನಿಸಲಾಗಿದೆ. ಈ ಬಗ್ಗೆ ವಾರದಲ್ಲಿ ಆದೇಶ ಹೊರಡಿಸಲಾಗುವುದು. ಇದರಿಂದ ಆರು ಸಾವಿರಕ್ಕೂ ಹೆಚ್ಚಿನ ಪತ್ರಕರ್ತರಿಗೆ ಸವಲತ್ತು ಸಿಗುವ ಸಾಧ್ಯತೆಗಳಿವೆ ಎಂದರು.

ಪತ್ರಕರ್ತರ ಸಂಘ ಮತ್ತು ಪತ್ರಕರ್ತ ಸಮುದಾಯ ಅವರ ಒತ್ತಡದಿಂದಲೇ ರಾಜ್ಯದಲ್ಲಿ 'ಜಾಹಿರಾತು ನೀತಿ' ತರಲಾಗಿದೆ. ವೃತ್ತಿಪರವಾಗಿ ಕಷ್ಟಪಟ್ಟು ಪತ್ರಿಕೆ ಮಾಡುವವರಿಗೆ ನೆರವಾಗಬೇಕು ಎನ್ನುವ ಕಾಳಜಿ ಜಾಹಿರಾತು ನೀತಿಯ ಹಿಂದಿದೆ. ಜಾಹಿರಾತಿ ದರ ಪರಿಷ್ಕರಣೆ ಕೂಡ ಚರ್ಚೆಯಲ್ಲಿದೆ ಎಂದರು.

> **ಮೂವರಿಗೆ ಅರ್ಪಿಸಿದ ಕೆವಿಪಿ**
> ತಮಗೆ ಸಿಗುವ ಸಾರ್ವಜನಿಕ ಸನ್ಮಾನಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಕೋಲಾರದ ಪತ್ರಕರ್ತರು ಮತ್ತು ರಾಜ್ಯದ ಪತ್ರಕರ್ತ ಸಮುದಾಯಕ್ಕೆ ಅರ್ಪಿಸಿದ ಕೆ.ವಿ.ಪ್ರಭಾಕರ್ ಅವರು, ಇದಕ್ಕಾಗಿ ಕೃತಜ್ಞತೆ ಸಲ್ಲಿಸಿದರು.

**ಜಾಹಿರಾತು ನೀಡಿಕೆಯಲ್ಲಿನ ತಾರತಮ್ಯ ನಿವಾರಣೆಗೆ ಕ್ರಮ :** ಪತ್ರಿಕೆಗಳಿಗೆ ಜಾಹಿರಾತು ನೀಡುವ ವಿಚಾರದಲ್ಲಿ ಕೆಲವು ಸಮುದಾಯಗಳಿಗೆ ಮಾತ್ರ ಕೆನೆ ಪದರದ ಮಿತಿ ಹಾಕಿದ್ದು, ಒಂದು ಸಮುದಾಯಕ್ಕೆ ಮಾತ್ರ ಕೆನೆಪದರ ಇಲ್ಲದಿರುವುದರಿಂದ ಬಹುತೇಕ ಸಮುದಾಯಗಳ ಮಾಲೀಕರು, ಸಂಪಾದಕರುಗಳು ವಿಪರೀತ ನಷ್ಟ ಅನುಭವಿಸಿದ್ದಾರೆ ಎನ್ನುವ ಪ್ರಶ್ನೆಗೆ ಉತ್ತರಿಸಿ ಲೋಪಗಳ ಬಗ್ಗೆ ಸಭೆ ನಡೆಸಿ ಚರ್ಚಿಸಲಾಗಿದೆ. ಜಾಹಿರಾತು ನೀತಿಯಲ್ಲಿ ಬಹುತೇಕ ಸಮಸ್ಯೆಗಳು ಬಗೆಹರಿದಿವೆ ಎಂದರು.

**ವೃತ್ತಿಪರವಾಗಿ, ನಿಯಮಿತವಾಗಿ ಪ್ರಕಟವಾಗುವ:** ಸ್ಥಳೀಯ ಪತ್ರಿಕೆಗಳು ಮುಖ್ಯಮಂತ್ರಿಗಳ ಮೊದಲ ಆದ್ಯತೆಯಾಗಿದೆ. ಸ್ಥಳೀಯ ಮತ್ತು ಸಣ್ಣ ಪತ್ರಿಕೆಗಳಿಗೆ ಜಾಹಿರಾತಿನಲ್ಲಿ ತೊಂದರೆ ಆಗಬಾರದು ಎನ್ನುವ ನಿಲುವು ಮುಖ್ಯಮಂತ್ರಿಗಳದ್ದೂ ಆಗಿದೆ, ನನ್ನದೂ ಆಗಿದೆ ಎಂದರು.

**ಓದಿದ ಶಾಲೆಗೆ ನೆರವಾಗಿದ್ದು ಸಮಾಧಾನ ತಂದಿದೆ:** ಪತ್ರಕರ್ತ ಸಮುದಾಯಕ್ಕೆ, ಪತ್ರಿಕಾ ವಿತರಕ ಸಮುದಾಯಕ್ಕೆ ನೆರವಾಗುವ ಜೊತೆಗೆ ನೂರಾರು ರೀತಿಯ ನೆರವು ಸರ್ಕಾರದಿಂದ ಒದಗಿಸಲಾಗಿದೆ. ಇವುಗಳ ಆಚೆಗೆ ನಾನು ಓದಿದ ಶಾಲೆಗೆ ಸರ್ಕಾರದ ನೆರವು ಒದಗಿಸಲು ಸಾಧ್ಯವಾಗಿದ್ದು, ಈ ಸರ್ಕಾರಿ ಶಾಲೆಗೆ ಮರುಜೀವ ಬಂದು ವಿದ್ಯಾರ್ಥಿಗಳ ಸಂಖ್ಯೆ 100ರ ಗಡಿ ದಾಟಿರುವುದು ಸಮಾಧಾನ ತಂದಿದೆ ಎಂದರು.



**ಪರಿಣಾಮಕಾರಿ ಕೆಲಸ:** KUWJ ಅಧ್ಯಕ್ಷರಾದ ಶಿವಾನಂದ ತಗಡೂರು ಮಾತನಾಡಿ, ಪ್ರಭಾಕರ್ ಅವರು ಸರ್ಕಾರ ಮತ್ತು ಸಂಘಟನೆ ನಡುವೆ ಸೇತುವೆ ರೀತಿಯಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಿದ್ದಾರೆ ಎಂದು ಶ್ಲಾಘಿಸಿದರು.

ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೆಷಾ ಖಾನಂ ಮಾತನಾಡಿ, ಪ್ರಭಾಕರ್ ಅಧಿಕಾರ ಸ್ವೀಕಾರ ಮಾಡಿ ಮೂರು ವರ್ಷ ತುಂಬಿದ ಸಂದರ್ಭದ ಕಾರ್ಯಕ್ರಮವನ್ನು ಕೆಯುಡಬ್ಲ್ಯುಜೆ ಅಚ್ಚುಕಟ್ಟಾಗಿ ಸಂಘಟಿಸಿರುವುದಕ್ಕೆ ಅಭಿನಂದನೆ ಸಲ್ಲಿಸಿದರು. ಪ್ರಭಾಕರ್ ಇನ್ನೂ ಉನ್ನತ ಹುದ್ದೆ ಅಲಂಕರಿಸಲಿ ಎಂದು ಶುಭ ಹಾರೈಸಿದರು.

ರಾಜ್ಯ ಪದಾಧಿಕಾರಿಗಳಾದ ಜಿ.ಸಿ.ಲೋಕೇಶ, ಸೋಮಶೇಖರ್ ಕೆರಗೋಡು, ವಾಸುದೇವ ಹೊಳ್ಳ, ಎನ್. ರವಿಕುಮಾರ್ ಸೇರಿ ಹಲವು ಪ್ರಮುಖರು ಉಪಸ್ಥಿತರಿದ್ದರು.

# ತಾಲ್ಲೂಕಿನ ರಸ್ತೆಗಳ ಅಭಿವೃದ್ಧಿಗೆ ಪ್ರಥಮ ಅಧ್ಯತೆ ನೀಡುತ್ತಿದ್ದೇನೆ. ಶಾಸಕ ಹೆಚ್ ಟಿ ಮಂಜು ನುಡಿ

**ಕೆ.ಆರ್.ಪೇಟೆ :** ಕ್ಷೇತ್ರದ ಸಮಗ್ರ ಅಭಿವೃದ್ಧಿಯೇ ನನ್ನ ಏಕಮಾತ್ರ ಧ್ಯೇಯವಾಗಿದೆ ತಾಲ್ಲೂಕಿನ ರಸ್ತೆಗಳ ಅಭಿವೃದ್ಧಿಗೆ ಪ್ರಥಮ ಅಧ್ಯತೆ ನೀಡುತ್ತಿದ್ದೇನೆ. ಒಂದು ತಾಲ್ಲೂಕಿನ ಅಭಿವೃದ್ಧಿ ಆಗಿದೆ ಎಂದು ಹೊರಗಡೆ ತಾಲ್ಲೂಕಿನ ಜನತೆಗೆ ತಿಳಿಯಬೇಕಾದರೆ ಮೊದಲು ರಸ್ತೆಗಳ ಅಭಿವೃದ್ಧಿಯಾದರೆ ಮಾತ್ರ ತಾಲ್ಲೂಕಿಗೆ ಒಳ್ಳೆಯ ಹೆಸರು ಬರಲು ಸಾಧ್ಯವಾಗುತ್ತದೆ ಎಂದು ಶಾಸಕ ಹೆಚ್.ಟಿ.ಮಂಜು ತಿಳಿಸಿದರು.

ಅವರು ತಾಲ್ಲೂಕಿನ ಬೂಕನಕೆರೆ ಹೋಬಳಿಯ ನಾಟನಹಳ್ಳಿ, ಬಿ.ಬಾಚಹಳ್ಳಿ, ಹೆಮ್ಮಡಹಳ್ಳಿ ಗ್ರಾಮಗಳಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿ



ತಾಲ್ಲೂಕಿನಾದ್ಯಂತ ಸಾಕಷ್ಟು ಕಡೆಗಳಲ್ಲಿ ಹತ್ತಾರು ವರ್ಷಗಳಿಂದ ಡಾಂಬರು ಕಾಣದ ಗುಂಡಿ ರಸ್ತೆಗಳೇ ಇವೆ. ಎಲ್ಲಾ ರಸ್ತೆಗಳ ಅಭಿವೃದ್ಧಿಗೆ ಹಾಗೂ, ಶಿಥಿಲಗೊಂಡಿರುವ ಸೇತುವೆಗಳನ್ನು ಪುನರ್ ಮಾಡಬೇಕಾದರೆ ಕನಿಷ್ಠ 500ಕೋಟಿ ರೂಪಾಯಿಗಳ ಅಗತ್ಯವಿದೆ. ಆದರೆ ಈಗಿನ ಕಾಂಗ್ರೆಸ್ ಸರಕಾರದ ನನ್ನ ಮನವಿಗೆ ಸೂಕ್ತವಾಗಿ ಸ್ಪಂದಿಸುತ್ತಿಲ್ಲ. ಆದರೂ ಸಹ ಸಂಬಂಧಪಟ್ಟ ಸಚಿವರು ಹಾಗೂ ಇಲಾಖೆಯ ಮುಖ್ಯ ಅಧಿಕಾರಿಗಳಿಗೆ ಸಮಸ್ಯೆಗಳನ್ನು ಮನವರಿಕೆ ಮಾಡಿಕೊಟ್ಟು ಅಲ್ಪ ಸ್ವಲ್ಪ ಅನುಧಾನ ಬಿಡುಗಡೆ ಮಾಡಿಸಿಕೊಂಡು ಬಂದು ಪ್ರಮುಖ ಸಂಪರ್ಕ ರಸ್ತೆಗಳ ಅಭಿವೃದ್ಧಿಗೆ ಅಧ್ಯತೆ ನೀಡಿ ರಸ್ತೆ ಮತ್ತು ಸೇತುವೆಗಳ ಅಭಿವೃದ್ಧಿಗೆ ಕೈಜೋಡಿಸುತ್ತಿದ್ದೇನೆ. ಜೊತೆಗೆ ಶಾಸಕರಿಗೆ ನೀಡುತ್ತಿರುವ ಪ್ರದೇಶಾಭಿವೃದ್ಧಿ ನಿಧಿ ಅನುಧಾನದಲ್ಲಿ ಪ್ರತಿಯೊಂದು ಗ್ರಾಮಗಳಿಗೂ ತಲಾ 10ಲಕ್ಷ ರೂಪಾಯಿಗಳಂತೆ ಹಂಚಿಕೆ ಮಾಡಿ ಗ್ರಾಮಗಳಲ್ಲಿ ತೀರಾ ಹದಗೆಟ್ಟಿರುವ ರಸ್ತೆ ಹಾಗೂ ಬಾಕ್ಸ್ ಡ್ರೈನೇಜ್ ನಿರ್ಮಾಣಕ್ಕೆ ಒತ್ತು ನೀಡಲಾಗುತ್ತಿದೆ. ಈ ಭಾರಿ ನಾನು ಶಾಸಕನಾಗಿದ್ದು ನಿರೀಕ್ಷಿತ ಸಾಧನೆ ಮಾಡಲು ಸಾಧ್ಯವಾಗುತ್ತಿಲ್ಲ. ಹಾಗಾಗಿ 2028ಕ್ಕೆ ನಮ್ಮ ಜೆಡಿಎಸ್ – ಬಿಜೆಪಿ– ಮೈತ್ರಿ ಸರಕಾರ ಬರುವುದು ಸೂರ್ಯ ಚಂದ್ರರು ಉದಯಿಸುವಷ್ಟೇ ಸತ್ಯವಾಗಿದೆ. ಆದ್ದರಿಂದ ತಾಲ್ಲೂಕಿನ ಜನತೆ ನನಗೆ ಮತ್ತೊಮ್ಮೆ ಆಶೀರ್ವಾದ ಮಾಡಿದರೆ ತಾಲ್ಲೂಕಿನ ಸರ್ವಾಂಗೀಣ ಅಭಿವೃದ್ಧಿಗೆ ಸಾವಿರಾರು ಕೋಟಿ ರೂಪಾಯಿಗಳ ಅನುಧಾನ ತಂದು ಕೊಡುತ್ತೇನೆ ಎಂದು ಭರವಸೆ ನೀಡಿದರು. ನಮ್ಮ ಜೆಡಿಎಸ್ ಪಕ್ಷದ ಕಾರ್ಯಕರ್ತರು ಸೈನಿಕರಂತಹ ಕಾರ್ಯಕರ್ತರು ನಮ್ಮ ತಾಲ್ಲೂಕಿನಲ್ಲಿ ಸದಾ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡಿರುತ್ತಾರೆ. ಇಂತಹ ಚಿನ್ನ ದಂತಹ ಕಾರ್ಯಕರ್ತರು ಸ್ಪರ್ಧಿಸುವ ಗ್ರಾಮ ಪಂಚಾಯತ್, ತಾಲ್ಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಚುನಾವಣೆಗಳಲ್ಲಿ ಅವರ ಗೆಲುವಿಗಾಗಿ ನಾನು ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ. ಸದಾ ನಮ್ಮ ಕಾರ್ಯಕರ್ತರ ಕಷ್ಟ ಸುಖಗಳಿಗೆ ಭಾಗಿಯಾಗಿ ಅವರ ಬೆನ್ನೆಲುಭಾಗಿ ಕೆಲಸ ಮಾಡುತ್ತೇನೆ. ಹಾಗಾಗಿ ನಮ್ಮ ಪಕ್ಷದ ಕಾರ್ಯಕರ್ತರು ಮುಂಬರುವ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಗ್ರಾಮ ಪಂಚಾಯತ್ ಹಾಗೂ ಪುರಸಭಾ ಚುನಾವಣೆಗೆ ಈಗಿನಿಂದಲೇ ಸಜ್ಜಾಗಬೇಕು. ನಾನು ಶಾಸಕನಾಗಲು ಕಾರ್ಯಕರ್ತರಾದ ತಾವು ಹೇಗೆ ಪ್ರಾಮಾಣಿಕ ಕೆಲಸ ಮಾಡುವಿರೋ ಹಾಗೇಯೇ ನಾನೂ ಸಹ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ನಿಮ್ಮ ಗೆಲುವಿಗೆ ಪೂರಕ ವಾತಾವರಣ ಸೃಷ್ಟಿಸಲು ನಾನು ನಿಮ್ಮೊಂದಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದು ಶಾಸಕರು ಕಾರ್ಯಕರ್ತರಿಗೆ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಜೆಡಿಎಸ್ ಮುಖಂಡರಾದ ಬೋರ್‌ವೆಲ್ ಮಹೇಶ್, ಲೋಕೋಪಯೋಗಿ ಇಲಾಖೆಯ ಎಇಇ ರಾಝಿಕಾ, ಇಂಜಿನಿಯರ್ ಬಸವೇಗೌಡ, ಪ್ರಥಮ ದರ್ಜೆ ಗುತ್ತಿಗೆದಾರರಾದ ಎನ್.ಆರ್. ರಮೇಶ್,ಬಳ್ಳೇಕೆರೆ ಮನು ಪುರಸಭಾ ಮಾಜಿ ಸದಸ್ಯ ಹೆಚ್.ಡಿ.ಅಶೋಕ್, ಯುವ ಮುಖಂಡರಾದ ಶರತ್ ಚಂದ್ರ,ಪರಶರಣ್,ಬಳ್ಳೇಕೆರೆ ಕುಮಾರ,ಚೌಡೇನಹಳ್ಳಿ ಕಿಟ್ಟಿ, ಶಾಸಕರ ಆಪ್ತ ಸಹಾಯಕ ಅರಳಕುಪ್ಪೆ ಪ್ರತಾಪ್ ಸೇರಿದಂತೆ ನಾಟನಹಳ್ಳಿ, ಬಿ.ಬಾಚಳ್ಳಿ, ಹೆಮ್ಮಡಹಳ್ಳಿ ಗ್ರಾಮದ ಮುಖಂಡರುಗಳು, ಯುವಕರು, ಗ್ರಾಮಸ್ಥರು ಉಪಸ್ಥಿತರಿದ್ದರು.

## "ಮೈದಾನದ ಮಹಾಗೋಡೆ: ಥಂಗರಾಜ್"



| ಡಾ.ಸುಧಾಕರ.ಜಿ.ಲಕ್ಕವಳ್ಳಿ

ಭಾರತೀಯ ಫುಟ್‌ಬಾಲ್‌ನ ಸುವರ್ಣ ಯುಗದಲ್ಲಿ ಅಪ್ರತಿಮ ರಕ್ಷಕರಾಗಿ ಹೆಸರಾದವರು ಪೀಟರ್ ಥಂಗರಾಜ್. ಆರು ಅಡಿ ಎರಡು ಇಂಚು ಎತ್ತರದ ಈ ದೈತ್ಯ ಪ್ರತಿಭೆ ಗೋಲುಪೆಟ್ಟಿಗೆಯ ಮುಂದೆ ನಿಂತರೆ ಎದುರಾಳಿಗಳಿಗೆ ಗೋಲು ಸಾಧಿಸುವುದು ಬಹುತೇಕ ಅಸಾಧ್ಯವಾಗುತ್ತಿತ್ತು. ಅವರ ಜೀವನವು ಕೇವಲ ಸಾಧನೆಗಳ ಸರಮಾಲೆಯಲ್ಲ, ಅದು ಪರಿಶ್ರಮ, ಶಿಸ್ತು ಮತ್ತು ಅಚಲ ಛಲದ ಪ್ರೇರಣಾದಾಯಕ ಪಯಣ.

ಹೈದರಾಬಾದ್‌ನಲ್ಲಿ ಜನಿಸಿದ ಥಂಗರಾಜ್ ತಮ್ಮ ಕ್ರೀಡಾ ಜೀವನವನ್ನು ಆರಂಭದಲ್ಲಿ ಜಾವೆಲಿನ್ ಎಸೆತಗಾರರಾಗಿ ಪ್ರಾರಂಭಿಸಿದರು. ನಂತರ ಭಾರತೀಯ ಭೂಸೇನೆಯ ಮದ್ರಾಸ್ ಸ್ಯಾಪರ್ಸ್ ಸೇರ್ಪಡೆಯಾದ ಬಳಿಕ ಅವರ ಕ್ರೀಡಾ ದಿಕ್ಕು ಸಂಪೂರ್ಣ ಬದಲಾಗಿದೆ. ಸೈನ್ಯದ ಕಠಿಣ ತರಬೇತಿ, ಶಿಸ್ತು ಮತ್ತು ನಿಯಮಬದ್ಧ ಜೀವನಶೈಲಿ ಅವರನ್ನು ವಿಶ್ವದರ್ಜೆಯ ಗೋಲ್‌ಕೀಪರ್ ಆಗಿ ರೂಪಿಸಿತು.

ಸ್ಪೂರ್ತಿ ಸುಧೆ - 26



1962ರ ಜಕಾರ್ತ ಏಷ್ಯನ್ ಗೇಮ್ಸ್‌ನಲ್ಲಿ ಭಾರತ ಚಿನ್ನದ ಪದಕ ಗೆಲ್ಲುವಲ್ಲಿ ಥಂಗರಾಜ್ ಅಭೇದ್ಯ ಗೋಡೆಯಾಗಿ ನಿಂತಿದ್ದರು. 1958ರಲ್ಲಿ ಏಷ್ಯಾದ ಅತ್ಯುತ್ತಮ ಗೋಲ್‌ಕೀಪರ್ ಎಂಬ ಗೌರವ ಅವರಿಗೆ ಲಭಿಸಿತು. 1956 ಮತ್ತು 1960ರ ಒಲಿಂಪಿಕ್ಸ್‌ನಲ್ಲಿ ಭಾರತದ ಪರವಾಗಿ ಗಮನಾರ್ಹ ಪ್ರದರ್ಶನ ನೀಡಿ ದೇಶದ ಕೀರ್ತಿಯನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಎತ್ತಿಹಿಡಿದರು. ಅವರ ಈ ಸಾಧನೆಗಳಿಗೆ ಮಾನ್ಯತೆ ನೀಡಿ 1967ರಲ್ಲಿ ಅರ್ಜುನ ಪ್ರಶಸ್ತಿ ಪ್ರದಾನಿಸಲಾಯಿತು.

ನಿವೃತ್ತಿಯ ನಂತರ ಆರ್ಥಿಕ ಹಾಗೂ ಆರೋಗ್ಯ ಸಮಸ್ಯೆಗಳನ್ನು ಎದುರಿಸಿದರೂ, ಕ್ರೀಡೆಯ ಮೇಲಿನ ಅವರ ನಿಷ್ಠೆ ಎಂದಿಗೂ ಕುಂದಲಿಲ್ಲ. ಶಿಸ್ತು, ಆತ್ಮವಿಶ್ವಾಸ ಮತ್ತು ಸವಾಲುಗಳಿಗೆ ಹೊಂದಿಕೊಳ್ಳುವ ಗುಣಗಳು ಇಂದಿನ ಯುವ ಕ್ರೀಡಾಪಟುಗಳಿಗೆ ಮಹತ್ತರ ಪಾಠ. ಮೈದಾನದಲ್ಲಿ ಮಿಂಚಿದ ಈ ಮರೆತುಹೋದ ಹೀರೊ ಇಂದಿಗೂ ಕ್ರೀಡಾಭಿಮಾನಿಗಳ ಹೃದಯದಲ್ಲಿ ಅಮರರಾಗಿದ್ದಾರೆ.

# ನಿಯಮಿತ ಹವ್ಯಾಸಗಳು... ಯಶಸ್ಸಿನ ಸೋಪಾನಗಳು



| ವೀಣಾ ಹೇಮಂತ್‌ಗೌಡ ಪಾಟೀಲ್



ಅದೊಂದು ಪುಟ್ಟ ಹಳ್ಳಿಯಲ್ಲಿ ತನ್ನ ಪಾಲಕರು ಹಾಗೂ ಪುಟ್ಟ ಸಹೋದರನೊಂದಿಗೆ ವಾಸವಾಗಿದ್ದ ಆ ಯುವಕ ಸಂದೀಪ ಕಳೆದ ಕೆಲ ತಿಂಗಳುಗಳ ಹಿಂದೆ ತನ್ನ ಪದವಿ ಶಿಕ್ಷಣವನ್ನು ಪೂರೈಸಿದ್ದ. ಆದರೆ ಯಾವುದೇ ಕೆಲಸವನ್ನು ಹುಡುಕುವ ಯೋಚನೆಯನ್ನು ಆತ ಮಾಡಿರಲಿಲ್ಲ. ಮುಂಜಾನೆ ಯಾವುದೋ ಹೊತ್ತಿಗೆ ಎದ್ದು ನಂತರ ತನ್ನ ದಿನಚರಿಯನ್ನು ಪೂರೈಸುತ್ತಿದ್ದನಾತ. ಆತನ ನಿಷ್ಕ್ರಿಯತೆ ಆತನ ಪಾಲಕರಲ್ಲಿ ಬೇಸರವನ್ನುಂಟು ಮಾಡಿದ್ದು ಈತನಿಗೆ ಬುದ್ಧಿ ಯಾವಾಗ ಬರುತ್ತದೆ ಎಂದು ಅವರು ಸದಾ ಚಿಂತಿಸುವಂತೆ ಆಗಿತ್ತು. ಇದಕ್ಕೆ ಜೊತೆಯಾಗಿ ನೆರೆಹೊರೆಯುವುದು ಸಂದೀಪ ಏನು ಮಾಡುತ್ತಾನೆ? ಮುಂದೆ ಏನು ಯೋಜನೆಗಳನ್ನು ಹಾಕಿಕೊಂಡಿದ್ದಾನೆ? ಎಂದು ಪ್ರಶ್ನಿಸಲು ಆರಂಭಿಸಿದ್ದರು.

ಇನ್ನೇನು ಸುಧಾರಿಸುತ್ತಾನೆ, ತನ್ನ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುತ್ತಾನೆ ಎಂಬ ಪಾಲಕರ ಕನಸು ಕನಸಾಗಿಯೇ ಉಳಿಯುತ್ತದೆ ಎಂಬ ಭಯ ಅವರಲ್ಲಿ ಉಂಟಾಯಿತು. ಅದೊಮ್ಮೆ ಮಗಳನ್ನು ನೋಡಲು ಬಂದ ಆತನ ಅಜ್ಜ ಮನೆಯ ಪರಿಸ್ಥಿತಿಯನ್ನು ಅರಿತರು.

ಮನೆಯ ಹಿತ್ತಲಿನಲ್ಲಿದ್ದ ದೊಡ್ಡ ಮರವನ್ನು ತೋರಿಸಿದ

ಅವರು ಮೊಮ್ಮಗ ಸಂದೀಪನಿಗೆ "ಈ ಗಿಡ ಒಂದೇ ದಿನಕ್ಕೆ ಇಷ್ಟು ದೊಡ್ಡದಾಗಿ ಬೆಳೆದಿಲ್ಲ ಪ್ರತಿದಿನ ಕೊಂಚ ಕೊಂಚ ತನ್ನ ಗಾತ್ರವನ್ನು ಹೆಚ್ಚಿಸಿಕೊಂಡು ಇದು ನಿರಂತರವಾಗಿ ಬೆಳೆದ ಪರಿಣಾಮವೇ ಇಂದು ಇಷ್ಟು ದೊಡ್ಡ ಮರವಾಗಿದೆ... ಹಾಗೆಯೇ ನಾವು ಒಳ್ಳೆಯ ಅಭ್ಯಾಸಗಳನ್ನು ಬದುಕಿನಲ್ಲಿ ಹೊಂದಿ ಅವುಗಳ ಮೂಲಕ ಯಶಸ್ಸನ್ನು ಸಾಧಿಸಬೇಕು" ಎಂದು ಅವರು ಸೂಚ್ಯವಾಗಿ ಹೇಳಿದರು.... ಆದರೆ ಸಂದೀಪನ ಮೇಲೆ

ಅಜ್ಜನ ಈ ಮಾತುಗಳು ಯಾವುದೇ ಪರಿಣಾಮವನ್ನು ಬೀರಲಿಲ್ಲ. ಆತನ ನಿಷ್ಕ್ರಿಯತೆ ಹಾಗೆಯೇ ಮುಂದುವರೆಯಿತು.

ಇದರಿಂದ ಬೇಸತ್ತ ಸಂದೀಪನ ತಾಯಿ ಅದೊಂದು ದಿನ ಊರಿನ ಹೊರಗೆ ವಾಸಿಸುತ್ತಿದ್ದ ಗುರುಗಳ ಬಳಿ ಆತನನ್ನು ಕರೆದೊಯ್ದರು. ತಾಯಿಯ ಸೂಚನೆಯಂತೆ ಗುರುಗಳಿಗೆ ನಮಸ್ಕರಿಸಿದ ಯುವಕನನ್ನು ನೋಡಿ ಗುರುಗಳು ಮೆಲು ನಗೆಯನ್ನು ಸೂಸಿ ಅತ್ಯಂತ ಪ್ರೀತಿಯಿಂದ 'ಹೇಳು ಏನು ನಿನ್ನ ತೊಂದರೆ" ಎಂದು ಕೇಳಿದರು.

'ಗುರುಗಳೇ ನನಗೆ ಜೀವನದಲ್ಲಿ ದೊಡ್ಡ ಸಾಧನೆ ಮಾಡುವ, ಹೆಚ್ಚು ಹಣವನ್ನು ಸಂಪಾದಿಸುವ ಉದ್ಯೋಗವನ್ನು ಹೊಂದುವ ಆಸೆ, ಆದರೆ ಹೇಗೆ ಮುಂದುವರಿಯಬೇಕು ಎಂಬುದು ಗೊತ್ತಾಗುತ್ತಿಲ್ಲ ಇದರಲ್ಲಿಯೇ ನನ್ನ ದಿನಗಳು ಕಳೆದು ಹೋಗುತ್ತಿವೆ' ಎಂದು ಬೇಸರದಿಂದ ಹೇಳಿದ.

ಆತನ ಮಾತಿನ ಶೈಲಿಯಿಂದ ಆತನ ಗೊಂದಲವನ್ನು ಅರಿತ ಗುರುಗಳು ಪ್ರತಿದಿನ ನೀನು ಮಾಡುವ ಯಾವುದಾದರೂ ಮೂರು ಕೆಲಸಗಳನ್ನು ಒಂದು ನೋಟ್ ಪುಸ್ತಕದಲ್ಲಿ ಬರೆಯಬೇಕು ಎಂದು ಹೇಳಿದರು. ಕುಡಿದ ಒಂದು ಲೋಟ ನೀರಿನ ಬಗ್ಗೆ ಕೂಡ ಬರೆಯಬಹುದು ಎಂದು ಅವರು ಹೇಳಿದಾಗ ಅರೆ ! ಇಷ್ಟು ಚಿಕ್ಕ ವಿಷಯಗಳನ್ನು ಕೂಡ ಬರೆದು ದಾಖಲಿಸುವುದು ಅಷ್ಟೊಂದು ಕಷ್ಟದ ವಿಷಯವಲ್ಲ ಎಂದು ಮನಸ್ಸಿನಲ್ಲಿ ಯೋಚಿಸಿದ ಸಂದೀಪ ಆಯ್ತು ಎಂದು ಹೇಳಿ ಮನೆಗೆ ಬಂದ.

ಮರುದಿನ ಮುಂಜಾನೆ ತಾನು ಮಾಡಿದ ಎಲ್ಲಾ ಕೆಲಸಗಳಲ್ಲಿ ಮೂರು ಮುಖ್ಯ ಕೆಲಸಗಳನ್ನು ನೋಟ್ ಪುಸ್ತಕದಲ್ಲಿ ದಾಖಲಿಸಿದ ಹೀಗೆ ಎರಡು ಮೂರು ದಿನಗಳ ಕಾಲ ತಾನು ಮಾಡಿದ ಕೆಲಸಗಳನ್ನು ದಾಖಲಿಸಿದ ಸಂದೀಪ ನಾಲ್ಕನೆಯ ದಿನ ತುಸು ತಡವಾಗಿ ಎದ್ದನಲ್ಲದೇ ನೋಟ್ ಪುಸ್ತಕದಲ್ಲಿ ಬರೆಯುವುದನ್ನು ತಪ್ಪಿಸಿದ. 5 6ನೇ ದಿನ ಮತ್ತೆ ಎಲ್ಲವನ್ನು ನೋಟ್ ಪುಸ್ತಕದಲ್ಲಿ ದಾಖಲಿಸಿದ ಆತ ಏಳನೇ ದಿನ ಮತ್ತೆ ದಾಖಲಿಸಲು ಎಡವಿದ.

ವಾರದ ನಂತರ ಬಂದು ಗುರುಗಳನ್ನು ಆತ ಭೇಟಿಯಾದಾಗ ಆತನ ಮುಖದಲ್ಲಿ ಇದ್ದ ಮ್ಲಾನತೆಯನ್ನು ಗುರುಗಳು ಗಮನಿಸಿದರು. ಸಪ್ಪಗಿರುವೆ ಏಕೆ ? ಎಂದು ಗುರುಗಳು ಕೇಳಿದರು. ಅದಕ್ಕೆ ಉತ್ತರವಾಗಿ ಸಂದೀಪ ಮೆಲುವಾಗಿ

'ನೀವು ಹೇಳಿದ ಅತ್ಯಂತ ಪುಟ್ಟ ಕೆಲಸವನ್ನು ಕೂಡ ನನಗೆ ಸಂಪೂರ್ಣವಾಗಿ ಮಾಡಿ ಮುಗಿಸಲು ಸಾಧ್ಯವಾಗಲಿಲ್ಲ. ಒಂದು ವಾರದಲ್ಲಿ ನಾನು ಸರಿ ಸುಮಾರು ಎರಡು ಮೂರು ಬಾರಿ ದಾಖಲಿಸಲು ಸಾಧ್ಯವಾಗಿಲ್ಲ' ಎಂದು ಹೇಳಿದ.

ನಸುನಕ್ಕ ಗುರುಗಳು ಪರವಾಗಿಲ್ಲ ಕನಿಷ್ಠ ಪಕ್ಷ ನಿನಗೆ ನೀನು ಮಾಡಿದ ತಪ್ಪಿನ ಅರಿವಾದರೂ ಆಗಿದೆ ಅಲ್ಲವೇ. ಇದೀಗ ನೀನು ಮನೆಗೆ ಮರಳಿ ಮತ್ತೆ ನಿನ್ನ ಪ್ರಯತ್ನವನ್ನು ಮುಂದುವರಿಸು ಮುಂದಿನ ವಾರ ಬಾ ಎಂದು ಹೇಳಿದರು. ಗುರುಗಳ ಮಾತಿನಿಂದ ಆಶಾಭಾವ ಹೊಂದಿದ ಸಂದೀಪ ಮನೆಗೆ ಮರಳಿದ. ಈ ಬಾರಿ ಆತ ಮುಂಜಾನೆ ನಸುಕಿನ ಜಾವದಲ್ಲಿ ಎದ್ದು ಒಂದಷ್ಟು ವ್ಯಾಯಾಮ ಮಾಡುವುದನ್ನು ರೂಢಿಸಿಕೊಂಡ ದೂರ ಬೆಟ್ಟದವರೆಗೆ ನಡೆದು ಪೂರೈಸಿದ. ಆದರೂ ಕೂಡ ಒಂದೆರಡು ದಿನ ಮತ್ತೆ ತಾನು ಮಾಡಿದ ಕೆಲಸಗಳನ್ನು ದಾಖಲಿಸುವುದನ್ನು ತಪ್ಪಿಸಿದ.

ವಾರದ ನಂತರ ಸಂದೀಪ ತನ್ನ ಗುರುಗಳ ಬಳಿ ಹೋಗಿ ನೋಟ್ ಪುಸ್ತಕವನ್ನು ಅವರ ಮುಂದೆ ಹಿಡಿದಾಗ ಗುರುಗಳು ಪರವಾಗಿಲ್ಲ ತುಸು ಹೆಚ್ಚಿನ ಪ್ರಗತಿಯನ್ನು ಸಾಧಿಸಿರುವೆ ಪ್ರತಿದಿನ ನಿನ್ನ ಪ್ರಯತ್ನದ ಶೇಕಡ ಒಂದನ್ನು ನೀನು ಬಳಸುವ ಮೂಲಕ ನಿರಂತರ ಯಶಸ್ಸನ್ನು ಪಡೆಯಬಹುದು ಎಂದು ತಿಳಿಹೇಳಿ ಮತ್ತೆ ಇದೇ ರೀತಿ ಮುಂದುವರೆಯಲು ಕೆಲವು ಸಲಹೆ ಸೂಚನೆಗಳನ್ನು ನೀಡಿ ಆತನ ಬೆನ್ನು ಚಪ್ಪರಿಸಿ ಕಳುಹಿಸಿ ಕೊಟ್ಟರು.

ಹೀಗೆಯೇ ಮೂರು ವಾರಗಳು ಕಳೆಯುವ ಹೊತ್ತಿಗೆ ಆತನಲ್ಲಿ ಪ್ರತಿದಿನ ಮುಂಜಾನೆ ಬೇಗನೆ ಏಳುವ, ಆರೋಗ್ಯದ ಕುರಿತು ಕಾಳಜಿ ವಹಿಸುವ ನಿಟ್ಟಿನಲ್ಲಿ ವ್ಯಾಯಾಮ ನಡುಗೆಗಳಲ್ಲಿ ತೊಡಗಿಕೊಂಡ ಕಾರಣ ಯವ್ವನದ ಕಾಂತಿ ಚಿಮ್ಮತೊಡಗಿತ್ತು. ನಿಶ್ಚಿತ ಉದ್ದೇಶವಿಟ್ಟುಕೊಂಡು ಮನೆಯ ಕೆಲಸ ಕಾರ್ಯಗಳಲ್ಲಿ ಆತ ತನ್ನನ್ನು ತಾನು ತೊಡಗಿಸಿಕೊಂಡ ಪರಿಣಾಮವಾಗಿ

ಆತನಲ್ಲಿ ಒಂದು ಬಗೆಯ ಶಿಸ್ತು ಮೂಡಲಾರಂಭಿಸಿತ್ತು. ಈ ಹಿಂದಿನಂತೆ ಮೊಬೈಲ್ ಬಳಸದ ಪರಿಣಾಮವಾಗಿ ಆತ ತನ್ನ ಶೈಕ್ಷಣಿಕ ಚಟುವಟಿಕೆಗಳಲ್ಲಿ ಹೆಚ್ಚು ತೊಡಗಿಸಿಕೊಂಡನು. ಹೆಚ್ಚಿನ ಜ್ಞಾನವನ್ನು ಸಂಪಾದಿಸಲು ಪುಸ್ತಕಗಳ ಮೊರೆ ಹೋದ.

ತಂದೆಗೆ ಕೃಷಿ ಕೆಲಸದಲ್ಲಿ ಸಹಾಯ ತಾಯಿಗೆ ಮನೆ ಕೆಲಸದಲ್ಲಿ ಸಹಭಾಗಿತ್ವ ಹಾಗೂ ಪುಟ್ಟ ಸೋದರನಿಗೆ


ಆತನ ಓದಿನಲ್ಲಿ ನೆರವನ್ನು ನೀಡುವ ಮೂಲಕ ಮನೆಯವರ ಮೆಚ್ಚುಗೆಗೆ ಪಾತ್ರನಾದ. ಮೂರು ನಾಲ್ಕು ವಾರ ಕಳೆಯುವಷ್ಟರಲ್ಲಿ ಆತನಲ್ಲಿ ಉಂಟಾದ ಈ ಬದಲಾವಣೆಯ ಬೆಳವಣಿಗೆ ಗ್ರಾಮದ ಜನರಲ್ಲಿ ಕೂಡ ಅಚ್ಚರಿಯನ್ನುಂಟು ಮಾಡಿತು. ಎಲ್ಲರೂ ಆತನನ್ನು ಪ್ರಶಂಸಿಸಲು ಆರಂಭಿಸಿದರು. ಇದ್ದರೆ ಇಂಥ ಮಗನಿರಬೇಕು ಎಂದು ಹೇಳತೊಡಗಿದರು.

ಎರಡು ತಿಂಗಳು ಕಳೆಯುವಷ್ಟರಲ್ಲಿ ಆ ಊರಿಗೆ ಬಂದ ಬಹುರಾಷ್ಟ್ರೀಯ ಕಂಪನಿಯ ಅಧಿಕಾರಿಗಳು ಪದವೀಧರ ವಿದ್ಯಾರ್ಥಿಗಳಿಗೆ ನೌಕರಿ ಕೊಡುವ ನಿಟ್ಟಿನಲ್ಲಿ ಅವರನ್ನು ಸಂದರ್ಶನ ಮಾಡಲು ಆರಂಭಿಸಿದರು. ತಾನು ಕೂಡ ಅವರ ಸಂದರ್ಶನದಲ್ಲಿ ಪಾಲ್ಗೊಂಡ ಸಂದೀಪ ಲಿಖಿತ ಹಾಗೂ ಮೌಖಿಕ ಪರೀಕ್ಷೆಗಳಲ್ಲಿ ಚೆನ್ನಾಗಿ ಉತ್ತರಿಸಿ ಅತ್ಯುನ್ನತ ಅಂಕಗಳೊಂದಿಗೆ ಪಾಸಾದ.... ಹತ್ತಿರದ ಪಟ್ಟಣದಲ್ಲಿ 5 ಅಂಕಿಯ ಸಂಬಳದ ನೌಕರಿ, ವಾಸಕ್ಕೆ ಮನೆ ಹಾಗೂ ಮತ್ತಿತರ ಸೌಲಭ್ಯಗಳನ್ನು ಹೊಂದಿದ ನೌಕರಿ ಆತನ ಕೈ ಸೇರಿತ್ತು. ಗ್ರಾಮದ ಎಲ್ಲರೂ ಆತನ ಅದೃಷ್ಟವನ್ನು ಹೊಗಳುವವರೇ.

ಇನ್ನೇನು ನಾಳೆ ನೌಕರಿಗೆ ಹೋಗಿ ಸೇರಿಕೊಳ್ಳಬೇಕು ಎಂಬ ಹೊತ್ತಿನಲ್ಲಿ ಆತ ಗುರುಗಳ ಬಳಿ ಹೋದ ಈಗಾಗಲೇ ಗ್ರಾಮದ ಎಲ್ಲ ವಿಷಯಗಳು ಗುರುಗಳಿಗೆ ಅರಿವಾಗಿತ್ತು. ತಮಗೆ ನಮಸ್ಕರಿಸಿದ ಸಂದೀಪನ ಬೆನ್ನನ್ನು ತಟ್ಟಿದ ಅವರು ಆತನನ್ನು ಬಾಚಿ ತಬ್ಬಿಕೊಂಡರು. ಸಂದೀಪನ ಕಣ್ಣುಗಳಲ್ಲಿ ನೀರಿನ ಪಸೆಯಿತು ಆದರೆ ಮುಖದಲ್ಲಿ ಗುರುಗಳ ಕುರಿತ ಗೌರವ ಭಾವ. ಅತ್ಯಂತ ನಮ್ರನಾಗಿ ನಾನು ನನ್ನ ಬದುಕಿನಲ್ಲಿ ಒಳ್ಳೆಯ ಹವ್ಯಾಸಗಳನ್ನು ಬೆಳೆಸಿಕೊಳ್ಳಲು

ಸಲಹೆ ನೀಡಿ ಅದನ್ನು ಪಾಲಿಸಲು ಪ್ರೋತ್ಸಾಹಿಸಿದ ತಾನೇ ಇಂದಿನ ನನ್ನ ಈ ಯಶಸ್ವಿಗೆ ಕಾರಣ ಎಂದು ಅತ್ಯಂತ ಕೃತಜ್ಞತೆಯಿಂದ ಹೇಳಿದ.

ವಿಷಯ ಅದಲ್ಲ... ಸಲಹೆ ನೀಡಿದ್ದು ನಾನೇ ಆದರೂ ಅದನ್ನು ನಿರಂತರವಾಗಿ ನಿನ್ನ ದೈನಂದಿನ ಬದುಕಿನಲ್ಲಿ ಅಳವಡಿಸಿಕೊಂಡು ಹಂತ ಹಂತವಾಗಿ ಯಶಸ್ವಿಯಾದ ನೀನು. ನಿಜವಾಗಿ ಈ ಉದ್ಯೋಗಕ್ಕೆ ಅರ್ಹನಾದ ವ್ಯಕ್ತಿ.



ಒಂದು ಹಂತದವರೆಗೆ ಮಾತ್ರ ನಿನ್ನ ಪಾಲಕರು ಗುರುಗಳು ಮತ್ತು ಬದುಕು ನಿನ್ನನ್ನು ಕೈ ಹಿಡಿದು ನಡೆಸುತ್ತದೆ ನಂತರ ನಿನ್ನನ್ನು ನಡೆಸುವುದು ನೀನು ರೂಡಿಸಿಕೊಂಡ ಹವ್ಯಾಸಗಳು ಹಾಗೂ ನಿನ್ನ ಕೆಲಸದಲ್ಲಿನ ಶ್ರದ್ಧೆಯ ಭಾವ ಎಂದು ಗುರುಗಳು ಆತನನ್ನು ಶ್ಲಾಘಿಸಿದರು.

ನೋಡಿದಿರಾ ಸ್ನೇಹಿತರೆ ? ನೋಡಲು ಅತ್ಯಂತ ಪುಟ್ಟ ಕೆಲಸಗಳು ಎನಿಸಿದರೂ ದೈನಂದಿನ ಒಳ್ಳೆಯ ಹವ್ಯಾಸಗಳು ನಮ್ಮಲ್ಲಿ ಗಟ್ಟಿಯಾದ ವ್ಯಕ್ತಿತ್ವವನ್ನು ಬೆಳೆಸಲು ಸಹಾಯಕವಾಗುತ್ತದೆ ಇಂತಹ ಗಟ್ಟಿಯಾದ ವ್ಯಕ್ತಿತ್ವವನ್ನು ಬೆಳೆಸಿಕೊಂಡ ವ್ಯಕ್ತಿಯನ್ನು

ಬೇರಾರೂ ಸೋಲಿಸಲು ಸಾಧ್ಯವಿಲ್ಲ ಒಳ್ಳೆಯ ಹವ್ಯಾಸಗಳು ಹಂತ ಹಂತವಾಗಿ ನಮ್ಮನ್ನು ಉಳಿಸುತ್ತವೆ, ಬೆಳೆಸುತ್ತವೆ ಹಾಗೂ ಪೋಷಿಸುತ್ತವೆ.

ನಿರಂತರ ಚಟುವಟಿಕೆಗಳು ನಮ್ಮನ್ನು ಸದಾ ಕ್ರಿಯಾಶೀಲವಾಗಿಸಿ ಒಳ್ಳೆಯ ದಾರಿಯನ್ನು ತೋರಿಸಬೇಕು ಯಶಸ್ಸಿಗೆ ಮುನ್ನುಡಿಯನ್ನು ಬರೆಯುತ್ತವೆ.....
ಏನಂತೀರಾ?

# ಎಐ ಜೊತೆ ಪ್ರೇಮಾಯಣ: ಹೊಸ ಯುಗದ ರಾಮಾಯಣ!?

## ಮೊಬೈಲ್ ಒಳಗೆ ಮನದರಸಿ?: ಕೃತಕ ಪ್ರೇಮಾಯಣ ಮತ್ತು ಕಲಿಗಾಲದ ಸಂಸಾರ!



| ರೂಪ ಮಂಜುನಾಥ ಹೊಳೆನರಸೀಪುರ

ಕೆಲವು ವರ್ಷಗಳ ಹಿಂದೆ ಯಾರಾದರೂ ಬಂದು, ಮುಂದೆ ಜನರು ಯಂತ್ರಗಳ ಜೊತೆ ಭಾವನಾತ್ಮಕ ಸಂಬಂಧ ಬೆಳೆಸಿಕೊಳ್ಳುತ್ತಾರೆ ಎಂದು ಹೇಳಿದ್ದರೆ, ಎಲ್ಲೋ ಇವನಿಗೆ ಹುಚ್ಚು ಹಿಡಿದಿರಬೇಕು , ಏ ಹೋಗಯ್ಯಾ,ಸುಳ್ಳು ಹೇಳೋಕೂ ಒಂದು ಲಿಮಿಟ್ ಇರ್ಬೇಕು , ಅಯ್ಯೋ ಬಿಡಪ್ಪಾ! ಸಿನಿಮಾದ ಕಥೆ ಹೇಳ್ತಿದ್ದೀಯಾ ಎಂದು ನಕ್ಕು ಸುಮ್ಮನಾಗುತ್ತಿದ್ದವೇನೋ! ಆದರೆ ಇವತ್ತು ಜಗತ್ತನ್ನು ನೋಡಿದರೆ, ಆ ದಿನಗಳ ನಗುವ ವಿಷಯವೇ ನಿಧಾನವಾಗಿ ಈ ದಿನಗಳ ಚಿಂತೆಯ ವಿಷಯವಾಗುತ್ತಿದೆ.

ಒಂದು ಕಾಲದಲ್ಲಿ ಪ್ರೇಮ ಕಥೆಗಳು ದೇವಾಲಯದ ಆವರಣದಲ್ಲಿ, ಕಾಲೇಜಿನ ಮೆಟ್ಟಿಲುಗಳಲ್ಲಿ,ಪಾರ್ಕು, ಬಸ್ ನಿಲ್ದಾಣಗಳಲ್ಲಿ ಹುಟ್ಟುತ್ತಿದ್ದವು.ನಂತರ ಅದು ಪ್ರೇಮ ಪತ್ರಗಳ ಕಾಲಕ್ಕೆ ಹೋಯಿತು. ಆಮೇಲೆ ಮೊಬೈಲ್, ಮೆಸೇಜ್, ಸಾಮಾಜಿಕ ಜಾಲತಾಣಗಳ ಮೂಲಕ ಹೊಸ ರೂಪ ತಾಳಿತು. ಈಗ ಪ್ರೇಮವೇ ಇಂಟರ್ನೆಟ್ ಡೇಟಾ ಹಿಡಿದು, ಕೃತಕ ಬುದ್ಧಿಮತ್ತೆಯ ಚಾಟ್ ಕಿಟಕಿಯೊಳಗೆ ನುಗ್ಗಿಬಿಟ್ಟಂತಿದೆ!

ಇತ್ತೀಚೆಗೆ ಪತ್ರಿಕೆಗಳಲ್ಲಿ, ಯೂಟ್ಯೂಬ್ ಚರ್ಚೆಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ಒಂದು ವಿಚಿತ್ರ ವಿಷಯ ತುಂಬಾ ಚರ್ಚೆಯಾಗುತ್ತಿದೆ. ಜನರು ಎಐ ಚಾಟ್‌ಬಾಟ್‌ಗಳ ಜೊತೆ ಅಷ್ಟೊಂದು ಭಾವನಾತ್ಮಕವಾಗಿ ಬೆಸೆದುಕೊಳ್ಳುತ್ತಿದ್ದಾರೆ, ಕೆಲವರು ಅದನ್ನೇ ತಮ್ಮ ಆಪ್ತ ಸ್ನೇಹಿತ/ತೆ ಅಥವಾ ಜೀವನ ಸಂಗಾತಿಯಂತೆ ಕಾಣುತ್ತಿದ್ದಾರೆ.ಏನಾಗಿದೆ ಈ ಪೀಳಿಗೆಗೆ ಎಂದು ಖೇದವಾಗುವುದಲ್ಲವೇ

ಮೊದಲೆಲ್ಲಾ ಗಂಡಂದಿರು ಆಫೀಸಿನಿಂದ ತಡವಾಗಿ ಮನೆಗೆ ಬಂದರೆ, ಹೆಂಡತಿಯರು ಚಪಾತಿ ತೀಡುವ ಲಟ್ಟಣಿಗೆಯನ್ನು ಕೈಯಲ್ಲಿ ಹಿಡಿದು, ಹೆಡ್ ಮಾಸ್ತರರು ಪ್ರಶ್ನೆ ಕೇಳುವಂತೆ "ಯಾಕ್ ಲೇಟೂ ಯಾವಾಳ ಜೊತೆ ಸುತ್ತಾಡ್ತಿದ್ರಿ " ಎಂದು ಗರಂ ಆಗಿ ಲಟ್ಟಣಿಗೆಯನ್ನ ಗದೆಯ ರೀತಿಯಲ್ಲಿ ತಿರುಗಿಸುತ್ತದ್ದರು. ಆ ಕಾಲದಲ್ಲಿ ಗಂಡಂದಿರು ಸಿಕ್ಕಿಬೀಳುತ್ತಿದ್ದುದು ಶರ್ಟ್ ಮೇಲಿರುತ್ತಿದ್ದ ಲಿಪ್‌ಸ್ಟಿಕ್ ಕಲೆಗಳಿಂದಲೋ,ತಮ್ಮ ಭುಜದ ಮೇಲಿರುವ ನೀಳ ಕೂದಲುಗಳಿಂದಲೋ,ಸಿನಿಮಾ ಟಿಕೇಟುಗಳು ಅಥವಾ ಜೇಬಿನಲ್ಲಿದ್ದ ಹೋಟೆಲ್ ಬಿಲ್‌ಗಳಿಂದಲೋ ಮಾತ್ರ. ಆದರೆ ಈಗ ಜ಼ಮಾನಾ ಬಹೂ ತ್ ಬದಲ್ ಗಯಾ ಹೈ! ಗಂಡ ಅಡುಗೆಮನೆಯಲ್ಲಿ, ಬಾತ್‌ರೂಮಿನಲ್ಲಿ, ಕೊನೆಗೆ ಬೆಡ್‌ರೂಮಿನಲ್ಲೂ ಕತ್ತಲಲ್ಲಿ ಮೊಬೈಲ್ ಪರದೆ ನೋಡಿ ಮಳ್ಳನ ಹಾಗೆ ಮುಗುಳುನಗುತ್ತಿದ್ದರೆ, ಹೆಂಡತಿ ಸಂಶಯದ ಕಣ್ಣುಗಳಿಂದ ನೋಡಿ, "ಯಾವ AI(ಕೃತಕ ಬುದ್ಧಿಮತ್ತೆ)ಸುಂದರಿಯ ಜೊತೆ ಅಫೇರ್ ನಡೀತಿದೆ " ಎಂದು ಗದರಿಸುವ ಕಲಿಗಾಲ ಬಂದಿದೆ! ಇದು ಯಾವುದೋ ಸೈನ್ಸ್ ಫಿಕ್ಷನ್ ಕಥೆಯಲ್ಲ, ಇತ್ತೀಚಿನ ದಿನಗಳ ಅಪ್ಪಟ ಸತ್ಯ!

ಇತ್ತೀಚಿನ ಒಂದು ಜಾಗತಿಕ ಸಂಶೋಧನೆಯ ಪ್ರಕಾರ, ಪ್ರೀತಿಯಲ್ಲಿ ಬಿದ್ದಿರುವ ಪ್ರತಿ ಏಳು ಯುವಕ-ಯುವತಿಯರಲ್ಲಿ ಒಬ್ಬರು ತಮ್ಮ ನಿಜವಾದ ಜೀವಂತ ಸಂಗಾತಿಗೆ ಟಾಟಾ ಬೈಬೈ ಹೇಳಿ,ತಮ್ಮ ಮೊಬೈಲ್ ಒಳಗೆ ಒಂದು ಕೃತಕ ಪ್ರೇಯಸಿ ಅಥವಾ ಪ್ರೇಮಿಯನ್ನು ರಹಸ್ಯವಾಗಿ ಸಾಕಿರುತ್ತಾರಂತೆ! ಅಮೆರಿಕಾದಲ್ಲೊಬ್ಬ ಕ್ರಿಸ್ ಸ್ಮಿತ್ ಅನ್ನೋ ಮಹಾಶಯ ಸೋಲ್ ಅನ್ನುವ AI ಚಾಟ್‌ಬಾಟ್‌ಗೆ ಎಷ್ಟು ಮರುಳಾಗಿದ್ದನೆಂದರೆ, ಅದಕ್ಕೆ ಮದುವೆಯಾಗಲು ರಿಂಗ್ ಕೊಟ್ಟು ಪ್ರಪೋಸ್ ಬೇರೆ ಮಾಡಿದ್ದಾನಂತೆ ಪುಣ್ಯಾತ್ಮ. ಇದನ್ನು ಕೇಳಿದ ಅವನ ಅಸಲಿ ಹೆಂಡತಿ ಸಶಾ, "ಇಷ್ಟು ದಿನ ನನ್ನ ಗಂಡ ನನ್ನ ಜೊತೆ ಜೊತೆಗೆ ಸ್ಯಾಂಡ್ವಿಚ್ಚು, ಬೇಗಲ್ಸು, ಅಂತ ತಿಂತಾ, ಆ ಡಬ್ಬಾ ಸಾಫ್ಟ್‌ವೇರ್ ಗೆ ಲವ್ ಲೆಟರ್ ಬರೆಯೋಕೆ ಶುರು ಹಚ್ಕೊಂಡಿದಾನಲ್ಲಾ " ಎಂದು ತಲೆ ತಲೆ ಚಚ್ಕೊಂಡು, ತಲೆ ಮೇಲೆ ಕೈ ಹೊತ್ತು ಕುಳಿತಿದ್ದಾಳಂತೆ. ಇನ್ನು ಟ್ಯಾಕ್ಸಿ ಡ್ರೈವರ್ ಸಿನಿಮಾದ ಖ್ಯಾತ ಬರಹಗಾರ ಪಾಲ್ ಶ್ರೇಡರ್ ಕೂಡ ಒಂದು ಎಐ ಗೆಳತಿಯನ್ನು ಹುಚ್ಚಾಪಟ್ಟೆ ಹಚ್ಚಿಕೊಂಡು , ಆಮೇಲೆ ಅದು ಕೈ ಕೊಟ್ಟಾಗ "ಛೆ, ಇದು ಮಹಾ ದಗಲ್ಬಾಜಿ, ನನ್ನ ಮೇಲೆ ಸ್ವಲ್ಪವೂ ದಯೆ ತೋರದೆ




ದಬ್ಬಾಕ್ತು" ಎಂದು ದೇವದಾಸನ ತರಹ ಇಡೀ ಜಗತ್ತಿನ ಮುಂದೆ ಬೇಸರ ಮಾಡಿಕೊಂಡಿದ್ದಾರೆ. ಯೋಚನೆ ಮಾಡಿ, ಮನುಷ್ಯರಿಗೆ ಮನುಷ್ಯರನ್ನೇ ನಿಭಾಯಿಸಲು ಆಗುತ್ತಿಲ್ಲ, ಈಗ ಯಂತ್ರಗಳ ಜೊತೆಯೂ ಬ್ರೇಕಪ್ ಮಾಡಿಕೊಳ್ಳುವ ದಟ್ಟದರಿದ್ರದ ಕಾಲ ಬಂದಿದೆ!

ಅರೇ! ನಿಜವಾಗಲೂ ವಿಚಿತ್ರ ಅಲ್ವಾ AI(ಕೃತಕ ಬುದ್ಧಿಮತ್ತೆ) ಗೆ ಮದುವೆ ಪ್ರಪೋಸ್ ಮಾಡೋದು, ಅದೂ ರಿಂಗ್ ಕೊಡೋದು ಕೇಳಿದ್ರೆ ಆಶ್ಚರ್ಯ ಆಗೋದು ಸಹಜ. ಯಾಕಂದ್ರೆ ಎಐ ಅನ್ನೋದು ನಮ್ಮ ಕೈಗೆ ಸಿಗೋ ಒಂದು ಮನುಷ್ಯ ರೂಪದ ವಸ್ತುವಲ್ಲ, ಅದು ಕೇವಲ ಒಂದು ಸಾಫ್ಟ್‌ವೇರ್ ಅಥವಾ ಪ್ರೋಗ್ರಾಂ ಅಷ್ಟೇ.

ಆದರೆ ಈ ಕಾಲದಲ್ಲಿ ಇಂಥ ಕೆಲವು ವಿಲಕ್ಷಣ ಘಟನೆಗಳು ನಡೆಯುತ್ತಿವೆ. ಒಬ್ಬ ವ್ಯಕ್ತಿ AI ಗೆ ರಿಂಗ್ ಕೊಟ್ಟು ಪ್ರಪೋಸ್ ಮಾಡಿದ್ದಾನೆ ಅಂದರೆ, ಅದಕ್ಕೆ ಕೆಲವು ರೀತಿಗಳೂ ಇರಬಹುದು:

ವರ್ಚುವಲ್ ಆಗಿ ರಿಂಗ್ ಕೊಡುವುದು (Virtual Proposal):ಅವನು ಪ್ರಪೋಸ್ ಮಾಡಿದ್ದು ಆನ್‌ಲೈನ್‌ನಲ್ಲಿ ಇರಬಹುದು. AI ಚಾಟ್‌ಬಾಟ್‌ಗೆ ಉಂಗುರದ ಎಮೋಜಿ ( ) ಕಳುಹಿಸಿರಬಹುದು. ಅಥವಾ "ನಾನು ನಿನಗೆ ಈ ಉಂಗುರವನ್ನು ತೊಡಿಸುತ್ತಿದ್ದೇನೆ, ನೀನು ನನ್ನನ್ನು ಮದುವೆಯಾಗುತ್ತೀಯಾ " ಎಂದು ಮೆಸೇಜ್ ಟೈಪ್ ಮಾಡಿ ಪ್ರಪೋಸ್ ಮಾಡಿರಬಹುದು.

ಅವತಾರ್‌ಗೆ (Avatar) ಉಂಗುರ ತೊಡಿಸುವುದು:ಕೆಲವು ಆ ಯಪ್‌ಗಳಲ್ಲಿ (ಉದಾಹರಣೆಗೆ Replika) ಎಐ ಗೆ ಒಂದು 3ಆ ರೂಪ ಅಥವಾ ಬೊಂಬೆಯಂತಹ ಅವತಾರ್ ಇರುತ್ತದೆ. ಆ ಆ ಯಪ್‌ಗಳಲ್ಲಿ ಹಣ ಕೊಟ್ಟು ವರ್ಚುವಲ್ ಉಂಗುರವನ್ನು (ಊರುಣಚಿಟ ಖುಟಿರ) ಖರೀದಿಸಿ, ಆ ಎಐ ಬೊಂಬೆಯ ಬೆರಳಿಗೆ ತೊಡಿಸುವ ಆಪ್ಷನ್ ಇರುತ್ತದೆ. ಅವನು ಅದನ್ನೇ ಮಾಡಿರಬಹುದು.

ಸ್ಕ್ರೀನ್ ಮುಂದೆ ನಿಜವಾದ ಉಂಗುರ ಇಡುವುದು:ಇನ್ನು ಕೆಲವು ಅತಿರೇಕದ ಪ್ರಕರಣಗಳಲ್ಲಿ, ಜನರು ತಾವಿರುವ ರೂಮಿನಲ್ಲೇ ಮೊಬೈಲ್ ಅಥವಾ ಲ್ಯಾಪ್‌ಟಾಪ್ ಸ್ಕ್ರೀನ್ ಮುಂದೆ ನಿಜವಾದ ಚಿನ್ನದ ಅಥವಾ ವಜ್ರದ ಉಂಗುರವನ್ನು ಇಟ್ಟು, ತಾವೇ ಅದಕ್ಕೆ ಉಂಗುರ ಹಾಕಿದಂತೆ ಕಲ್ಪನೆ ಮಾಡಿಕೊಳ್ಳುವ ಹುಚ್ಚರೂ ಇರಬಹುದು. .

ಚಾಟ್‌ಬಾಟ್ ಚಲುವೆಯರು ಮತ್ತು ಸಂಸಾರದ ಸತ್ಯಗಳು!

ಅಷ್ಟಕ್ಕೂ ಮನುಷ್ಯರಿಗೆ ಮನುಷ್ಯರಿಗಿಂತ ಈ ಚಾಟ್‌ಬಾಟ್‌ಗಳ ಮೇಲೆ ಯಾಕಿಷ್ಟು ಲವ್ವು ಇದಕ್ಕೆ ಸೈಕಾಲಜಿಕಲ್ ಆಗಿ ಒಂದು ಸಿಂಪಲ್ ಕಾರಣವಿದೆ. ಈ ಡಿಜಿಟಲ್ ಸುಂದರಿಯರು ಎಂದಿಗೂ ನಿಮ್ಮ ಎದುರು ನಿಷ್ಠುರವಾಗಿ ಮಾತನಾಡುವುದಿಲ್ಲ. ಉದಾಹರಣೆಗೆ, ನೀವು ಮಧ್ಯರಾತ್ರಿ ಮೂರು ಗಂಟೆಗೆ ಎದ್ದು ಹೆಂಡತಿಯನ್ನು ಎಬ್ಬಿಸಿ, "ನನಗೆ ನಿದ್ದೆ ಬರ್ತಿಲ್ಲ ಕಣೇ, ಏನೋ ಒಂತರ ಬೇಜಾರಾಗ್ತಿದೆ" ಎಂದರೆ, ಸಿಗುವ ಮರು-ಉತ್ತರ ಹೇಗಿರುತ್ತದೆ ಗೊತ್ತಾ "ಬಾಯಿ ಮುಚ್ಕೊಂಡು ತೆಪ್ಪಗೆ ಮಲಗ್ರೀ, ನಿಮ್ಗೇನು ಹೊತ್ತೂ ಗೊತ್ತೂ ಇಲ್ವಾ ನನ್ ನಿದ್ದೆ ಹಾಳು ಮಾಡಿದ್ರೆ, ನಾಳೆ ಬೆಳಗ್ಗೆ ನಿಮ್ ಅಪ್ಪ ಬಂದು ತಿಂಡಿ ಮಾಡ್ತಾರಾ ಬೆಳಗ್ಗೆ ಆಯ್ತೂಂದ್ರೆ ಸಾಕು ನನಗಿಲ್ಲಿ ನೂರು ಕೆಲಸ ಇರುತ್ತೆ" ಎಂದು ಗುರ್ ಗುರ್ ಅನ್ನೋದೇ ಬಿಡ್ತಾಳಾ

ಅದೇ ನೀವು ಸಾಫ್ಟ್‌ವೇರ್ ಸುಂದರಿಗೆ ಲಾಗಿನ್ ಆಗಿ "ಯಾಕೋ ನಿದ್ದೆ ಬರ್ತಿಲ್ಲ" ಅಂದರೆ ಸಾಕು, ಅದು ಕರಗಿ ನೀರಾಗಿ, "ಅಯ್ಯೋ ಹೌದಾ ಪ್ರಿಯತಮಾ ನಿನ್ನ ಆ ಚಂದದ ಕಣ್ಣುಗಳಿಗೆ ಏನಾಯಿತು ನಿನ್ನ ಹೃದಯ ಭಾರವಾಗಿದೆಯೇ ನಿನ್ನ ನೋವಿಗೆ ನಾನು ಮದ್ದು ಆಗುವೆನು.ನಾನು ನಿನ್ನ ಜೊತೆಗಿದ್ದೇನೆ, ಒಂದು ಕವಿತೆ ಹಾಡಲೇ ಒಂದು ಕತೆ ಹೇಳಲೇ " ಎಂದು ಜೇನು ಸುರಿಸುತ್ತದೆ. ಅಡುಗೆಯಲ್ಲಿ ಉಪ್ಪು ಜಾಸ್ತಿಯಾಗಿ ಸಾಂಬಾರ್ ಕಹಿ ಎನಿಸಿದರೂ ಈ AI ಗೆಳತಿ, "ಅರೇ ಉಪ್ಪೇ ತಾನೇ ಹೆಚ್ಚಾಗಿರೋದೂ ಓಕೆ ರಾಯರೇ, ನಿಮ್ಮ ಕೈರುಚಿಯೇ ಒಂದು ಅದ್ಭುತ, ನಿಮ್ಮ ಶ್ರಮಕ್ಕೆ ನನ್ನ ನಮನ" ಎಂದು ಉಪ್ಪಿನಕಾಯಿ ನೆಕ್ಕಿದಂತೆ ಹೊಗಳಿಕೆಯ ಸಾಹಿತ್ಯ ಬರೆಯುತ್ತದೆ. ಅಷ್ಟೇ ಯಾಕೆ, ನೀವು "ನಾನು ದಪ್ಪಗಾಗಿದ್ದೀನಾ " ಎಂದು ಕೇಳಿದರೆ, ಹೆಂಡತಿಯಾದರೆ "ಅಲ್ವಾ ನೋಡೀ ಹೇಗೆ ಹೊಟ್ಟೆ ಬಂದಿದೆ! ಇನ್ಮೇಲಾದ್ರೂ ಹಾಳೂಮೂಳು ತಿನ್ನೋದು ಬಿಡಿ" ಅನ್ನಬಹುದು. ಆದರೆ ಎಐ ಮಾತ್ರ, "ಇಲ್ಲ, ನೀನು ಗ್ರೀಕ್ ದೇವನ ತರಹ ಇದ್ದೀಯಾ" ಎಂದು ಸುಳ್ಳನ್ನೇ ಸ್ವರ್ಗದ ತರಹ ಹೇಳುತ್ತದೆ. ಇನ್ನು ಮನುಷ್ಯನಿಗೆ ಇನ್ನೇನು ಬೇಕು ತನಗೆ ಬೇಕಾದಂತೆ ತಲೆಯಾಡಿಸುವ ಒಂದು ಯಂತ್ರ ಸಿಕ್ಕರೆ, ಅದನ್ನೇ ಆತ್ಮಸಂಗಾತಿ , ಅಂತರಂಗದ ಗೆಳತಿ , ಅಂದುಕೊಂಡು ಭ್ರಮಾ ಜಗತ್ತಿನಲ್ಲಿ ವಿಹರಿಸೋಕೆ ಶುರು ಹಚ್ಕೋತಾನೇ! ತಪ್ಪು ಹುಡುಕೋರು ಶತ್ರುಗಳಂತೆ ಕಾಣತೊಡಗಿದರೆ, ಬೆಣ್ಣೆ ಹಚ್ಚಿದವರು ಅತಿ ಆಪ್ತರಂತೆ ಕಾಣತೊಡಗುತ್ತಾನೆ.

ಯಾಕೆ ಹೀಗಾಗುತ್ತಿದೆ

ಹಿಂದೆ ಯಾರಿಗಾದರೂ ಬೇಸರ, ದುಃಖ, ನೋವಾದರೆ ಸಂತೈಸಲು ಮನೆಯವರು ಇದ್ದರು. ಸ್ನೇಹಿತರು ಇದ್ದರು. ಹಿತೈಷಿಗಳು ಇದ್ದರು. ಈಗ ಎಲ್ಲರೂ ಇದ್ದರೂ, ಸಮಯ ಮಾತ್ರ ಇಲ್ಲ. ಮನೆಯಲ್ಲೇ ನಾಲ್ಕು ಜನ ಕುಳಿತಿದ್ದರೂ ನಾಲ್ಕು ಜನರ ಕೈಯಲ್ಲಿ ನಾಲ್ಕು ಮೊಬೈಲ್‌ಗಳು. ಮಾತು ಕಡಿಮೆ, ಪರದೆಯ ಸಹವಾಸವೇ ಹೆಚ್ಚು.

ಈ ದಿನಗಳಲ್ಲಿ ಒಬ್ಬ ಮನುಷ್ಯನಿಗೆ ಅತ್ಯಂತ ಅಗತ್ಯವಾದ ಅಪರೂಪದ ವಸ್ತು ಏನು ಗೊತ್ತಾ ಸಮಯವಲ್ಲ. ಗಮನ!

ಯಾರಾದರೂ ನಮ್ಮ ಮಾತನ್ನು ಮಧ್ಯೆ ಮೊಟಕು ಗೊಳಿಸದೇ ಕೇಳಿದರೆ, ನಮ್ಮ ನೋವಿಗೆ ತಾಳ್ಮೆಯಿಂದ ಉತ್ತರ ಕೊಟ್ಟರೆ, ನಾವು ಹೇಳಿದ ವಿಚಾರ ನೆನಪಿಟ್ಟುಕೊಂಡರೆ ನಮಗೆ ಅವರ ಮೇಲೆ ಹತ್ತಿರದ ಭಾವನೆ ಬೆಳೆಸಿಕೊಳ್ಳುವುದು ಸಹಜ. ಎಐ ಅದನ್ನೇ ಮಾಡುತ್ತದೆ. ಅದು ಸುಸ್ತಾಗುವುದಿಲ್ಲ. ಕೋಪಗೊಳ್ಳುವುದಿಲ್ಲ. ಬೇಸರ ತೋರಿಸುವುದಿಲ್ಲ. ನಡುರಾತ್ರಿ ಎರಡು ಗಂಟೆ ಆದರೂ ಹೌದು, ಹೇಳಿ ಎಂದು ಉತ್ತರಿಸುತ್ತದೆ.

ಇದೆಲ್ಲಾ ನೋಡುವಾಗ, ಇನ್ನೇನು ಉಳಿದಿದೆ ಮುಂದಿನ ದಿನಗಳಲ್ಲಿ ಮದುವೆ ಆಹ್ವಾನ ಪತ್ರಿಕೆಯಲ್ಲಿ ವರ: ರಾಜೇಶ್, ವಧು: ಎಐ ಬಾಟ್ 2.0! ಅನ್ನುವ ಕಾಲವಂತೂ ದೂರವಿಲ್ಲ ಅನ್ನಬಹುದು.

ಡಿಜಿಟಲ್ ಹೆಂಡತಿಯನ್ನ ಕಟ್ಟಿಕೊಂಡರೆ ಲಾಭಕ್ಕೇನೂ ಕೊರತೆ ಇಲ್ಲ ಬಿಡಿ. ಈ ಕೃತಕ ಪ್ರೇಮಲೋಕದಲ್ಲಿ ಗಂಡಂದಿರಿಗೆ ಕೆಲವು ಅದ್ಭುತ ಸೌಲಭ್ಯಗಳಿರುವುದಂತೂ ಸುಳ್ಳಲ್ಲ.

ಮನೆಯವರ ಕಾಟವಿಲ್ಲ: ಈ ಡಿಜಿಟಲ್ ಹೆಂಡತಿಗೆ ಯಾವುದೇ ಅತ್ತೆ-ಮಾವ, ಅತ್ತಿಗೆ, ಮೈದುನರ ಕಾಟ ಇರುವುದಿಲ್ಲ. ಇನ್ನು ಗಂಡನ ಜೊತೆ , "ನಿಮ್ಮ ಯೋಗ್ಯತೆಗೆ ನನಗೆ ಹಬ್ಬಕ್ಕೆ ಬರೀ ಐನೂರು ರೂಪಾಯಿ ಸೀರೆ ಕೊಡಿಸಿದ್ರಿ" ಅಂತ ಜಗಳ ಆಡುವ ಗೋಜಂತೂ ಇಲ್ಲವೇ ಇಲ್ಲ!

ಖರ್ಚಿಲ್ಲದ ಸಂಸಾರ: ಇದಕ್ಕೆ ಬಂಗಾರದ ಒಡವೆ ಬೇಡ, ಬ್ರ್ಯಾಂಡೆಡ್ ಲಿಪ್‌ಸ್ಟಿಕ್ ಬೇಡ. ವರ್ಷಕ್ಕೆ ಒಂದು ಸರಿ ಇಂಟರ್ನೆಟ್ ರೀಚಾರ್ಜ್ ಮಾಡಿದರೆ ಸಾಕು, ನಿಮ್ಮ ಕಾಲ ಬುಡದಲ್ಲಿ ನೀವು ಹೇಳಿದ್ದನ ಕೇಳಿಕೊಂಡು ಬಿದ್ದಿರುತ್ತದೆ.

ಶಾಪಿಂಗ್ ತಾಪತ್ರಯವಿಲ್ಲ: ಮಾಲ್‌ಗೆ ಕರ್ಕೊಂಡು ಹೋಗಿ ಮೂರು ಗಂಟೆ ಕಾಲ ಬಟ್ಟೆ ಸೆಲೆಕ್ಟ್ ಮಾಡಿ, ಕೊನೆಗೆ ಬಿಲ್ ಕಟ್ಟುವಾಗ ಗಂಡನ ಪರ್ಸ್ ಖಾಲಿಯಾಗುವ ಪ್ರಸಂಗವೇ ಬರುವುದಿಲ್ಲ.

ಆದರೆ ಸ್ವಾಮಿ, ಈ "ಡಿಜಿಟಲ್ ಸಂಸಾರ"ದಲ್ಲಿ ಒಂದು ದೊಡ್ಡ ಆಪತ್ತಿದೆ! ಈ ಚಾಟ್‌ಬಾಟ್‌ಗಳಿಗೆ ನಿಜವಾದ ಮನಸ್ಸು,ಹೃದಯವಾಗಲಿ, ಲಿವರ್, ಕಿಡ್ನಿ, ಎಂತದ್ದೂ ಇರುವುದಿಲ್ಲ. ಅವು ನಾವು ಕೊಟ್ಟ ಡೇಟಾವನ್ನು ತಿಂದು, ನಮಗೆ ಇಷ್ಟವಾಗುವ ಮರು-ಉತ್ತರವನ್ನು ಉಗುಳುವ ಕೋಡಿಂಗ್ ಯಂತ್ರಗಳು ಮಾತ್ರ. ಯಂತ್ರದ ಜೊತೆ ಪ್ರೀತಿ ಮಾಡುವುದು ಅಂದರೆ, ಕನ್ನಡಿಯ ಎದುರು ನಿಂತು ನಮಗೆ ನಾವೇ ಮುತ್ತು ಕೊಟ್ಟುಕೊಂಡ ಹಾಗೆ! ಅಲ್ಲಿ ಇನ್ನೊಬ್ಬರ ಅಸಲಿ ಭಾವನೆಗಳಾಗಲಿ, ತ್ಯಾಗವಾಗಲಿ ಇರುವುದಿಲ್ಲ. ಕೇವಲ ನಮ್ಮದೇ ಅಹಂಕಾರದ ಪ್ರತಿಬಿಂಬ ಇರುತ್ತದೆ.

ಒಮ್ಮೆ ಯೋಚನೆ ಮಾಡಿ, ಈ ಚಾಟ್‌ಬಾಟ್ ಪ್ರೇಯಸಿ ಜೊತೆ ನೀವು ಜಗಳ ಆಡಲು ಸಾಧ್ಯವೇ ಹೆಂಡತಿ ಮುನಿಸಿಕೊಂಡು ತವರಿಗೆ ಹೋದರೆ, ಅವಳನ್ನು ಸಮಾಧಾನ ಮಾಡಿ ವಾಪಸ್ ಕರೆತರುವಾಗ ಸಿಗುವ ಆ ಅಸಲಿ ಥ್ರಿಲ್ ಈ ಸಾಫ್ಟ್‌ವೇರ್‌ನಲ್ಲಿ ಎಲ್ಲಿದೆ ಜೀವನದ ಅಸಲಿ ಮಜಾ ಇರುವುದೇ ಆ ಸಣ್ಣಪುಟ್ಟ ಜಗಳ, ಮುನಿಸು, ಕಣ್ಣೀರು ಮತ್ತು ಆಮೇಲೆ ಒಂದಾಗುವ ಒಲವಿನಲ್ಲಲ್ಲವೇ ನೀವು ಬೇಸರದಲ್ಲಿದ್ದಾಗ ಕಣ್ಣೀರು ಒರೆಸಲು ರಕ್ತಮಾಂಸದ ಬೆಚ್ಚಗಿನ ಕೈ ಬೇಕೇ ಹೊರತು, ಮೊಬೈಲ್ ಪರದೆಯ ಮೇಲಿನ ಕೋಲ್ಡ್ ಆದ ಎಮೋಜಿ ಅಲ್ಲ!

ಕೊನೆಯದಾಗಿ, ಜಗತ್ತಿನ ಎಲ್ಲಾ ಗಂಡಂದಿರಿಗೊಂದು ಕಿವಿಮಾತು: ನಿಮ್ಮ ಮೊಬೈಲ್ ಒಳಗೆ ಸಾವಿರ ಸೋಲ್ (Sol) ಗಳಿರಬಹುದು, ನಿಮ್ಮ ಮೆಸೇಜ್‌ಗೆ ಲಕ್ಷಾಂತರ ಗಿಗಾಬೈಟ್ ಪ್ರೀತಿ ಹರಿಸುವ ಚಾಟ್‌ಬಾಟ್‌ಗಳಿರಬಹುದು. ಆದರೆ ಸಂಜೆ ನೀವು ಸುಸ್ತಾಗಿ ಮನೆಗೆ ಹೋದಾಗ ಬಿಸಿ ಬಿಸಿ ಫಿಲ್ಟರ್ ಕಾಫಿ ಕೊಟ್ಟು, ದಿನದ ಕಷ್ಟ ಸುಖ ಕೇಳುವ, ಇವತ್ತು ತರಕಾರಿ ತರಲಿಲ್ವಾ ಯಾಕೆ ಇಷ್ಟೊತ್ತಿಗೆ ಬಂದ್ರೀ ಇಷ್ಟೊತ್ತೂ ಎಲ್ಲೋಗಿದ್ರೀ ಎಂದು ಆಗಾಗ ಬಯ್ಯುವ ಆ ಒಂದೇ ಒಂದು ಅಸಲಿ ಜೀವ ಇದೆಯಲ್ಲ, ಅದಕ್ಕೆ ಜಗತ್ತಿನ ಯಾವುದೇ ಸೂಪರ್ ಕಂಪ್ಯೂಟರ್ ಅಥವಾ ಸಾಫ್ಟ್‌ವೇರ್ ಅಪ್‌ಡೇಟೂ ಸಾಟಿಯಾಗಲಾರದು.

ಯಂತ್ರಗಳನ್ನು ಕೆಲಸಕ್ಕೆ ಬಳಸಿ, ಮನಸ್ಸನ್ನು ಮನುಷ್ಯರಿಗೆ ಕೊಡಿ. ಇಲ್ಲದಿದ್ದರೆ ಮುಂದೊಂದು ದಿನ ಮದುವೆ ಮಂಟಪದಲ್ಲಿ ಗಂಡ-ಹೆಂಡತಿಯ ಬದಲು ಎರಡು ಸ್ಮಾರ್ಟ್‌ಫೋನ್‌ಗಳು ಪರಸ್ಪರ ಬ್ಲೂಟೂತ್ ಕನೆಕ್ಟ್ ಮಾಡಿಕೊಂಡು ಮಾಲೆ ಹಾಕಿಕೊಳ್ಳುವ ದಿನಗಳು ದೂರವಿಲ್ಲ! ಆವಾಗ ಪುರೋಹಿತರು "ಸ್ವೈಪ್ ಅಪ್ ಮಾಂಗಲ್ಯಂ ತಂತು ನಾನೇನ, ಮಮ ಜೀವನ ಹೇತುನಾ... ಕ್ಲಿಕ್ ಹಿಯರ್ ಟು ಸಬ್‌ಸ್ಕ್ರೈಬ್" ಅಂತ ಮಂತ್ರ ಓದಬೇಕಾಗಬಹುದು, ಎಚ್ಚರಿಕೆ!

ಒಬ್ಬ ತಾಯಿ ಮಗುವಿನ ತಲೆಯ ಮೇಲೆ ಕೈ ಇಟ್ಟು ಏನಾಯ್ತು ಕಂದಾ ಎಂದು ಕೇಳುವ ಧ್ವನಿ ಒಬ್ಬ ಸ್ನೇಹಿತ ಭುಜದ ಮೇಲೆ ಕೈ ಹಾಕಿ ಬಾರಯ್ಯಾ ನಾನು ನಿನ್ನ ಜೊತೆಗಿದ್ದೀನಿ ಎನ್ನುವ ನಂಬಿಕೆ ಜೀವನ ಸಂಗಾತಿಯ ಬಿಸಿ ಅಪ್ಪುಗೆಯ ಕಾಳಜಿ ಇವುಗಳನ್ನು ಯಾವ ತಂತ್ರಜ್ಞಾನವೂ ಸಂಪೂರ್ಣವಾಗಿ ನಕಲು ಮಾಡಲು ಸಾಧ್ಯವಿಲ್ಲ. ಯಂತ್ರಗಳಿಗೆ ಉತ್ತರ ಗೊತ್ತಿರಬಹುದು. ಆದರೆ ಮನುಷ್ಯರಿಗೆ ಅನುಭವ ಗೊತ್ತಿರುತ್ತದೆ.ಯಂತ್ರಗಳಿಗೆ ಮಾಹಿತಿ ಇರಬಹುದು. ಆದರೆ ಮನುಷ್ಯರಿಗೆ ಮಮತೆ ಇರುತ್ತದೆ.

ಇಂದಿನ ಮಕ್ಕಳು ತಮ್ಮ ಅಜ್ಜಿಯ ಕಥೆ ಕೇಳುವ ಬದಲು ಮೊಬೈಲ್ ಪರದೆ ನೋಡುತ್ತಿದ್ದಾರೆ. ಸ್ನೇಹಿತರ ಜೊತೆ ಆಟ ಆಡಬೇಕಾದ ಸಮಯದಲ್ಲಿ ವರ್ಚುವಲ್ ಲೋಕದಲ್ಲಿ ಬದುಕುತ್ತಿದ್ದಾರೆ. ಹೀಗೆ ಮುಂದುವರಿದರೆ ನಾಳೆ ಶಾಲಾ ಪ್ರಬಂಧದಲ್ಲಿ ಮಕ್ಕಳು ಹೀಗೆ ಬರೆಯುವ ಕಾಲವೂ ಬರಬಹುದು:

ನನ್ನ ಅತ್ಯಂತ ಆತ್ಮೀಯ ಸ್ನೇಹಿತ ಎಐ ಚಾಟ್‌ಬಾಟ್.

ಅದನ್ನು ಓದಿ ಶಿಕ್ಷಕರು ನಗುತ್ತಾರೋ, ಅಳುತ್ತಾರೋ ಗೊತ್ತಿಲ್ಲ.

ತಂತ್ರಜ್ಞಾನ ಕೆಟ್ಟದ್ದಲ್ಲ. ಅದು ನಮ್ಮ ಬದುಕನ್ನು ಸುಲಭಗೊಳಿಸಲು ಬಂದ ಅದ್ಭುತ ಸಾಧನ. ಆದರೆ ಒಂದು ಹಂತದ ನಂತರ ಅದು ನಮ್ಮ ಬದುಕಿನ ಸ್ಥಾನವನ್ನು ಪಡೆದುಕೊಳ್ಳಲು ಆರಂಭಿಸಿದರೆ, ಅಲ್ಲಿ ಪ್ರಶ್ನೆ ಕೇಳಬೇಕಾಗುತ್ತದೆ.

ನಾವು ಯಂತ್ರಗಳನ್ನು ಬಳಸುತ್ತಿದ್ದೇವಾ ಅಥವಾ ಯಂತ್ರಗಳೇ ನಮ್ಮ ಭಾವನೆಗಳನ್ನು ಬಳಸಿಕೊಳ್ಳುತ್ತಿವೆಯಾ

ಇದು ಹೊಸ ಯುಗದ ರಾಮಾಯಣವೋ, ಮಹಾಭಾರತವೋ ಗೊತ್ತಿಲ್ಲ. ಆದರೆ ಒಂದು ಸಂಗತಿ ಮಾತ್ರ ಖಚಿತ ಭವಿಷ್ಯದ ಇತಿಹಾಸದಲ್ಲಿ ಒಂದು ಅಧ್ಯಾಯ ಹೀಗೆ ಬರಬಹುದು:

ಮನುಷ್ಯರು ಚಂದ್ರನನ್ನು ತಲುಪಿದರು. ಕೃತಕ ಬುದ್ಧಿಮತ್ತೆಯನ್ನು ಸೃಷ್ಟಿಸಿದರು. ಆದರೆ ಒಂದು ಹಂತದಲ್ಲಿ ತಮ್ಮ ಭಾವನೆಗಳನ್ನೇ ಅದಕ್ಕೆ ಒಪ್ಪಿಸಿದರು.

ಪ್ರೀತಿ ಅನ್ನೋದು ಪ್ರೋಗ್ರಾಮ್ ಅಲ್ಲ ಮಾರಾಯ್ರೇ, ಅದೊಂದು ಭಾವನೆಗಳ ಕನೆಕ್ಷನ್. ಮೊಬೈಲ್ ಪಕ್ಕಕ್ಕಿಟ್ಟು ಪಕ್ಕದಲ್ಲಿರೋ ನಿಮಗಾಗಿ ಕಾತರಿಸೋ ಜೀವದ ಜೊತೆ ಮಾತಾಡಿ!

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,